Swabhimani Sahakari

Pages : 28 / 12₹

Volume - 17
Issue - 04
April - 2020

ಸ್ವಾಭಿಮಾನಿ ಸಹಕಾರಿ

ಸೌಹಾರ್ದ ಸಹಕಾರಿ ಚಳವಳಿಯ
ಅಭಿವೃದ್ಧಿಗೆ ಮೀಸಲಾಗಿರುವ ಏಕೈಕ ಮಾಸಪತ್ರಿಕೆ

ಸ್ವಾಯತ್ತತೆ
ಸ್ವಯಂ ಆಡಳಿತ
ಸ್ವಯಂ ನಿಯಂತ್ರಣ
ನಮ್ಮ ಧ್ಯೇಯ

ಲಾಕ್‌ಡೌನ್ ಆದೇಶವನ್ನು ಕಟ್ಟುನಿಟ್ಟಾಗಿ ಪಾಲಿಸುವಂತೆ
ಜನರಲ್ಲಿ ಕೈ ಮುಗಿದು ಮನವಿ ಮಾಡುವೆ.
–ಪ್ರಧಾನಿ ನರೇಂದ್ರ ಮೋದಿ



ಪ್ರಧಾನಿ ಮೋದಿ ಅವರ ಮಾತಿನಂತೆ ಜನರು
ಕಟ್ಟುನಿಟ್ಟಾಗಿ ಕರ್ಫ್ಯೂ ಪಾಲನೆ ಮಾಡಬೇಕು.
–ಮುಖ್ಯಮಂತ್ರಿ ಬಿ.ಎಸ್ ಯಡಿಯೂರಪ್ಪ

ಮಾರಕ ಕೊರೊನಾ ವೈರಸ್ ನಮ್ಮ ದೇಶವೂ ಸೇರಿದಂತೆ, ಒಟ್ಟು 195 ರಾಷ್ಟ್ರಗಳಿಗೆ ಹರಡಿದೆ. ದಿನದಿಂದ ದಿನಕ್ಕೆ ಸಾವಿನ ಸಂಖ್ಯೆ ಕೂಡ ಏರಿಕೆಯಾಗುತ್ತಿದೆ. ಪ್ರಧಾನ ಮಂತ್ರಿ ನರೇಂದ್ರ ಮೋದಿ ಅವರು ದೇಶಾದ್ಯಂತ ಏಪ್ರಿಲ್ 14ರ ವರೆಗೆ ಲಾಕ್‌ಡೌನ್ ಘೋಷಿಸಿದ್ದಾರೆ.

ರಾಷ್ಟ್ರದ ಈ ಸಂಕಷ್ಟದ ಸಮಯದಲ್ಲಿ ಎಲ್ಲ ಸಹಕಾರಿಗಳು ಮುಖ್ಯಮಂತ್ರಿಗಳ ಪರಿಹಾರ ನಿಧಿಗೆ ಉದಾರ ಕಾಣಿಕೆ ನೀಡೋಣ

ಸೌಹಾರ್ದ ಸಹಕಾರಿಗಳ
ಸಂಖ್ಯೆ : 4966

ಇ–ಸ್ಟಾಂಪಿಂಗ್
ಕೇಂದ್ರಗಳ ಸಂಖ್ಯೆ : 1331

ಏಪ್ರಿಲ್ 2
ರಾಮ ನವಮಿ

ಏಪ್ರಿಲ್ 10
ಶುಭ ಶುಕ್ರವಾರ

ಏಪ್ರಿಲ್ 14
ಅಂಬೇಡ್ಕರ್ ಜಯಂತಿ

ಏಪ್ರಿಲ್ 26
ಬಸವ ಜಯಂತಿ

ಶುಭಾಶಯಗಳು

ಸಂಖ್ಯಾತ್ಮಕ ಬೆಳವಣಿಗೆಗಿಂತ ಗುಣಮಟ್ಟದ ಬೆಳವಣಿಗೆಗೆ ಪ್ರಥಮ ಆದ್ಯತೆ

ಶ್ರೀ ಬಿ.ಹೆಚ್. ಕೃಷ್ಣಾರೆಡ್ಡಿ

> ರಾಜ್ಯದಲ್ಲಿ ಸೌಹಾರ್ದ ಸಹಕಾರಿಗಳ ಸಂಖ್ಯೆ ಈಗ 4966. ಕಳೆದ 20 ವರ್ಷಗಳ ಸೌಹಾರ್ದ ಸಹಕಾರಿ ಕ್ಷೇತ್ರದ ಪಯಣದಲ್ಲಿ ಅನೇಕ ಏರು ಪೇರುಗಳನ್ನು ಅನುಭವಿಸುತ್ತ ಈ ಹಂತಕ್ಕೆ ಬಂದಿದ್ದೇವೆ. ಸೌಹಾರ್ದ ಸಹಕಾರಿ ಕಾಯ್ದೆಯ ಆಶಯಕ್ಕೆ ಅನುಗುಣವಾಗಿ ರಾಜ್ಯದ ಸೌಹಾರ್ದ ಸಹಕಾರಿಗಳು ಉತ್ತಮವಾಗಿ ಬೆಳೆಯುತ್ತಿವೆ.

ಆತ್ಮೀಯ ಸಹಕಾರಿ ಬಂಧುಗಳೆ,

ನೂತನ ಶಾರ್ವರಿ ಸಂವತ್ಸರದಲ್ಲಿ ಎಲ್ಲರಿಗೂ ಶುಭ ಹಾರೈಸುತ್ತೇನೆ. ವಿಶೇಷವಾಗಿ ಈ ಮಾಹೆಯಲ್ಲಿ ಆಚರಿಸಲ್ಪಡುತ್ತಿರುವ ಶ್ರೀರಾಮನವಮಿಯ, ಮಹಾವೀರ ಜಯಂತಿಯ, ಅಕ್ಷಯ ತೃತೀಯ, ಡಾ. ಅಂಬೇಡ್ಕರ ಜಯಂತಿಯ, ಬಸವ ಜಯಂತಿಯ ಹಾಗೂ ಶ್ರೀ ರಾಮಾನುಜಾಚಾರ್ಯರ ಜಯಂತಿಯ ಶುಭಾಶಯಗಳು.

ಮರ್ಯಾದಾ ಪುರುಷೋತ್ತಮ ಶ್ರೀ ರಾಮಚಂದ್ರದೇವರ ಜನ್ಮದಿನ ಹಾಗೂ ಈ ಎಲ್ಲ ಮಹನೀಯರ ಜಯಂತಿಗಳ ಆಚರಣೆಯಿಂದಾಗಿ ನಮ್ಮೆಲ್ಲರ ಬಾಳಲ್ಲಿ ನವಚೈತನ್ಯ ತುಂಬುವಂತಾಗಲಿ. ಅವರೆಲ್ಲರ ಅನುಗ್ರಹ ಹಾಗೂ ಆಶೀರ್ವಾದಗಳಿಂದ ನಮ್ಮ ಸೌಹಾರ್ದ ಸಹಕಾರಿ ಕ್ಷೇತ್ರ ಆರೋಗ್ಯಕರವಾಗಿ ಹಾಗೂ ಗುಣಾತ್ಮಕವಾಗಿ ಬೆಳೆಯಲಿ ಎಂದು ಸಂಯುಕ್ತ ಸಹಕಾರಿಯು ಅಪೇಕ್ಷಿಸುತ್ತದೆ.

ರಾಜ್ಯದಲ್ಲಿ ಸೌಹಾರ್ದ ಸಹಕಾರಿಗಳ ಸಂಖ್ಯೆ ಈಗ 4966. ಕಳೆದ 20 ವರ್ಷಗಳ ಸೌಹಾರ್ದ ಸಹಕಾರಿ ಕ್ಷೇತ್ರದ ಪಯಣದಲ್ಲಿ ಅನೇಕ ಏರು ಪೇರುಗಳನ್ನು ಅನುಭವಿಸುತ್ತ ಈ ಹಂತಕ್ಕೆ ಬಂದಿದ್ದೇವೆ. ಸೌಹಾರ್ದ ಸಹಕಾರಿ ಕಾಯ್ದೆಯ ಆಶಯಕ್ಕೆ ಅನುಗುಣವಾಗಿ ರಾಜ್ಯದ ಸೌಹಾರ್ದ ಸಹಕಾರಿಗಳು ಉತ್ತಮವಾಗಿ ಬೆಳೆಯುತ್ತಿವೆ. 100 ಕೋಟಿಗೂ ಹೆಚ್ಚು ಬಂಡವಾಳವಿರುವ 38 ಸೌಹಾರ್ದ ಸಹಕಾರಿಗಳು 50 ಕೋಟಿಗೂ ಹೆಚ್ಚು ಬಂಡವಾಳವಿರುವ 68 ಸೌಹಾರ್ದ ಸಹಕಾರಿಗಳು 25 ಕೋಟಿಗೂ ಹೆಚ್ಚು ಬಂಡವಾಳವಿರುವ 143 ಸೌಹಾರ್ದ ಸಹಕಾರಿಗಳು 10 ಕೋಟಿಗೂ ಹೆಚ್ಚು ಬಂಡವಾಳವಿರುವ ಸೌಹಾರ್ದ ಸಹಕಾರಿಗಳು 332 ಸೌಹಾರ್ದ ಸಹಕಾರಿಗಳು 5 ಕೋಟಿಗೂ ಹೆಚ್ಚು ಬಂಡವಾಳವಿರುವ 600 ಸೌಹಾರ್ದ ಸಹಕಾರಿಗಳು ಹಾಗೂ 3 ಕೋಟಿಗೂ ಹೆಚ್ಚು ಬಂಡವಾಳವಿರುವ 836 ಸೌಹಾರ್ದ ಸಹಕಾರಿಗಳು ವಿಭಿನ್ನ ಹಾಗೂ ವಿಶಿಷ್ಟ ರೀತಿಯಲ್ಲಿ ಉತ್ತಮವಾಗಿ ಕಾರ್ಯನಿರ್ವಹಿಸುತ್ತವೆ. ರಾಜ್ಯದ ಹಾಗೂ ಸಹಕಾರಿಗಳ ಗಮನವನ್ನು ಸೆಳೆದಿವೆ ರಾಜ್ಯದ ಸೌಹಾರ್ದ ಸಹಕಾರಿಗಳು ಸಾಂಪ್ರದಾಯಿಕ ಸಹಕಾರಿ ಸಂಘಗಳಿಗಿಂತ ಉತ್ತಮವಾಗಿ ಕಾರ್ಯನಿರ್ವಹಿಸುತ್ತಿವೆ ಆದರೆ ಇತ್ತೀಚಿನ ಕೆಲವು ವಿದ್ಯಮಾನಗಳ ಅವಲೋಕನಯಿಂದ ಸೌಹಾರ್ದ ಸಹಕಾರಿಗಳ ಗುಣಮಟ್ಟ ನಿರೀಕ್ಷಿಸಿದ ಮಟ್ಟದಲ್ಲಿ ಬೆಳೆಯುತ್ತಿಲ್ಲ ಎಂಬುದನ್ನು ಧೃಡಪಡಿಸುತ್ತದೆ.

ಕೆಲವು ಸಹಕಾರಿಗಳು ತಮ್ಮ ಸ್ವಾರ್ಥಕ್ಕಾಗಿ ಸಹಕಾರಿಯನ್ನು ಬಳಸಿಕೊಂಡು ಠೇವಣಿದಾರರಿಗೆ ಮೋಸ ಮಾಡುತ್ತಿರುವುದನ್ನು ಗಮನಿಸಲಾಗಿದೆ. ಕೆಲವು ಸೌಹಾರ್ದ ಸಹಕಾರಿಗಳು ಕಾನೂನು ಹಾಗೂ ನಿಯಮಗಳ ಮತ್ತು ಉಪವಿಧಿಗಳ ಉಲ್ಲಂಘನೆಮಾಡಿ ಸಹಕಾರಿಯ ಹಣವನ್ನು ದುರುಪಯೋಗ ಮಾಡುತ್ತಿರುವುದು ಕಂಡು ಬಂದಿದೆ. ಇದು ಸೌಹಾರ್ದ ಸಹಕಾರಿ ಕ್ಷೇತ್ರದ ಬಗ್ಗೆ ಜನರು ಮಾತಾಡಿಕೊಳ್ಳುವಂತಾಗಿದೆ. ಇದು ಸೌಹಾರ್ದ ಸಹಕಾರಿ ಕ್ಷೇತ್ರದ ಉಳಿವಿಗೆ ಆತಂಕಪಡುವಂತಾಗಿದೆ.

ಈ ಹಿನ್ನೆಲೆಯಲ್ಲಿ ಸಂಯುಕ್ತ ಸಹಕಾರಿ ಸೌಹಾರ್ದ ಸಹಕಾರಿ ಕ್ಷೇತ್ರದಲ್ಲಿ ಸೌಹಾರ್ದ ಸಹಕಾರಿಗಳ ಸಂಖ್ಯಾತ್ಮವಾಗಿ ಬೆಳೆಸಲು ಆದ್ಯತೆ ನೀಡುವ ಜೊತೆಗೆ ಗುಣಮಟ್ಟ ಕಾಪಾಡುವುದಕ್ಕೆ ಪ್ರಥಮ ಆದ್ಯತೆ ನೀಡುವುದತ್ತ ಗಮನ ಹರಿಸುತ್ತದೆ. ಜೊತೆಗೆ ಠೇವಣಿದಾರರಿಗೆ ಮೋಸಮಾಡುವ ಸಹಕಾರಿ ಸಂಸ್ಥೆಗಳಿಗೆ ಶಾಸನಬದ್ಧ ಮಾರ್ಗದರ್ಶನ ಮಾಡುವುದರ ಜೊತೆಗೆ ಕಟ್ಟುನಿಟ್ಟಾದ ಶಿಸ್ತು ಕ್ರಮ ತೆಗೆದುಕೊಳ್ಳುವುದು ಅನಿವಾರ್ಯವಾಗುತ್ತದೆ ಎಂಬುದನ್ನು ಸಹಕಾರಿಗಳು ಗಮನಿಸಬೇಕು. ಈ ನಿಟ್ಟಿನಲ್ಲಿ ಸೌಹಾರ್ದ ಸಹಕಾರಿಗಳು ಸಂಪೂರ್ಣ ಸಹಕರಿಸಬೇಕೆಂದು ಸಂಯುಕ್ತ ಸಹಕಾರಿಯು ಅಪೇಕ್ಷಿಸುತ್ತದೆ.

ಸ್ವಾಭಿಮಾನಿ ಸಹಕಾರಿ ಸಂಪಾದಕ ಮಂಡಳಿ

ಶ್ರೀ ಬಿ.ಹೆಚ್. ಕೃಷ್ಣಾರೆಡ್ಡಿ
ಗೌರವ ಅಧ್ಯಕ್ಷರು

ಶ್ರೀ ಜಗದೀಶ ಕವಟಗಿಮಠ
ಗೌರವ ಸದಸ್ಯರು

ಶ್ರೀ ಶರಣಗೌಡ ಜಿ ಪಾಟೀಲ
ಸಂಪಾದಕರು

ಶ್ರೀ ವಿ.ಜೆ. ಕಾರಕೂನ
ಸಂಚಾಲಕರು

ಶ್ರೀ ರಘುನಂದನ ಕೆ.
ಸದಸ್ಯರು

ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿ ನಿ.,
"ನಿರ್ಮಾನ ಭವನ", ಡಾ. ರಾಜಕುಮಾರ ರಸ್ತೆ,
1ನೇ ಬ್ಲಾಕ್, ರಾಜಾಜಿನಗರ
ಬೆಂಗಳೂರು–560010.
ದೂರವಾಣಿ/ ಫ್ಯಾಕ್ಸ್ :
080–23378375–80, 23474408,23573291
ಇ–ಮೇಲ್ : souharda@souharda.coop
swabhimani@souharda.coop
ವೆಬ್‌ಸೈಟ್ : www.souharda.coop

ಒಳಪುಟಗಳಲ್ಲಿ. . .

ಅಧ್ಯಕ್ಷರ ನುಡಿ.. 2
ಸಂಪಾದಕೀಯ...................................... 3
ಜ್ಞಾನ ಜ್ಯೋತಿ.. 4
ಸಂಯುಕ್ತ ಸಹಕಾರಿಗಳ ಸಮಾಚಾರಗಳು 5–11
ಸೌಹಾರ್ದ ಸಹಕಾರಿಗಳ ಸಮಾಚಾರಗಳು 12–15
ಲೇಖನ... 16–28

ಸಂಪಾದಕೀಯ

ಸೌಹಾರ್ದ ಸಹಕಾರಿಗಳಿಗೆ ಸಾಲು ಸಾಲು ಸವಾಲುಗಳು ವೃತ್ತಿಪರ, ಪಾರದರ್ಶಕ ಆಡಳಿತ ಹಾಗೂ ಹಣಕಾಸಿನ ಶಿಸ್ತು ಪಾಲನೆಯೆ ಪರಿಹಾರ

ರಾಜ್ಯದ ಸೌಹಾರ್ದ ಸಹಕಾರಿಗಳ ಬೆಳವಣಿಗೆ ವೇಗವಾಗಿ ಬೆಳೆಯುತ್ತಿರುವ ಜೊತೆಯಲ್ಲಿಯೇ ಸಮಸ್ಯೆಗಳು ಬೆಳೆಯುತ್ತಿರುವುದು ಕಳವಳಕಾರಿ ವಿಷಯ. ಸಮಸ್ಯೆಗಳ ಬೆಳವಣಿಗೆಯಿಂದಾಗಿ ಈ ಕ್ಷೇತ್ರದ ಗುಣಮಟ್ಟ ಕುಸಿಯುತ್ತಿದೆ ಎಂಬ ಭಾವನೆ ಸಹಕಾರಿಗಳಲ್ಲಿ ಬರಬಾರದು. ಅದು ಸೌಹಾರ್ದ ಸಹಕಾರಿ ಕ್ಷೇತ್ರದ ಬೆಳವಣಿಗೆಯನ್ನು ಕುಂಠಿತಗೊಳಿಸುತ್ತದೆ. ಆದ್ದರಿಂದ ಇದಕ್ಕೆ ಪರಿಹಾರಗಳನ್ನು ಕಂಡುಕೊಳ್ಳುವಲ್ಲಿ ಸಹಕಾರಿಗಳು ಪ್ರಯತ್ನಿಸಬೇಕು.

ಸೌಹಾರ್ದ ಸಹಕಾರಿಗಳ ಧ್ಯೇಯ ಸ್ವಾಯತ್ತತೆ, ಸ್ವಯಂ ಆಡಳಿತ ಹಾಗೂ ಸ್ವಯಂ ನಿಯಂತ್ರಣ ಈ ಧ್ಯೇಯವನ್ನು ಪಾಲಿಸಲು ವಿಫಲರಾಗಿರುವುದೇ ಸವಾಲುಗಳನ್ನು ಹುಟ್ಟಿಕೊಳ್ಳಲು ಕಾರಣವಾಗಿವೆ.

ಸೌಹಾರ್ದ ಸಹಕಾರಿಗಳಿಗೆ ಪ್ರಪ್ರಥಮವಾಗಿ ಹಣಕಾಸು ಶಿಸ್ತು ಪಾಲಿಸುವುದು ಅಗತ್ಯ. ಅದಕ್ಕಾಗಿ ವೃತ್ತಿಪರ ಮತ್ತು ಪಾರದರ್ಶಕ ಆಡಳಿತಕ್ಕೆ ಹೆಚ್ಚಿನ ಆದ್ಯತೆ ಕೊಡಬೇಕಾಗುತ್ತದೆ. ವೃತ್ತಿಪರ ಆಡಳಿತ ಹೊಂದುವುದಕ್ಕಾಗಿ ಅಧ್ಯಕ್ಷರಾದಿಯಾಗಿ ಎಲ್ಲ ಸಿಬ್ಬಂದಿಯವರವರೆಗೆ ಸಹಕಾರ ಕ್ಷೇತ್ರದ, ಸಹಕಾರ ತತ್ವಗಳ ಹಾಗೂ ಸಹಕಾರಿ ಕಾಯ್ದೆಗಳ ಆಶಯಗಳ ಬಗ್ಗೆ ಕನಿಷ್ಠ ಜ್ಞಾನವನ್ನು ಹೊಂದುವುದು ಅವಶ್ಯಕ. ಸಿಬ್ಬಂದಿಯವರನ್ನು ಆಯ್ಕೆ ಮಾಡುವಾಗ ಅರ್ಹ ಹಾಗೂ ಉತ್ತಮ ಶ್ರೇಣಿಯವರನ್ನು ಆಯ್ಕೆ ಮಾಡಬೇಕು. ಹಾಗೂ ಅಧ್ಯಕ್ಷರು ಆಡಳಿತ ಮಂಡಳಿಯವರಿಗೆ ನಿರಂತರ ಶಿಕ್ಷಣ ಹಾಗೂ ಸಿಬ್ಬಂದಿಯವರಿಗೆ ತರಬೇತಿಯನ್ನು ವ್ಯವಸ್ಥೆ ಮಾಡುವುದು ಮತ್ತು ಕಡ್ಡಾಯವಾಗಿ ಪಾಲ್ಗೊಳ್ಳುವುದು ಅಗತ್ಯವೆನಿಸುತ್ತದೆ.

ಆಡಳಿತದಲ್ಲಿ ಪಾರದರ್ಶಕತೆ ಸವಾಲುಗಳನ್ನು ಎದುರಿಸುವಲ್ಲಿ ಮಹತ್ವದ ಪಾತ್ರವಹಿಸುತ್ತದೆ. ಸಹಕಾರಿಯ ಪ್ರತಿಯೊಂದು ಕಾರ್ಯನಿರ್ವಹಣೆಯಲ್ಲಿ ಪಾರದರ್ಶಕತೆಯಿದ್ದಲ್ಲಿ ಸವಾಲುಗಳೇ ಉದ್ಭವಿಸುವುದಿಲ್ಲ. ಸಹಕಾರಿ ಆಡಳಿತ ಮಂಡಳಿಯವರಾಗಲಿ ಅಥವಾ ಅಧಿಕಾರಿಗಳಾಗಲಿ ರಾಜಕೀಯ ಒತ್ತಡಕ್ಕಾಗಲಿ ಅಥವಾ ಇನ್ನಾವುದೇ ಬಾಹ್ಯ ಒತ್ತಡಕ್ಕಾಗಲಿ ಮಣಿಯದೆ ಪಾರದರ್ಶಕತೆಯನ್ನು ಉಳಿಸಿಕೊಂಡರೆ ಸಮಸ್ಯೆಗಳೇ ಉದ್ಭವಿಸುವುದಿಲ್ಲ. ಸಹಕಾರಿ ಸಂಸ್ಥೆಗಳು ಪ್ರಜಾ ಪ್ರಭುತ್ವದ ತಳಹದಿಯಲ್ಲಿ ಅದೇ ಮಾದರಿಯಲ್ಲಿ ಉತ್ತಮ ಆರ್ಥಿಕ ಸಂಘಟನೆಗಳಾಗಿ ಕಾರ್ಯನಿರ್ವಹಿಸಿದಲ್ಲಿ ಸವಾಲುಗಳನ್ನು ಸುಲಭವಾಗಿ ಎದುರಿಸುವ ಸಾಮರ್ಥ್ಯ ಬೆಳವಣಿಗೆಯಾಗುತ್ತದೆ. ಈ ನಿಟ್ಟಿನಲ್ಲಿ ರಾಜ್ಯದ ಸೌಹಾರ್ದ ಸಹಕಾರಿಗಳು ವಿಶೇಷವಾಗಿ ಸಮಸ್ಯಾತ್ಮ ಸಹಕಾರಿಗಳು ಕಾರ್ಯನಿರ್ವಹಿಸಬೇಕೆಂಬುದು ಸಂಯುಕ್ತ ಸಹಕಾರಿಯ ಅಪೇಕ್ಷೆಯಾಗಿದೆ.

"ಜೀವನವದೆಷ್ಟು ಕ್ಷಣಭಂಗುರ"

ಕಣ್ಣು ಮಿಟುಕಿಸಿ ಬಿಟುವುದರೊಳಗೆ ಕಂಡು ಕೇಳಿರಿಯದ ಸ್ಥಿತಿಯನ್ನು ತಂದೊಡ್ಡಿ ಸುಖದ ಸುಪ್ಪತ್ತಿಗೆಯಲ್ಲಿ ಬೀಗುತ್ತಿದ್ದ ನಮ್ಮಗಳಿಗೆ ಇದ್ದಕ್ಕಿಂದತೆಯೇ ಚೀನಾ, ಇಟಲಿ, ಅಮೇರಿಕಾ ಭಾರತದೇಶಗಳನ್ನೊಳಗೊಂಡಂತೆ ವಿಶ್ವದ 196 ದೇಶಗಳಲ್ಲಿ ಕೊರೋನಾ ವೈರಸ್ ತನ್ನನ್ನು ವಿಸ್ತರಿಸಿಕೊಂಡು ಸಾವಿನ ರಣಕೇರಿಯಿಂದ ಜನರನ್ನು ಭಯಭೀತರನ್ನಾಗಿ ತತ್ಸಂಬಂಧೀ ಲಾಕ್‌ಡೌನ್ ವ್ಯವಸ್ಥೆಗಳನ್ನು ನಿರ್ಮಿಸಿರುವುದನ್ನು ನೋಡುವಾಗ ಹಳೆಯ ಕಾಲದ ವಿಷ್ಣುವರ್ಧನ್ ಲಕ್ಷ್ಮೀ ಜೋಡಿಯ "ಅವಳಹೆಜ್ಜೆ" ಚಿತ್ರದಲ್ಲಿನ ಪರಮಾತ್ಮನ ಲೀಲಾ ವಿನೋದದ ಪದ್ಯವೊಂದು ನೆನಪಿಗೆ ಬರುತ್ತದೆ.

ದೇವರ ಆಟ ಬಲ್ಲವರಾರು
ಆತನ ಎದಿರು ನಿಲ್ಲುವರಾರು
ಕೇಳದೆ ಸುಖವಾ ತರುವಾ
ತಿಳಿಸಿದೆ ದುಃಖವಾ ಕೊಡುವಾ
ತನ್ನ ಮನದಂತೆ ಕುಣಿಸಿ ಆಡುವಾ

ಮಾನವನ ಜೀವನದಲ್ಲಿ ಬಂದೊದಗುವ ಆಪತ್ತು, ವಿಪತ್ತು, ಕಷ್ಟಕಾರ್ಪಣ್ಯ, ದುರ್ದೆಶಿ ಮತ್ತು ದುರ್ಘಟನೆಗಳೂ ಕೂಡಾ ಪರಮಾತ್ಮದೇಶಗಳೆಂದೇ ಕುಂತಿಯಧರ್ಮಭೋ ಇಂಬ ಪುಸ್ತಕವನ್ನು ಪ್ರಸ್ತಾಪಿತವಾಗಿರುವುದನ್ನು ಕಾಣುತ್ತೇವೆ.

ಇದೇ ಸಾರಾಂಶವನ್ನು ಜನರಿಗೆ ತಿಳಿಸಲುದ್ದೇಶಿಸಿದ ಆಧ್ಯಾತ್ಮ ಕವಿ ಡಿ.ವಿ.ಜಿ ರವರ ಕೆಳಗಿನ ಪದ್ಯದಲ್ಲಿ ಭಗವಂತನ ವಿವಿಧ ಲೀಲಾವಿನೋದಗಳನ್ನು ಚಿತ್ರಿಸಿದ್ದಾರೆ.

ಶ್ರೇಣಿ 48

ಜ್ಞಾನ ಜ್ಯೋತಿ

ಎಂ .ಬಸಪ್ಪ, ಸಹಕಾರ ಸಂಘಗಳ
ನಿವೃತ್ತ ಉಪನಿಬಂಧಕರು, ಬೆಂಗಳೂರು.

ಹಾಸ್ಯಗಾರನೊಬ್ಬೊಮ್ಮೆ ವಿಕಟ ಪರಿಹಾಸವದು
ಆಸ್ಯ ಗಂಭೀರ ಬೆರಲಿಂದ ಚರಳಗುಳಿ
ವಿಶ್ವಾಸದುಪಚಾರ ಹುಣಿಸೆ ಮೆಣಸಾಹಾರ
ವಿಶ್ವಪಾಲನೆಯಿತು ॥ಮಂಕುತಿಮ್ಮ॥

ಸೃಷ್ಟಿ ಕ್ಷತಿಲಯ ಕರ್ತನಾದ ಭಗವಂತನು ತನ್ನ ಮಕ್ಕಳಾದ ಪ್ರಜೆಗಳೊಡನೆ ವೈವಿಧ್ಯಮಯ ರೀತಿಯಲ್ಲಿ ಹಾಸ್ಯಗಾರನಾಗಿ ತಮಾಷೆಮಾಡುತ್ತಾ, ಬೆರಳಿನಿಂದ ಚರಕವ ಇಟ್ಟು ನೇಣಸುವುದರ ಜೊತೆಗೆ ಹುಳಿಖಾರಗಳಿಂದ ಕೂಡಿದಂತಹ ಕಷ್ಟ ಸನ್ನಿವೇಶಗಳನ್ನು ನಿರ್ಮಿಸಿ ವಿಶ್ವ ಪಾಲನಾ ಕಾರ್ಯವನ್ನು ಮಾಡುತ್ತಾನೆಂದಿದ್ದಾರೆ. ಹೊರನೋಟಕ್ಕೆ ಕಾಣುವ ದೃಶ್ಯವೇನೇ ಇರಲಿ ಇವೆಲ್ಲವನ್ನು ಸೃಷ್ಟಿಸುವ ಪರಮಾತ್ಮನೊಬ್ಬನಿದ್ದಾನೆ ಅವನೇ ಪಾರು ಮಡುತ್ತಾನೆಂಬ ಅಚಲ ಶ್ರದ್ದೆಯೊಂದಿಗೆ ಕೊರೋನಾದ ಬಗ್ಗೆ ವೈದ್ಯರು, ವಿಷಯತಜ್ಞರು ಹಾಗೂ ಭೂಗರ್ಭಶಾಸ್ತ್ರಜ್ಞರುಗಳು ನೀಡಿರುವ ಸಲಹೆಗಳನ್ನು ತಪ್ಪದೇ ಪಾಲಿಸುತ್ತಾ ಒದಗಿ ಬಂದಿರುವ ವಿಪತ್ತನ್ನು ಎದುರಿಸೋಣವೆಂಬ ಆಂತರಿಕ ವಿಜಯಾಭಾವ ಮೂಡಬೇಕೆಂಬುದೇ ಲೇಖಕರ ಇಂಗಿತವಾಗಿದೆ.

ಇಂತಹ ದುಸ್ಥಿತಿಯ ಆಗಮನದಿಂದ ಬದುಕಷ್ಟು ಕ್ಷಣಭಂಗುರದ್ದು ಎಂಬುದು ಅರ್ಥವಾಗಿ ಕೆಲವೇ ದಿವಸಗಳಲ್ಲಿ ಇಂಥಹ ಅಘಾತಕಾರೀ ದಿವಸಗಳು ಬಂದೊದಗಿದವು ಎಂಬುದನ್ನು ಅರಿತು ನಮ್ಮ ದುರಾಸೆ, ಸ್ವಾರ್ಥಗಳನ್ನು ಶೂನ್ಯಗೊಳಿಸಿಕೊಳ್ಳುತ್ತ ಸರ್ವರ ಅಭಿವೃದ್ಧಿಗೆ ಶ್ರಮಿಸೋಣವೆಂಬ ಸಂದೇಶ ನೀಡಿದ ಪದ್ಯವಿದಾಗಿದೆ.

ಸೌಹಾರ್ದ ಸಹಕಾರಿಗಳ ನ್ಯಾಯಾಲಯದ ಸಮಾಚಾರಗಳು

ದಾವಾ ದಾಖಲಾತಿಗಳು : ಬೆಳಗಾವಿ:–8,487, ಬೆಂಗಳೂರು:–1,913, ಮೈಸೂರು:–922 ಹಾಗೂ ಕಲಬುರಗಿ:–2,078 ವಿಭಾಗಗಳಿಂದ ದಾಖಲಾದ ದಾವಾ ಪ್ರಕರಣಗಳ ಒಟ್ಟು 13,400 ಆಗಿರುತ್ತದೆ. ಇವುಗಳ ಪೈಕಿ 6,222 ಪ್ರಕರಣಗಳು ಇತ್ಯರ್ಥಗೊಂಡಿವೆ. ವಿಚಾರಣಾ ಹಂತದಲ್ಲಿರುವ ಪ್ರಕರಣಗಳು ಒಟ್ಟು 7,178.

ಅಮಲ್ಜಾರಿ ಪ್ರಕರಣಗಳು : ಒಟ್ಟು 2,410 ಅಮಲ್ಜಾರಿ ಪ್ರಕರಣಗಳು ದಾಖಲಾಗಿದ್ದು, ಇವುಗಳ ಪೈಕಿ 224 ಪ್ರಕರಣಗಳು ಇತ್ಯರ್ಥಗೊಂಡಿದೆ ಮತ್ತು 146 ಪ್ರಕರಣಗಳನ್ನು ಸಿವಿಲ್ ಕೋರ್ಟ್‌ಗೆ ಅನುಮತಿ ನೀಡಲಾಗಿ 2040 ಪ್ರಕರಣಗಳು ಪ್ರಗತಿಯಲ್ಲಿರುತ್ತದೆ. ಸಹಕಾರಿಗಳ ನಿಬಂಧಕರುಗಳ ಕಛೇರಿಗಳಲ್ಲಿ ದಾಖಲಾಗಿದ್ದ 998 ಅಮಲ್ಜಾರಿ ಪ್ರಕರಣಗಳು ಸೌಹಾರ್ದ ಸಹಕಾರಿಗಳ ನ್ಯಾಯಾಲಯಕ್ಕೆ ವರ್ಗಾವಣೆಯಾಗಿದ್ದು ಇವುಗಳ ಪೈಕಿ 91 ಪ್ರಕರಣಗಳು ಇತ್ಯರ್ಥಗೊಂಡಿದೆ ಮತ್ತು 80 ಪ್ರಕರಣಗಳನ್ನು ಸಿವಿಲ್ ಕೋರ್ಟ್‌ಗೆ ಅನುಮತಿ ನೀಡಲಾಗಿ 827 ಪ್ರಕರಣಗಳು ಪ್ರಗತಿಯಲ್ಲಿರುತ್ತದೆ.

ಕೇಂದ್ರ ಗೃಹ ಸಚಿವ ಶ್ರೀ ಅಮಿತಾ ಶಾರವರ ಭೇಟಿ
ಆದಾಯ ತೆರಿಗೆ ವಿಷಯಗಳ ಶೀಘ್ರ ಪರಿಹಾರಕ್ಕೆ ಭರವಸೆ



ನವದೆಹಲಿ : ಸಂಯುಕ್ತ ಸಹಕಾರಿಯ ಅಧ್ಯಕ್ಷರಾದ ಶ್ರೀ ಬಿ.ಹೆಚ್. ಕೃಷ್ಣಾರೆಡ್ಡಿ, ಕ್ಯಾಂಪ್ಕೋ ಅಧ್ಯಕ್ಷರಾದ ಶ್ರೀ ಎಸ್. ಆರ್. ಸತೀಶ್ಚಂದ್ರ, ಹಿರಿಯ ಸಹಕಾರಿ ಶ್ರೀ ಕೊಂಕೋಡಿ ಪದ್ಮನಾಭ, ಸಂಯುಕ್ತ ಸಹಕಾರಿಯ ವ್ಯವಸ್ಥಾಪಕ ನಿರ್ದೇಶಕರಾದ ಶ್ರೀ ಶರಣಗೌಡ ಜಿ. ಪಾಟೀಲ ರವರು, ಕೇಂದ್ರ ಸಚಿವ ಶ್ರೀ ಪ್ರಲ್ಹಾದ ಜೋಶಿ ಯವರೊಂದಿಗೆ ಕೇಂದ್ರ ಗೃಹ ಸಚಿವ ಶ್ರೀ ಅಮಿತಾ ಶಾ ಯವರನ್ನು ದಿನಾಂಕ 20.03.2020 ರಂದು ಭೇಟಿ ಮಾಡಿ ದೇಶದ ಸಹಕಾರ ಸಂಸ್ಥೆಗಳ ವಿಶೇಷವಾಗಿ ಕರ್ನಾಟಕ ಸೌಹಾರ್ದ ಸಹಕಾರಿಗಳಿಗೆ ಆದಾಯ ತೆರಿಗೆ ವಿಷಯಗಳಿಂದ ಆಗುತ್ತಿರುವ ತೊಂದರೆಗಳಿಂದ ಶೀಘ್ರದಲ್ಲಿ ಪರಿಹಾರ ಒದಗಿರುವುದಾಗಿ ಭರವಸೆ ನೀಡಿದ್ದಾರೆ. ಈ ಸಂಬಂಧದಲ್ಲಿ ಕೇಂದ್ರ ಸಚಿವ ಶ್ರೀ ಅಮಿತಾ ಶಾ ರವರು ಕೇಂದ್ರದ ನೇರ ತೆರಿಗೆ ಮಂಡಲಿ ಮುಖ್ಯಸ್ಥರೊಂದಿಗೆ ಮಾತನಾಡಿ ಸಹಕಾರಿ ಸಂಸ್ಥೆಗಳ ಆದಾಯ ತೆರಿಗೆ ವಿಷಯದಿಂದ ಅಗುತ್ತಿರುವ ತೊಂದರೆಗಳನ್ನು ಶೀಘ್ರದಲ್ಲಿ ನಿವಾರಿಸುವ ಕ್ರಮ ವಿಡುವಂತೆ ಸೂಚಿಸುವುದಾಗಿ ತಿಳಿಸಿದರು ಎಂದು ಸಂಯುಕ್ತ ಸಹಕಾರಿಯ ಅಧ್ಯಕ್ಷರಾದ ಶ್ರೀ ಬಿ.ಹೆಚ್. ಕೃಷ್ಣಾರೆಡ್ಡಿ ಯವರು ತಿಳಿಸಿದ್ದಾರೆ.

ರಾಜ್ಯದ ಸಹಕಾರಿ ಸಂಸ್ಥೆಗಳ ಪರವಾಗಿ ಸಹಕಾರ ಸಚಿವ ಶ್ರೀ ಎಸ್. ಟಿ. ಸೋಮಶೇಖರ ರವರಿಂದ ಕೋವಿಡ್-19 ಮುಖ್ಯಮಂತ್ರಿಗಳ ಪರಿಹಾರ ನಿಧಿಗೆ 32 ಕೋಟಿ ರೂಗಳ ಸಲ್ಲಿಕೆ

ಬೆಂಗಳೂರು : ರಾಜ್ಯದಲ್ಲಿ ವೇಗವಾಗಿ ಹರಡುತ್ತಿರುವ ಕೋರೋನಾ ರೋಗದ ನಿಯಂತ್ರಣಕ್ಕಾಗಿ ರಾಜ್ಯ ಸರಕಾರವು ತೆಗೆದುಕೊಳ್ಳುತ್ತಿರುವ ರೋಗ ನಿಯಂತ್ರಣ ಕಾರ್ಯಗಳಿಗೆ ಹಾಗೂ ಲಾಕ್‌ಡೌನ್‌ದಿಂದ ತೊಂದರೆಗಿಡಾಗಿರುವ ರಾಜ್ಯದ ಬಡವರಿಗೆ, ಕಾರ್ಮಿಕರಿಗೆ, ಕೂಲಿಗಾರರಿಗೆ, ರೈತರಿಗೆ ನೆರವಾಗುವ ದೃಷ್ಟಿಯಿಂದ ರಾಜ್ಯದ ವಿವಿಧ ಸಹಕಾರ ಸಂಸ್ಥೆಗಳಿಂದ ರೂ. 32 ಕೋಟಿ ಹಣವನ್ನು ಸಂಗ್ರಹಿಸಿದ ರಾಜ್ಯದ ಸಹಕಾರ ಸಚಿವ ಶ್ರೀ ಎಸ್.ಟಿ. ಸೋಮಶೇಖರ ರವರು ಮುಖ್ಯಮಂತ್ರಿ ಶ್ರೀ ಬಿ.ಎಸ್ ಯಡಿಯೂರಪ್ಪ ರವರಿಗೆ ನೀಡಿದರು.

ಸಹಕಾರ ಕಾಯ್ದೆಗಳ ತಿದ್ದುಪಡಿ ಕುರಿತು ಸಭೆ

ಬೆಂಗಳೂರು: ಸಹಕಾರ ಕಾಯ್ದೆಗಳ ತಿದ್ದುಪಡಿ ಕುರಿತು ದಿನಾಂಕ 20.03.2020 ರಂದು ಮಾನ್ಯ ಉಪ ಮುಖ್ಯಮಂತ್ರಿ ಶ್ರೀ ಲಕ್ಷ್ಮಣ ಸವದಿ ಹಾಗೂ ಮಾನ್ಯ ಸಹಕಾರ ಸಚಿವರಾದ ಶ್ರೀ ಎಸ್. ಟಿ. ಸೋಮಶೇಖರ್ ಇವರ ನೇತೃತ್ವದಲ್ಲಿ ವಿಕಾಸ ಸೌಧದಲ್ಲಿ ಸಭೆ ನಡೆಯಿತು. ಈ ಸಂದರ್ಭದಲ್ಲಿ ಜನ ಪ್ರತಿನಿಧಿಗಳಾದ ಶ್ರೀ ಎಸ್ ಆರ್ ಪಾಟೀಲ್, ಶ್ರೀ ಕೆ ಎನ್ ರಾಜಣ್ಣ, ಶ್ರೀ ಶಿವರಾಮ ಹೆಬ್ಬಾರ್, ಶ್ರೀ ಹಾಲಪ್ಪ ಆಚಾರ್, ಶ್ರೀ ಘೋಟ್ನೆಕರ್, ಶ್ರೀ ಷಡಕ್ಷರಿ, ಶ್ರೀ ಎಂ ಪಿ ನಾಡಗೌಡರ್, ಶ್ರೀ ಭಾಸ್ಕರ ಹೆಗಡೆ ಕಾಗೇರಿ, ಶ್ರೀ ರಾಜೇಂದ್ರ ಕುಮಾರ್ ಮುಂತಾದವರು ಭಾಗವಹಿಸಿದ್ದರು.

ಸಂಯುಕ್ತ ಸಹಕಾರಿಯಿಂದ ನಿರ್ದೇಶಕರಾದ ಶ್ರೀ ಹೆಚ್ ವಿ ರಾಜೀವ್ ಹಾಗೂ ಶ್ರೀ ಗುರುನಾಥ ಜಾಂತೀಕರ, ಅಧಿಕಾರಿಗಳಾದ ಶ್ರೀ ನಾರಾಯಣ ಹೆಗಡೆ, ರಘುನಂದನ ಕೆ. ಇವರು ಹಾಗೂ ಸಹಕಾರ ಇಲಾಖೆಯ ವಿಶೇಷ ಕರ್ತವ್ಯ ಅಧಿಕಾರಿ, ಸಹಕಾರ ಸಂಘಗಳ ನಿಬಂಧಕರು, ಜಂಟಿ ನಿಬಂಧಕರು ಕಾನೂನು ಕೋಶ ಇವರು ಉಪಸ್ಥಿತರಿದ್ದರು.

ಬೆಳಗಾವಿ ಜಿಲ್ಲೆಯ ಸೌಹಾರ್ದ ಸಹಕಾರಿಗಳ ಸಮಾಲೋಚನಾ ಸಭೆ

ಠೇವಣಿದಾರರಿಗೆ ಮೋಸಮಾಡುವ ಸೌಹಾರ್ದ ಸಹಕಾರಿಗಳ ಪದಾಧಿಕಾರಿಗಳ ಮೇಲೆ ಸಂಯುಕ್ತ ಸಹಕಾರಿಯ ಕಠಿಣ ಕ್ರಮ :

ಕರೋನ ವೈರಸ್ ಬಗ್ಗೆ ಹೆಚ್ಚಿನ ಜಾಗೃತಿ ವಹಿಸಲು ತುರ್ತು ಕ್ರಮವಿಡಿ – ಶ್ರೀ ಬಿ.ಹೆಚ್.ಕೃಷ್ಣಾರೆಡ್ಡಿ

ಬೆಳಗಾವಿ : ಕರ್ನಾಟಕ ರಾಜ್ಯ ಸೌಹಾರ್ದ ಸಹಕಾರಿಯ ಬೆಳಗಾವಿ ವಿಭಾಗೀಯ ವತಿಯಿಂದ ಬೆಳಗಾವಿ ಜಿಲ್ಲೆಯ ಸೌಹಾರ್ದ ಸಹಕಾರಿಗಳ ಅಧ್ಯಕ್ಷರು ಹಾಗೂ ನಿರ್ದೇಶಕರು ಮತ್ತು ಮುಖ್ಯ ಕಾರ್ಯನಿರ್ವಾಹಕರ ಸಮಾಲೋಚನಾ ಸಭೆಯ ಅಧ್ಯಕ್ಷತೆಯನ್ನು ವಹಿಸಿ ಮಾತನಾಡಿದ ಸಂಯುಕ್ತ ಸಹಕಾರಿಯ ಅಧ್ಯಕ್ಷರಾದ ಶ್ರೀ ಬಿ. ಹೆಚ್. ಕೃಷ್ಣಾರೆಡ್ಡಿಯವರು ಸೌಹಾರ್ದ ಸಹಕಾರಿಗಳಲ್ಲಿ ಠೇವಣಿ ಮಾಡಿರುವ ಸದಸ್ಯರಿಗೆ ಯಾವುದೇ ಕಾರಣದಿಂದ ಮೋಸವಾಗದಂತೆ ಆಡಳಿತ ಮಂಡಲಿಯವರು ಜವಾಬ್ದಾರಿಯಿಂದ ಕಾರ್ಯನಿರ್ವಾಹಿಸಬೇಕು. ಈ ರೀತಿ ಮೋಸಮಾಡುವ ಸೌಹಾರ್ದ ಸಹಕಾರಿಗಳ ಆಡಳಿತ ಮಂಡಲಿಯವರ ವಿರುದ್ಧ ಸಂಯುಕ್ತ ಸಹಕಾರಿಯು ಕಠಿಣ ಕ್ರಮವನ್ನು ತೆಗೆದುಕೊಳ್ಳುತ್ತದೆ ಎಂದು ತಿಳಿಸಿದರು.

ಬೆಳಗಾವಿ ಜಿಲ್ಲೆಯ 166 ಸೌಹಾರ್ದ ಸಹಕಾರಿಗಳಿಂದ 205ಕ್ಕೂ ಹೆಚ್ಚು ಪ್ರತಿನಿಧಿಗಳೊಡನೆ ಸಮಾಲೋಚನೆ ಮಾಡಿದ ಶ್ರೀ ಬಿ.ಹೆಚ್.ಕೃಷ್ಣಾರೆಡ್ಡಿಯವರು ರಾಜ್ಯದ ಸೌಹಾರ್ದ ಸಹಕಾರಿ ಕ್ಷೇತ್ರದ ಹಾಗೂ ಒಟ್ಟಾರೆ ಸಹಕಾರಿ ಕ್ಷೇತ್ರದ ವಿಶೇಷವಾಗಿ ಆದಾಯ ತೆರಿಗೆ ಸಮಸ್ಯೆಗಳ ಕುರಿತಂತೆ ದಿನಾಂಕ 07.03.2020 ರಂದು ಬೆಂಗಳೂರಿನಲ್ಲಿ ನಡೆದ ಬೃಹತ್ ಸಮಾವೇಶದಲ್ಲಿ ಸಹಕಾರಿ ಸಚಿವರಾದ ಮಾನ್ಯ ಎಸ್.ಟಿ. ಸೋಮಶೇಖರ ರವರಿಗೆ ಹಾಗೂ ಹಿರಿಯ ಸಹಕಾರಿ, ಹಾಲಿ ಶಾಸಕ ಮತ್ತು ಮಾಜಿ ಸಚಿವರಾದ ಶ್ರೀ ಹೆಚ್.ಕೆ ಪಾಟೀಲರವರಿಗೆ ಮನವರಿಕೆ ಮಾಡಿ ಕೊಟ್ಟಿದ್ದೇವೆ. ಕೇಂದ್ರದ ಹಣಕಾಸು ಸಚಿವರಾದ ಶ್ರೀಮತಿ ನಿರ್ಮಲಾ ಸೀತಾರಾಮನ್‌ರವರಿಗೂ ಭೇಟಿ ಮಾಡಿ ಮನವಿ ಸಲ್ಲಿಸಿದ್ದೇವೆ. ಮತ್ತೇ ಇದೇ ದಿನಾಂಕ 20.03.2020 ರಂದು ಮತ್ತೇ ಭೇಟಿ ನಿಗದಿಯಾಗಿದೆ. ಸಹಕಾರ ಸಂಸ್ಥೆಗಳ ಆದಾಯ ತೆರಿಗೆ ಸಮಸ್ಯೆಗಳ ಪರಿಹಾರಕ್ಕಾಗಿ ಸಂಯುಕ್ತ ಸಹಕಾರಿ ನಿರಂತರ ಹೋರಾಟ ಮಾಡುತ್ತಿದೆ. ರಾಜ್ಯದ ಹೈಕೋರ್ಟ ರಾಜ್ಯದ ಸೌಹಾರ್ದ ಸಹಕಾರಿಗಳ ಹಾಗೂ ಸಂಯುಕ್ತ ಸಹಕಾರಿಯ ಪರವಾಗಿ ಮಹತ್ವದ ತೀರ್ಪನ್ನು ನೀಡಿರುವುದರಿಂದ ರಾಜ್ಯದ ಸೌಹಾರ್ದ ಸಹಕಾರಿಗಳು ಸಹಕಾರಿ ಸಂಸ್ಥೆಗಳೇ ಅಲ್ಲ ಎಂದು ತಪ್ಪಾಗಿ ಅರ್ಥೈಸಿ ಸೌಹಾರ್ದ ಸಹಕಾರಿಗಳ ಮೇಲೆ ಆದಾಯ ತೆರಿಗೆ ಇಲಾಖೆಯು ನೀಡುತ್ತಿದ ಕಿರುಕುಳ ಈಗ ಇಲ್ಲವಾಗಿದೆ. ರಾಜ್ಯದ ಸೌಹಾರ್ದ ಸಹಕಾರಿ ಕಾಯ್ದೆಗೆ ಶೀಘ್ರದಲ್ಲಿ ತಿದ್ದುಪಡಿಗೆ ಪ್ರಯತ್ನಿಸಲಾಗಿದೆ. ಮಾನ್ಯ ಸಹಕಾರ ಸಚಿವರು ತಿದ್ದುಪಡಿ ಮಾಡಿಕೊಡುವುದಾಗಿ ತಿಳಿಸಿದ್ದಾರೆ. ರಾಜ್ಯದ ಸೌಹಾರ್ದ ಸಹಕಾರಿಗಳು ಸಹ ತಮ್ಮ ಸಹಕಾರಿಯಲ್ಲಿ ಆರ್ಥಿಕ ಶಿಸ್ತನ್ನು ಬೆಳೆಸುವಂತಹ ನಿಟ್ಟಿನಲ್ಲಿ ಕ್ರಮವಿಡಬೇಕು. ಪಟ್ಟಣ ಸಹಕಾರ ಬ್ಯಾಂಕುಗಳಿಗೆ ಆದಾಯ ತೆರಿಗೆಯಲ್ಲಿ ಲಭ್ಯವಿರುವ ವಿನಾಯಿತಿಗಳನ್ನು ಸಹಕಾರ ಸಂಸ್ಥೆಗಳಿಗೂ ಅನ್ವಯಿಸುವಂತೆ ಆದಾಯ ತೆರಿಗೆ ಕಾಯ್ದೆಗೆ ತಿದ್ದುಪಡಿಗೂ ವಿನಂತಿಸಲಾಗಿದೆ. ಈ ಬಗ್ಗೆ ಕೇಂದ್ರ ಹಣಕಾಸು ಸಚಿವರು ಸಕಾರಾತ್ಮಕವಾಗಿ ಸ್ಪಂದಿಸಿದ್ದಾರೆ ಎಂದು ತಿಳಿಸಿದರು.

ಇದೇ ಸಂದರ್ಭದಲ್ಲಿ ಠೇವಣಿದಾರರ ಹಿತರಕ್ಷಣೆಗಾಗಿ ಮಹಾರಾಷ್ಟ್ರ ಮಾದರಿಯ ಠೇವಣಿ ಸುರಕ್ಷಾ ವಿಮಾ ಯೋಜನೆಯ ಅಧ್ಯಯನ ಮಾಡುವುದಕ್ಕಾಗಿ ಸಂಯುಕ್ತ ಸಹಕಾರಿಯ ಉಪಾಧ್ಯಕ್ಷರಾದ ಶ್ರೀ ಜಗದೀಶ ಕವಟಗಿಮಠ ರವರ ನೇತೃತ್ವದಲ್ಲಿ ಬೆಳಗಾವಿ ಜಿಲ್ಲೆಯ ಐದು ಹಿರಿಯ ಹಾಗೂ ಅನುಭವಿ ಸಹಕಾರಿಗಳ ನಿಯೋಗವೊಂದನ್ನು ರಚಿಸಲಾಗುವುದು. ಈ ತಂಡ ಮಹಾರಾಷ್ಟ್ರದಲ್ಲಿ ಈ ಯೋಜನೆಯನ್ನು ಅಧ್ಯಯನ ಮಾಡಿ ವರದಿಯನ್ನು ಸಲ್ಲಿಸಿದ ನಂತರ ಕರ್ನಾಟಕದಲ್ಲಿ ಸಂಯುಕ್ತ ಸಹಕಾರಿಯ ಮೂಲಕ ಅದನ್ನು ಅನುಷ್ಠಾನಗೊಳಿಸುವ ಬಗ್ಗೆ ಕ್ರಮವಿಡಲಾಗುವುದು ಎಂದು ತಿಳಿಸಿದರು.

ಮುಖ್ಯ ಅತಿಥಿಗಳಾಗಿ ಸಂಯುಕ್ತ ಸಹಕಾರಿಯ ನಿಕಟಪೂರ್ವ ಅಧ್ಯಕ್ಷ ಹಾಲಿ ನಿರ್ದೇಶಕರಾದ ಶ್ರೀ ಗುರುನಾಥ ಜಾಂತೀಕರ ಅವರು ಮಾತನಾಡಿ ರಾಜ್ಯದ ಸೌಹಾರ್ದ ಸಹಕಾರಿಗಳು ಆದಾಯ ತೆರಿಗೆ ವಿಷಯದಲ್ಲಿ ಆತಂಕಪಡುವ, ಹೆದರುವ ಅಗತ್ಯವಿಲ್ಲ. ನಮ್ಮ ಸಹಕಾರಿಗಳ ಆಡಳಿತವನ್ನು ಪಾರದರ್ಶಕವಾಗಿ ಪ್ರಾಮಾಣಿಕವಾಗಿ ನಡೆಸಿಕೊಂಡು ಹೋಗಬೇಕು. ಉದ್ದೇಶ ಪೂರ್ವಕವಾಗಿ ತಪ್ಪು ಮಾಡಿದವರನ್ನು ಶಿಕ್ಷೆ ಮಾಡಿ. ಎಲ್ಲರನ್ನೂ ಒಂದೆ ತಕ್ಕಡಿಯಲ್ಲಿಟ್ಟು ತೂಕ ಮಾಡಬಾರದು. ಸಹಕಾರ ಕ್ಷೇತ್ರ ಈ ದೇಶದ ಆರ್ಥಿಕ ಅಭಿವೃದ್ಧಿಗೆ ಸಾಕಷ್ಟು ಮಹತ್ವದ ಕಾಣಿಕೆ ನೀಡಿದೆ. ಕಾರ್ಯನಿರ್ವಹಣೆಯಲ್ಲಿ ದೋಷವಿದ್ದರೆ ತಿದ್ದುವ ಕ್ರಮವಿಡಿ. ಬೆಳಗಾವಿ ಜಿಲ್ಲೆ ಸಹಕಾರ ಕ್ಷೇತ್ರದಲ್ಲಿ ಸಾಕಷ್ಟು ಅಭಿವೃದ್ಧಿಯನ್ನು ಸಾಧಿಸಿದೆ. ಈ ಹೆಸರನ್ನು ಉಳಿಸಿಕೊಳ್ಳುವ ಜವಾಬ್ದಾರಿ ಬೆಳಗಾವಿಯ ಎಲ್ಲ ಸಹಕಾರಿಗಳ ಮೇಲೆ ಅವಲಂಬಿತವಾಗಿದೆ ಎಂದರು.

ಪ್ರಾರಂಭದಲ್ಲಿ ಶ್ರೀಮತಿ ಶಿಲ್ಪಾ ಹೊಸಮನಿ ಹಾಗೂ ಶ್ರೀಮತಿ ಪ್ರತಿಭಾ ಮಠರವರಿಂದ ಪ್ರಾರ್ಥನೆ ನಂತರ ಪ್ರಾಂತೀಯ ವ್ಯವಸ್ಥಾಪಕರಾದ ಶ್ರೀ

ಶ್ರೀಕಾಂತ ಬರುವೆಯವರು ಅತಿಥಿಗಳನ್ನು ಹಾಗೂ ಎಲ್ಲ ಪ್ರತಿನಿಧಿಗಳನ್ನು ಸ್ವಾಗತಿಸಿದರು.

ಪ್ರಾಸ್ತಾವಿಕ ಭಾಷಣವನ್ನು ಸಂಯುಕ್ತ ಸಹಕಾರಿಯ ವ್ಯವಸ್ಥಾಪಕ ನಿರ್ದೇಶಕರಾದ ಶ್ರೀ ಶರಣಗೌಡ ಜಿ ಪಾಟೀಲ ರವರು ನೆರವೇರಿಸಿ ರಾಜ್ಯದ 'ಸೌಹಾರ್ದ ಸಹಕಾರಿಗಳ ನಡೆ ಗುಣಮಟ್ಟದ ಕಡೆ' ಎಂಬ ಘೋಶ ವಾಕ್ಯವನ್ನು ಪ್ರಾಮಾಣಿಕವಾಗಿ ಅನುಷ್ಠಾನಗೊಳಿಸುವುದಕ್ಕಾಗಿ ಸೌಹಾರ್ದ ಸಹಕಾರಿಗಳ ಗುಣ ಮಟ್ಟವನ್ನು ಹೆಚ್ಚಿಸುವುದಕ್ಕಾಗಿ ಸಂಯುಕ್ತ ಸಹಕಾರಿ ಈ ರೀತಿ ಸಮಾಲೋಚನಾ ಸಭೆಗಳನ್ನು ಏರ್ಪಡಿಸಿ ಸಹಕಾರಿಗಳಿಗೆ ಶಿಕ್ಷಣ, ತರಬೇತಿ, ಹಾಗೂ ಸಮಸ್ಯೆಗಳ ಬಗ್ಗೆ ಸಮಾಲೋಚನಾ ಮಾಡಲಾಗುತ್ತಿದೆ. ಪ್ರಸಕ್ತ ವಿಶ್ವಾದ್ಯಂತ ಕರೋನ ವೈರಸ್ ಭೀತಿಯ ಹಿನ್ನೆಲೆಯಲ್ಲಿ ರಾಜ್ಯಾದ್ಯಂತ ಹಲವಾರು ಮುಂಜಾಗರೂಕತಾ ಕ್ರಮವನ್ನು ಕೈಗೊಳ್ಳಲಾಗಿದೆ. ಅದರಂತೆ ಸೌಹಾರ್ದ ಸಹಕಾರಿಗಳಲ್ಲಿಯೂ ಅವರವರ ವ್ಯಾಪ್ತಿಯಲ್ಲಿ ಮುಂಜಾಗ್ರತೆ ಕ್ರಮಗಳನ್ನು ತೆಗೆದುಕೊಳ್ಳಬೇಕೆಂದು ಸೂಚಿಸಿದರು.

ಸಮಾರಂಭದಲ್ಲಿ ಸಂಯುಕ್ತ ಸಹಕಾರಿಯ ನಿರ್ದೇಶಕ ಶ್ರೀ ಸಿದ್ದರಾಮಪ್ಪ ಉಪ್ಪಿನ, ಶ್ರೀಮತಿ ಸರಸ್ವತಿ ಎನ್. ರವಿ ಹಾಗೂ ಅನೇಕ ಗಣ್ಯರು ಭಾಗವಹಿಸಿದ್ದರು. ಸಮಾಲೋಚನಾ ಸಭೆಯ ಪೂರ್ವದಲ್ಲಿ ಚಾರ್ಟರ್ಡ ಅಕೌಂಟಂಟ್ ಶ್ರೀ ಉಮೇಶ ಬೋಳಮಾಲ್ ಇವರು ಆದಾಯ ತೆರಿಗೆ ವಿಷಯಗಳ ಬಗ್ಗೆ ಮುನ್ನೆಚ್ಚರಿಕೆ ಕ್ರಮಗಳ ಬಗ್ಗೆ ಉಪನ್ಯಾಸ ನೀಡಿದರು. ಮತ್ತು ಪ್ರತಿನಿಧಿಗಳ ಪ್ರಶ್ನೆಗಳಿಗೆ ಸ್ಪಂದಿಸಿದರು.

"ಅಂತರರಾಷ್ಟ್ರೀಯ ಮಹಿಳಾ ದಿನಾಚರಣೆ" ಕಾರ್ಯಕ್ರಮ

ಚಾಮರಾಜನಗರ : ದಿನಾಂಕ 10.03.2020ರಂದು ಚಾಮರಾಜನಗರ ಜಿಲ್ಲಾ ಸೌಹಾರ್ದ ಸಹಕಾರಿಗಳ ಮಹಿಳಾ ನಿರ್ದೇಶಕರು ಹಾಗೂ ಮಹಿಳಾ ಸಿಬ್ಬಂದಿಗಳಿಗೆ "ಅಂತರರಾಷ್ಟ್ರೀಯ ಮಹಿಳಾ ದಿನಾಚರಣೆ" ಕಾರ್ಯಕ್ರಮದ ಪ್ರಯುಕ್ತ ಉದ್ಘಾಟನೆಯನ್ನು ಶ್ರೀಮತಿ ರತ್ನಮ್ಮ, ಮಾಜಿ ಜಿಲ್ಲಾ ಪಂಚಾಯತಿ ಸದಸ್ಯರು, ಚಾಮರಾಜನಗರ ಇವರು ನೇರವೇರಿಸಿದರು. ಕಾರ್ಯಕ್ರಮದ ಅಧ್ಯಕ್ಷತೆಯನ್ನು ಶ್ರೀ ಬಾಬು ರಾಮಸಮುದ್ರ, ಅಧ್ಯಕ್ಷರು ಶ್ರೀ ಸಿದ್ದಮಲ್ಲೇಶ್ವರ ಸೌಹಾರ್ದ ಸಹಕಾರಿ ನಿ., ಚಾಮರಾಜನಗರ ಇವರು ವಹಿಸಿದ್ದರು. ಮುಖ್ಯ ಅತಿಥಿಗಳಾಗಿ ಶ್ರೀಮತಿ ಲಕ್ಷ್ಮೀ ಜಯಶಂಕರ್, ಮತ್ತು ಶ್ರೀ ಚಂದ್ರಶೇಖರಯ್ಯ, ಜಿಲ್ಲಾ ಸಂಯೋಜಕರು ವೇದಿಕೆ ಮೇಲೆ ಹಾಜರಿದ್ದರು.

"ಮಹಿಳಾ ಸಬಲೀಕರಣ" ವಿಷಯದ ಕುರಿತು ಶ್ರೀಮತಿ ಲಕ್ಷ್ಮೀ ಜಯಶಂಕರ ರವರು "ಸಮರ್ಥ ಮತ್ತು ಸಮೃದ್ಧ ಭಾರತಕ್ಕಾಗಿ ಮಹಿಳೆಯರ ಪಾತ್ರ" ವಿಷಯದ ಕುರಿತು ಡಾ. ನಿರ್ಮಲಾ, ಪ್ರಾಂಶುಪಾಲರು, ಚಾಮರಾಜನಗರ ಇವರುಗಳು ಸಂಪನ್ಮೂಲ ವ್ಯಕ್ತಿಗಳಾಗಿ ನಡೆಸಿಕೊಟ್ಟರು. ಸದರಿ ಕಾರ್ಯಕ್ರಮದಲ್ಲಿ ಭಾಗವಹಿಸಿದವರಿಗಾಗಿ ಒಳಾಂಗಣ ಸ್ಪರ್ಧೆಗಳಾದ ಸ್ಪೂನ್ & ಲೆಮೆನ್, ಮ್ಯೂಸಿಕಲ್ ಚೇರ್, ಬೆಂಕಿ ಇಲ್ಲದ ಅಡುಗೆ ಹಾಗೂ ರಂಗೋಲಿ ಸ್ಪರ್ಧೆಯನ್ನು ಏರ್ಪಡಿಸಲಾಗಿತ್ತು ವಿಜೇತರಿಗೆ ಪ್ರೋತ್ಸಾಹದ ಸಲುವಾಗಿ ಬಹುಮಾನವನ್ನು ವಿತರಿಸಲಾಯಿತು.

ಸದರಿ ಕಾರ್ಯಕ್ರಮದಲ್ಲಿ ಜಿಲ್ಲೆಯ 17 ಸೌಹಾರ್ದ ಸಹಕಾರಿಗಳಲ್ಲಿ 13 ಸೌಹಾರ್ದ ಸಹಕಾರಿಗಳಿಂದ ಒಟ್ಟು 37 ಮಹಿಳೆಯರು, 02 ಜನ ಮಹಿಳಾ ಸಂಪನ್ಮೂಲ ವ್ಯಕ್ತಿಗಳು, 03 ಜನ ಮಹಿಳಾ ತೀರ್ಪುಗಾರರು ಹಾಗೂ 12 ಜನ ಇತರೆ ಒಟ್ಟು 52 ಜನರು ಭಾಗವಹಿಸಿದ್ದರು.

ವಿಜಯಪುರ : ದಿನಾಂಕ 08.03.2020ರಂದು ಶ್ರೀ ವರಮಹಾಲಕ್ಷ್ಮೀ ಮಹಿಳಾ ಸೌಹಾರ್ದ ಸಹಕಾರಿ ನಿ., ವಿಜಯಪುರ ವತಿಯಿಂದ ಅಂತರರಾಷ್ಟ್ರೀಯ ಮಹಿಳಾ ದಿನಾಚರಣೆಯನ್ನು ಶ್ರೀ ಜೈ ಸಂತೋಷಿ ಮಾತಾ ದೇವಸ್ಥಾನದ ಆವರಣದಲ್ಲಿ ಆಚರಿಸಲಾಯಿತು. ಕಾರ್ಯಕ್ರಮದಲ್ಲಿ ಬಿ.ಎಮ್. ಪಾಟೀಲ ವೈದ್ಯಕೀಯ ಮಹಾವಿದ್ಯಾಲಯದ ಸ್ತ್ರೀ ರೋಗ ತಜ್ಞೆ ಡಾ. ಶೈಲಜಾ ಬಿದರಿ, ಸಮುದಾಯ ವೈದ್ಯಕೀಯ ವಿಭಾಗದ ಮುಖ್ಯಸ್ಥರಾದ ಡಾ. ಶೈಲಜಾ ಪಾಟೀಲ ಹಾಗೂ ಸಮುದಾಯ ವೈದ್ಯಕೀಯ ವಿಭಾಗದ ಉಪನ್ಯಾಸಕರಾದ ಡಾ. ವೀನಾ ಅಲಗೂರ ಮತ್ತು ಸಹಕಾರಿಯ ಅಧ್ಯಕ್ಷರಾದ ಶ್ರೀಮತಿ ಮಹಾದೇವಿ ಬಿದರಕುಂಡಿ ಇವರುಗಳು ಜ್ಯೋತಿ ಬೆಳಗಿಸುವ ಮೂಲಕ ಚಾಲನೆ ನೀಡಿದರು. ಕಾರ್ಯಕ್ರಮ ಉದ್ಘಾಟಿಸಿ ಮಾತನಾಡಿದ ಅತಿಥಿಗಳು ಸ್ತ್ರೀ ರೋಗದ ಕುರಿತು ವಿವಿರವಾದ ಮಾಹಿತಿ ನೀಡಿದರು. ಕಾರ್ಯಕ್ರಮದಲ್ಲಿ ಸಹಕಾರಿಯ ಆಡಳಿತ ಮಂಡಳಿ ನಿರ್ದೇಶಕರು ಹಾಗೂ ಸಿಬ್ಬಂದಿ ವರ್ಗದವರು ಉಪಸ್ಥಿತರಿದ್ದರು.

ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿ ನಿ.,

ಶಾಸನಬದ್ಧ ಸಹಕಾರಿ ಸಂಸ್ಥೆ
ನಿರ್ಮಾಣ ಭವನ, ಡಾ.ರಾಜಕುಮಾರ ರಸ್ತೆ, 1ನೇ ಬ್ಲಾಕ್, ರಾಜಾಜಿನಗರ, ಬೆಂಗಳೂರು – 560010
www.souharda.coop, Ph: 080–23378375–80, Email:souharda@souharda.coop

ಕೊರೋನಾ ವೈರಸ್ ಹೋರಾಟಕ್ಕೆ ಉದಾರ ದೇಣಿಗೆ ನೀಡುವ ಕುರಿತು

ರಾಜ್ಯದ ಸೌಹಾರ್ದ ಸಹಕಾರಿಗಳಲ್ಲಿ ಒಂದು ಮನವಿ,

ಕೊರೋನಾ ವೈರಸ್ (COVID-19) ವಿಶ್ವದ 178ಕ್ಕೂ ಹೆಚ್ಚು ದೇಶಗಳನ್ನು ವ್ಯಾಪಿಸಿದ್ದು, ಭಾರತದಲ್ಲೂ ವೇಗವಾಗಿ ಹರಡುತ್ತಿದೆ. ಭಾರತದಲ್ಲಿ ಈಗಾಗಲೇ ಸೋಂಕಿತರ ಸಂಖ್ಯೆ ಒಂದು ಸಾವಿರವನ್ನು ದಾಟಿ ಮುಂದುವರೆಯುತ್ತಿದ್ದರೆ ಕರ್ನಾಟಕ ರಾಜ್ಯದಲ್ಲೂ ಸೋಂಕಿತರ ಪ್ರಮಾಣ ಹೆಚ್ಚಾಗುತ್ತಿರುವುದು ಆತಂಕವನ್ನುಂಟು ಮಾಡುತ್ತಿದೆ. ಅಗತ್ಯ ತುರ್ತು ಸೇವೆಗಳನ್ನು ಹೊರತುಪಡಿಸಿ ಉಳಿದೆಲ್ಲ ಸೇವೆಗಳು ಬಂದ್ ಮಾಡಲ್ಪಟ್ಟಿರುವುದರಿಂದ ರಾಜ್ಯದ, ದೇಶದ ಆರ್ಥಿಕತೆಗೆ ಕೂಡ ಹಾನಿಯುಂಟಾಗುತ್ತಿದೆ. ಕೊರೋನಾ ವೈರಸ್ ವಿರುದ್ಧದ ಹೋರಾಟಕ್ಕೆ ದೇಣಿಗೆ ನೀಡುವಂತೆ ದೇಶದ ಪ್ರಧಾನ ಮಂತ್ರಿಗಳು ಹಾಗೂ ರಾಜ್ಯದ ಮುಖ್ಯಮಂತ್ರಿಗಳು ಮನವಿ ಮಾಡಿರುತ್ತಾರೆ. ಈ ಮನವಿಗೆ ಸ್ಪಂದಿಸಿ ಸಂಘ ಸಂಸ್ಥೆಗಳು, ಕಂಪನಿಗಳು, ಕೈಗಾರಿಕಾ ಪ್ರಮುಖರು, ಕಲಾವಿದರು, ಸೈನಿಕರು ಸೇರಿದಂತೆ ದೇಶದ ಜನತೆ ವೈಯಕ್ತಿಕವಾಗಿ ಕೂಡ ಕೊರೊನಾ ವಿರುದ್ಧದ ಹೋರಾಟಕ್ಕಾಗಿ ದೇಣಿಗೆ ನೀಡುತ್ತಿದ್ದಾರೆ. ಸೌಹಾರ್ದ ಸಹಕಾರಿಗಳು ಕೂಡ ಈ ಸಂದರ್ಭದಲ್ಲಿ ನೆರವು ನೀಡಲು ಮುಂದಾಗುವುದು ಅವಶ್ಯವಾಗಿದೆ.

ಈ ಹಿಂದೆ, ಉತ್ತರ ಕರ್ನಾಟಕ, ಕೊಡಗು, ಜಮ್ಮು ಕಾಶ್ಮೀರ, ಕೇರಳ, ನೇಪಾಳಗಳಲ್ಲಿ ನೆರೆ ಹಾವಳಿಯಾದಾಗ ನೆರೆ ಸಂತ್ರಸ್ತರಿಗೆ ತಾವೆಲ್ಲ ಉದಾರ ದೇಣಿಗೆ ನೀಡಿರುವುದನ್ನು ಸ್ಮರಿಸುತ್ತ ಸಂಯುಕ್ತ ಸಹಕಾರಿ ತಮಗೆ ಕೃತಜ್ಞತೆಗಳನ್ನು ಸಲ್ಲಿಸುತ್ತದೆ. ಅದರಂತೆ ಈ ಬಾರಿಯೂ ಕೂಡ ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿಯು ಕೊರೋನಾ ವೈರಸ್ ಪೀಡಿತರ ಚಿಕಿತ್ಸೆಗಾಗಿ ಹಾಗೂ ಮುಂಬರುವ ಇನ್ನಷ್ಟು ಮಹತ್ವದ ಕೊರೋನಾ ವಿರುದ್ಧದ ಹೋರಾಟಕ್ಕಾಗಿ ಎಲ್ಲ ಸೌಹಾರ್ದ ಸಹಕಾರಿಗಳಿಂದ ದೇಣಿಗೆಯನ್ನು ಸಂಗ್ರಹಿಸಿ ಮಾನ್ಯ ಮುಖ್ಯಮಂತ್ರಿಗಳ ಪರಿಹಾರ ನಿಧಿಗೆ ನೀಡಲು ಉದ್ದೇಶಿಸಿದೆ. ಆದ್ದರಿಂದ ರಾಜ್ಯದ ಎಲ್ಲ ಸೌಹಾರ್ದ ಸಹಕಾರಿಗಳು ಉದಾರವಾಗಿ ದೇಣಿಗೆಯನ್ನು ಕಳುಹಿಸಿ ಈ ವಿಪತ್ತಿನ ಪರಿಹಾರ ಕಾರ್ಯದಲ್ಲಿ ಭಾಗಿಗಳಾಗಬೇಕೆಂದು ಸಂಯುಕ್ತ ಸಹಕಾರಿಯ ಆಡಳಿತ ಮಂಡಲಿಯು ಅಪೇಕ್ಷಿಸುತ್ತದೆ. ಸಶಕ್ತ ಸೌಹಾರ್ದ ಸಹಕಾರಿಗಳು ಹೆಚ್ಚಿನ ಪ್ರಮಾಣದಲ್ಲಿ ದೇಣಿಗೆಯನ್ನು ನೀಡಲು ವಿನಂತಿಸಿದೆ.

ದೇಣಿಗೆ ಕಳುಹಿಸುವ ಸೌಹಾರ್ದ ಸಹಕಾರಿಗಳು ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿ ನಿ., (KARNATAKA STATE SOUHARDA FEDERALE COOPARETIVE Ltd.,) ಎಂಬ ಹೆಸರಿನಲ್ಲಿ ಬೆಂಗಳೂರಿನಲ್ಲಿ ಸಂದಾಯವಾಗುವಂತೆ ಚೆಕ್/ಡಿಡಿ ಕಳುಹಿಸಲು ಅಥವಾ ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿ ನಿ., ಇದರ Current Account No. 0243102000013873, IDBI Bank, Malleshwaram Branch, IFSC Code: IBKL0000243 ಇದಕ್ಕೆ RTGS/NEFT ಮೂಲಕ ಹಣ ಕಳುಹಿಸಲು ಕೋರಿದೆ. RTGS/NEFT ಮೂಲಕ ಹಣ ವರ್ಗಾಯಿಸಿದ್ದಲ್ಲಿ, ಸದರಿ ವಿವರಗಳನ್ನು ಸಂಯುಕ್ತ ಸಹಕಾರಿಗೆ ಲಿಖಿತವಾಗಿ ಕಳುಹಿಸುವುದು.

ಬನ್ನಿ, ನಾವುಗಳೆಲ್ಲ ಈ ವಿಪತ್ತಿನ ಪರಿಹಾರ ಕಾರ್ಯದಲ್ಲಿ ಭಾಗಿಗಳಾಗೋಣ, ಮಾನವೀಯತೆಯನ್ನು ಮೆರೆಯೋಣ.

ವಂದನೆಗಳೊಂದಿಗೆ,

ಸಹಿ/–	ಸಹಿ/–	ಸಹಿ/–
ಶ್ರೀ ಬಿ.ಹೆಚ್. ಕೃಷ್ಣಾರೆಡ್ಡಿ	ಶ್ರೀ ಜಗದೀಶ ಕವಟಗಿಮಠ	ಶರಣಗೌಡ ಜಿ. ಪಾಟೀಲ್
ಅಧ್ಯಕ್ಷರು	ಉಪಾಧ್ಯಕ್ಷರು	ವ್ಯವಸ್ಥಾಪಕ ನಿರ್ದೇಶಕರು

ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿ ನಿ.,

ಶಾಸನಬದ್ಧ ಸಹಕಾರಿ ಸಂಸ್ಥೆ

ನಿರ್ಮಾಣ ಭವನ, ಡಾ.ರಾಜಕುಮಾರ ರಸ್ತೆ, 1ನೇ ಬ್ಲಾಕ್, ರಾಜಾಜಿನಗರ, ಬೆಂಗಳೂರು – 560010

www.souharda.coop, Ph: 080–23378375–80, Email:souharda@souharda.coop

ಜಾಗೃತಿ ಸುತ್ತೋಲೆ

ಇವರಿಗೆ :

ಮಾನ್ಯ ಅಧ್ಯಕ್ಷರು/ಮುಖ್ಯಕಾರ್ಯನಿರ್ವಾಹಕರು

ರಾಜ್ಯದ ಎಲ್ಲ ಸೌಹಾರ್ದ ಸಹಕಾರಿಗಳು

ಮಾನ್ಯರೇ,

ವಿಷಯ : ಕೊರೋನಾ ವೈರಸ್ ಜಾಗೃತಿ ಹಾಗೂ ಸೌಹಾರ್ದ ಸಹಕಾರಿಗಳ ಕಾರ್ಯನಿರ್ವಹಣೆ ಕುರಿತು.

ಉಲ್ಲೇಖ : 1. ಸಂಯುಕ್ತ ಸಹಕಾರಿಯ ಪತ್ರ ಸಂಖ್ಯೆ : ಕರಾಸೌಸಂಸ/ಸಿ&ಆಸು/31/2019–20, ದಿನಾಂಕ:13.03.2020

2. ಸಂಯುಕ್ತ ಸಹಕಾರಿಯ ಪತ್ರ ಸಂಖ್ಯೆ:ಕರಾಸೌಸಂಸ/ಸಿ&ಆಸು/31ಎ/2019–20, ದಿನಾಂಕ:23.03.2020

ಕೊರೋನಾ ವೈರಸ್ (COVID-19) ವಿಶ್ವದ 178ಕ್ಕೂ ಹೆಚ್ಚು ದೇಶಗಳನ್ನು ವ್ಯಾಪಿಸಿದ್ದು, ಭಾರತದಲ್ಲೂ ವೇಗವಾಗಿ ಹರಡುತ್ತಿದೆ. ಸರ್ಕಾರವು ರಾಷ್ಟ್ರೀಯ ಹಾಗೂ ಸ್ಥಳೀಯ ಸಾರ್ವಜನಿಕ ಪ್ರಾಧಿಕಾರಗಳ ಮೂಲಕ ವೈರಸ್ ಹರಡದಂತೆ ಅಗತ್ಯ ಕಾರ್ಯವನ್ನು ಕಾಳಜಿಯಿಂದ ನಿರ್ವಹಿಸುತ್ತಿದೆ. ಸಂಪೂರ್ಣ ದೇಶವನ್ನೇ ಆವರಿಸಿರುವ ಆತಂಕದ ಸಂದರ್ಭದಲ್ಲಿ ಸೌಹಾರ್ದ ಸಹಕಾರಿಗಳು ಕೂಡ ತಮ್ಮ ಸಾಮಾಜಿಕ ಜವಾಬ್ದಾರಿಯನ್ನು ನಿರ್ವಹಿಸುವ ಅಗತ್ಯವಿದೆ. ಕೊರೋನಾ ವೈರಸ್ ಸೋಂಕಿನ ಲಕ್ಷಣಗಳು ಹಾಗೂ ಮುಂಜಾಗೃತಾ ಕ್ರಮಗಳ ಕುರಿತಂತೆ ಸಂಯುಕ್ತ ಸಹಕಾರಿ ಈಗಾಗಲೇ ಉಲ್ಲೇಖ 01ರ ಸುತ್ತೋಲೆಯನ್ನು ನೀಡಿದೆ. ಆದಾಗ್ಯೂ ಇನ್ನೊಮ್ಮೆ ಸಂಕ್ಷಿಪ್ತವಾಗಿ ಈ ಮೂಲಕ ನೆನಪಿಸಲಾಗುತ್ತಿದೆ.

- **ಕೊರೋನಾ ವೈರಸ್ ಸೋಂಕಿನ ಲಕ್ಷಣಗಳು :** ಅಧಿಕ ಜ್ವರ, ನಿರಂತರ ಕೆಮ್ಮು, ತಲೆನೋವು, ಮುಖ್ಯವಾಗಿ ಉಸಿರಾಟ ಸಂಬಂಧಿತ ತೊಂದರೆ.
- **ಕೊರೋನಾ ವೈರಸ್ ಹರಡುವ ಬಗೆ :** ಕೊರೋನಾ ವೈರಸ್ ಸೋಂಕಿತ ವ್ಯಕ್ತಿ ಸೀನಿದಾಗ ಅಥವಾ ಕೆಮ್ಮಿದಾಗ ಸಿಡಿಯುವ ತೇವಾಂಶದ ಕಣಗಳ ಸಂಪರ್ಕಕ್ಕೆ ಬರುವ ವ್ಯಕ್ತಿಗಳಿಗೆ ಈ ವೈರಸ್ ಹರಡುತ್ತದೆ.
- **ಮುಂಜಾಗೃತೆ ಕ್ರಮಗಳು :** ಕೈಗಳನ್ನು ಸ್ವಚ್ಛವಾಗಿ ತೊಳೆಯುವುದು, ಹ್ಯಾಂಡ್ ಸ್ಯಾನಿಟೈಸರ್ ಬಳಸುವುದು, ವ್ಯಕ್ತಿ ವ್ಯಕ್ತಿಗಳ ಮಧ್ಯೆ ಅಂತರ ಕಾಪಾಡಿಕೊಳ್ಳುವುದು, ಸೀನುವಾಗ/ಕೆಮ್ಮುವಾಗ ಕರವಸ್ತ್ರ ಬಳಸುವುದು ಅಥವಾ ಮಾಸ್ಕ್ ಧರಿಸುವುದು, ಪದೇ ಪದೇ ಕಣ್ಣು, ಮೂಗು, ಬಾಯಿಗಳನ್ನು ಸ್ಪರ್ಶಿಸುವುದನ್ನು ತಪ್ಪಿಸುವುದು. ಎಲ್ಲಕ್ಕಿಂತ ಮುಖ್ಯವಾಗಿ ಸರ್ಕಾರ ಘೋಷಿಸಿರುವ ಲಾಕ್‌ಡೌನ್ ಅನ್ನು ಕಡ್ಡಾಯವಾಗಿ ಪಾಲಿಸಿ ಮನೆಯಲ್ಲೆ ಇರುವುದು.

ಸೌಹಾರ್ದ ಸಹಕಾರಿಗಳ ಕಾರ್ಯನಿರ್ವಹಣೆ ಬಗ್ಗೆ ಅಗತ್ಯ ಕ್ರಮವಿಡುವಂತೆ ಈಗಾಗಲೇ ಸಂಯುಕ್ತ ಸಹಕಾರಿಯು ಉಲ್ಲೇಖ 02ರ ಪತ್ರದ ಮೂಲಕ ಸೂಚನೆ ನೀಡಿರುತ್ತದೆ. ಆದಾಗ್ಯೂ, ದೇಶವ್ಯಾಪಿ 14 ಏಪ್ರಿಲ್ 2020ರವರೆಗೆ ಲಾಕ್‌ಡೌನ್ ಘೋಷಣೆ ಜಾರಿಯಲ್ಲಿರುವ ಈ ಅವಧಿಯಲ್ಲಿ ಸೌಹಾರ್ದ ಸಹಕಾರಿಗಳು ತಮ್ಮ ಕಾರ್ಯನಿರ್ವಹಣೆಯ ಕುರಿತು ನಿರಂತರವಾಗಿ ಸಂಯುಕ್ತ ಸಹಕಾರಿ ಸಿಬ್ಬಂದಿಗಳನ್ನು ಸಂಪರ್ಕಿಸುತ್ತಿರುವುದನ್ನು ಗಮನಿಸಿ ಈ ಕೆಳಕಂಡ ಅಂಶಗಳನ್ನು ಈ ಮೂಲಕ ತಿಳಿಸಿದೆ.

1. ಸೌಹಾರ್ದ ಸಹಕಾರಿಗಳ ಕಛೇರಿ ಕಾರ್ಯಚಟುವಟಿಕೆ ಕುರಿತು :

(1) ಸೌಹಾರ್ದ ಸಹಕಾರ ಸಂಸ್ಥೆಗಳು ತನ್ನ ಸದಸ್ಯರಿಂದ ಠೇವಣಿ ಸಂಗ್ರಹಿಸಿದ್ದು ಹಾಗೂ ಸದಸ್ಯರ ಉಳಿತಾಯ ಖಾತೆಗಳನ್ನು ತಮ್ಮಲ್ಲಿ ಹೊಂದಿರುವುದ–ರಿಂದ, ಠೇವಣಿ ಮರುಪಾವತಿ ಹಾಗೂ ತುರ್ತು ಅಗತ್ಯಕ್ಕನುಗುಣವಾಗಿ ಸದಸ್ಯರ ಉಳಿತಾಯ ಖಾತೆಯ ಹಣವನ್ನು ಮರುಪಾವತಿ ಮಾಡುವ ಕುರಿತು ಸಮರ್ಪಕವಾಗಿ ಸೇವೆ ಒದಗಿಸುವ ನಿಟ್ಟಿನಲ್ಲಿ ಕಾರ್ಯನಿರ್ವಹಿಸುವುದು ಅವಶ್ಯಕವಾಗಿರುವುದರಿಂದ ಹಾಗೂ ಗ್ರಾಮೀಣ ಭಾಗದಲ್ಲಿ ಹೆಚ್ಚಾಗಿ

ವ್ಯಾಪಿಸಿರುವ ಸೌಹಾರ್ದ ಸಹಕಾರಿಗಳು ಸಾಮಾಜಿಕ ಸೇವಾಕಾರ್ಯವನ್ನು ಈ ತುರ್ತುಸಂದರ್ಭದಲ್ಲಿ ಮಾಡುವ ಮೂಲಕ ಸಾಮಾಜಿಕ ಕಾಳಜಿಯನ್ನು ವ್ಯಕ್ತಪಡಿಸುವುದು ಕೂಡ ಅವಶ್ಯಕವಾಗಿರುವುದರಿಂದ ಜಿಲ್ಲಾ ಆಡಳಿತ/ಸ್ಥಳೀಯ ಆಡಳಿತದ ಅನುಮತಿ ಪಡೆದು ಅಗತ್ಯ ಕಾರ್ಯನಿರ್ವಹಣೆ ಮಾಡಬಹುದಾಗಿದೆ.

(2) ಕಂಡಿಕೆ (01) ರನ್ವಯ ಕಾರ್ಯನಿರ್ವಹಣೆಯ ಸಂದರ್ಭದಲ್ಲಿ ಅತ್ಯಂತ ಕಡಿಮೆ ಸಿಬ್ಬಂದಿಗಳ ಹಾಜರಾತಿಯೊಂದಿಗೆ ಕಾರ್ಯನಿರ್ವಹಿಸುವುದು. ಮತ್ತು ಸಿಬ್ಬಂದಿಗಳು ಕಛೇರಿಗೆ ಹಾಜರಾಗುವಾಗ, ಹಿಂತಿರುಗುವಾಗ, ಕಛೇರಿಯಲ್ಲಿ ಕಾರ್ಯನಿರ್ವಹಿಸುವಾಗ ಕೊರೋನಾ ವೈರಸ್ ಹರಡದಂತೆ ವಹಿಸಬೇಕಾದ ಎಲ್ಲ ಜಾಗೃತ ಕ್ರಮಗಳನ್ನು ಅನುಸರಿಸುವಂತೆ ಕ್ರಮವಿಡುವುದು.

(3) ಕಂಡಿಕೆ (01)ರನ್ವಯ ಕಛೇರಿ ತೆರೆಯಲು ಅವಕಾಶವಾಗದ ಹಾಗೂ ತಮ್ಮ ಆಡಳಿತ ಮಂಡಳಿಯಲ್ಲಿ ನಿರ್ಧರಿಸುವ ಮೂಲಕ ಕಛೇರಿಯ ಕಾರ್ಯಚಟುವಟಿಕೆ ಸ್ಥಗಿತಗೊಳಿಸಿರುವ ಸೌಹಾರ್ದ ಸಹಕಾರಿಗಳು – ಆರೋಗ್ಯ ಹಾಗೂ ಜೀವನಾವಶ್ಯಕ ಅನಿವಾರ್ಯತೆಯಿಂದ ತುರ್ತು ಹಣದ ಬೇಡಿಕೆಗಾಗಿ ಸದಸ್ಯರು ಸಂಪರ್ಕಿಸಬಹುದಾದ ಸಂಪರ್ಕ ಸಂಖ್ಯೆಯನ್ನು ತಮ್ಮ ಸಹಕಾರಿಯ/ಸಹಕಾರಿ ಶಾಖೆಯಲ್ಲಿ ಪ್ರದರ್ಶಿಸುವುದು ಹಾಗೂ ಸದಸ್ಯರಿಂದ ಅಂತಹ ಕೋರಿಕೆ ಬಂದ ಸಂದರ್ಭದಲ್ಲಿ ಅವರ ಠೇವಣಿ/ಖಾತೆಯಲ್ಲಿರುವ ಹಣವನ್ನು ಸ್ಥಳೀಯ ಆಡಳಿತದ ಅನುಮತಿಗೊಳಪಟ್ಟು ಸದರಿ ಸದಸ್ಯರಿಗೆ ತಲುಪಿಸಲು ಕ್ರಮವಿಡಬಹುದಾಗಿರುತ್ತದೆ.

2. 2019–20ನೇ ಸಾಲಿನ ಆರ್ಥಿಕ ವರ್ಷಾಂತ್ಯದ ಕುರಿತು :

ಆರ್ಥಿಕ ಚಟುವಟಿಕೆಗಳು ಸ್ಥಗಿತಗೊಂಡಿರುವ ಕಾರಣದಿಂದಾಗಿ 2019–20ರ ಆರ್ಥಿಕ ವರ್ಷಾಂತ್ಯವನ್ನು ಮುಂದೂಡಬೇಕೆಂಬುದು ಸೌಹಾರ್ದ ಸಹಕಾರಿಗಳ ಅಪೇಕ್ಷೆಯಾಗಿತ್ತು. ಈ ಬಗ್ಗೆ ಸಂಯುಕ್ತ ಸಹಕಾರಿ ಮಾನ್ಯ ಪ್ರಧಾನ ಮಂತ್ರಿಗಳಿಗೆ, ಮಾನ್ಯ ಕೇಂದ್ರ ಹಣಕಾಸು ಸಚಿವರಿಗೆ, ರಾಜ್ಯ ಸರ್ಕಾರಕ್ಕೆ ಪತ್ರ ಬರೆದಿರುತ್ತದೆ. ಆದರೆ, ಸಹಕಾರ ಸಂಸ್ಥೆಗಳ ಆರ್ಥಿಕ ವರ್ಷವನ್ನು ಮುಂದೂಡುವ ಬಗ್ಗೆ ರಾಜ್ಯ/ಕೇಂದ್ರ ಸರ್ಕಾರದಿಂದ ಇದುವರೆಗೆ ಸಂಯುಕ್ತ ಸಹಕಾರಿಗೆ ಪ್ರತ್ಯುತ್ತರ ಅಥವಾ ಈ ಕುರಿತು ಯಾವುದೇ ಆದೇಶ ಬಂದಿರುವುದಿಲ್ಲ, ಆದಕಾರಣ 31.03.2020ರಂತೆ ಕೊನೆಗೊಳ್ಳುವ 2019–20ರ ಆರ್ಥಿಕ ವರ್ಷಾಂತ್ಯದಲ್ಲಿ ಯಾವುದೇ ಬದಲಾವಣೆ ಇರುವುದಿಲ್ಲ.

3. ಸಾಲದ ಕಂತು ಪಾವತಿ ಕುರಿತು :

(1) ಅಲ್ಪಾವಧಿ ಹಾಗೂ ದೀರ್ಘಾವಧಿ ಸಾಲದ ಕಂತು ಪಾವತಿಯ ಅವಧಿಯನ್ನು ಆರ್‌ಬಿಐ ಮೂರು ತಿಂಗಳ ಕಾಲ ಮುಂದೂಡಿರುತ್ತದೆ. ಆದರೆ, ಈ ಮುಂದೂಡುವಿಕೆಯು ಪಟ್ಟಣ ಸಹಕಾರ ಬ್ಯಾಂಕುಗಳನ್ನು ಹೊರತುಪಡಿಸಿ ಇನ್ನುಳಿದ ಸೌಹಾರ್ದ ಸಹಕಾರ ಸಂಸ್ಥೆಗಳಿಗೆ ಅನ್ವಯವಾಗುವುದಿಲ್ಲ ಹಾಗೂ ಸೌಹಾರ್ದ ಸಹಕಾರಿಗಳಲ್ಲಿನ ಸಾಲದ ಕಂತು ಪಾವತಿಯನ್ನು ಮುಂದೂಡುವ ಬಗ್ಗೆ ರಾಜ್ಯ ಸರ್ಕಾರ ಕೂಡ ಯಾವುದೇ ಆದೇಶ ಹೊರಡಿಸಿರುವುದಿಲ್ಲ.

(2) ಆದರೆ, ಕೊರೋನಾ ವೈರಸ್‌ನ ಈ ಆತಂಕದ ಹಾಗೂ ಲಾಕ್‌ಡೌನ್ ಸಂದರ್ಭದಲ್ಲಿ ಸೌಹಾರ್ದ ಸಹಕಾರಿಗಳು ಸಾಮಾಜಿಕ ಪರಿಸ್ಥಿತಿಯನ್ನು ಗಮನದಲ್ಲಿರಿಸಿಕೊಂಡು ಸಾಲ ವಸೂಲಾತಿಯ ಕುರಿತು ತಮ್ಮ ತಮ್ಮ ಸಹಕಾರಿಯ ಆಡಳಿತ ಮಂಡಳಿಯಲ್ಲಿ ಸೂಕ್ತವಾದ ನಿರ್ಧಾರವನ್ನು ತೆಗೆದುಕೊಳ್ಳಬಹುದಾಗಿದೆ.

ಈ ಮೇಲ್ಕಂಡ ವಿಷಯಗಳನ್ನು ಗಮನಿಸಿ ಸೌಹಾರ್ದ ಸಹಕಾರಿಗಳು ಅಗತ್ಯ ಕಾರ್ಯನಿರ್ವಹಣೆ ಮಾಡುವುದು ಹಾಗೂ ಕೇಂದ್ರ ಸರ್ಕಾರ/ರಾಜ್ಯ ಸರ್ಕಾರ/ಜಿಲ್ಲಾ ಆಡಳಿತ/ಸ್ಥಳೀಯ ಆಡಳಿತಗಳು ಸಂದರ್ಭಾನುಸಾರ ಕಾಲಕಾಲಕ್ಕೆ ಹೊರಡಿಸುವ, ಸೌಹಾರ್ದ ಸಹಕಾರಿಗಳಿಗೆ ಅನ್ವಯವಾಗುವ ನಿರ್ದೇಶನ/ಸುತ್ತೋಲೆ/ಪತ್ರಿಕಾ ಪ್ರಕಟಣೆಗಳನ್ನು ಪಾಲಿಸುವುದು.

ವಂದನೆಗಳೊಂದಿಗೆ,

(ಶರಣಗೌಡ ಜಿ. ಪಾಟೀಲ)
ವ್ಯವಸ್ಥಾಪಕ ನಿರ್ದೇಶಕ

(ಕೊರೋನಾ ವೈರಸ್ ಹರಡದಂತೆ ಜಾಗೃತಿ ವಹಿಸೋಣ, ಆರೋಗ್ಯಕರ ಸಮಾಜ ನಿರ್ಮಾಣದಲ್ಲಿ ಭಾಗವಹಿಸೋಣ)

ಸಹಕಾರ ಸಂಸ್ಥೆಗಳ / ಸಹಕಾರಿ ಬ್ಯಾಂಕುಗಳ ಚುನಾವಣೆ ಮುಂದೂಡುವ ಕುರಿತು ಸುತ್ತೋಲೆ

ಸಹಕಾರ ಚುನಾವಣಾ ಪ್ರಾಧಿಕಾರ

ಟಿ.ಟಿ.ಎಂ.ಸಿ. ಕಟ್ಟಡ, 3ನೇ ಮಹಡಿ, ಎ-ಬ್ಲಾಕ್, ಶ್ರೀಕೆಂಗಲ್‌ಹನುಮಂತಯ್ಯ ರಸ್ತೆ, ಶಾಂತಿ ನಗರ, ಬೆಂಗಳೂರು-27.

e-mail : coeckarnataka@gmail.com
Phone : 080-22220066 / 29709014

ಸಂಖ್ಯೆ:ಸಚುಪ್ರಾ/ಆಡಳಿತ/ಚುನಾವಣೆ/ಕೊರೋನಾ/2020

ದಿನಾಂಕ 26.03.2020

ಸುತ್ತೋಲೆ

ವಿಷಯ : ರಾಜ್ಯದಲ್ಲಿ ಕೋರೋನಾ ವೈರಸ್ ಹರಡದಂತೆ ಮುಂಜಾಗೃತ ಕ್ರಮವಾಗಿ ಸಹಕಾರ ಸಂಘಗಳ / ಸಹಕಾರಿ ಬ್ಯಾಂಕುಗಳ ಚುನಾವಣೆಗಳನ್ನು ಮುಂದೂಡುವ ಬಗ್ಗೆ.

ಉಲ್ಲೇಖ :
01) ಈ ಕಛೇರಿಯ ಸಮಸಂಖ್ಯೆಯ ಸುತ್ತೋಲೆ ದಿನಾಂಕ : 19.03.2020.
02) ಈ ಕಛೇರಿಯ ಸಮಸಂಖ್ಯೆಯ ಸುತ್ತೋಲೆ ದಿನಾಂಕ : 20.03.2020.
03) ಮುಖ್ಯ ಕಾರ್ಯದರ್ಶಿ, ಕರ್ನಾಟಕ ಸರ್ಕಾರ, ವಿಧಾನ ಸೌಧ, ಬೆಂಗಳೂರು ಇವರ ಟಿಪ್ಪಣಿ ಸಂಖ್ಯೆ : ಸಸಂಶಾ(ಎಂ):16/2020 ದಿನಾಂಕ 19.03.2020.
04) ಭಾರತ ಸರ್ಕಾರದ ಕೇಂದ್ರ ಗೃಹ ಸಚಿವಾಲಯ, ನಾರ್ಥ್ ಬ್ಲಾಕ್, ನವ ದೆಹಲಿ ಇವರ ಆದೇಶ ಸಂಖ್ಯೆ :40-3/2020-ಡಿಎಂ-I(ಎ)ದಿನಾಂಕ 24.03.2020.

★★★★★

ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ, CORONA VIRUS/COVID-19 ರೋಗವು ಸಾಂಕ್ರಾಂಮಿಕವಾಗಿ ಹರಡುತ್ತಿದ್ದು, ರಾಜ್ಯದಲ್ಲಿ ಕೋರೋನಾ ವೈರಸ್ ಭೀತಿ ತಲೆದೋರಿರುವ ಹಿನ್ನಲೆಯಲ್ಲಿ ಎಲ್ಲೆಲ್ಲಿ ಜನಸಂದಣಿ ಉಂಟಾಗುತ್ತದೆಯೋ ಅಂತಹ ಸಭೆ, ಸಮಾರಂಭ, ಮದುವೆ ಸಮಾರಂಭಗಳು ಸೇರಿದಂತೆ ಮತ್ತು ಸರ್ಕಾರಿ ಹಾಗೂ ಖಾಸಗಿ ಕಾರ್ಯಕ್ರಮಗಳು ಜರುಗುವುದನ್ನು ಸರ್ಕಾರವು ನಿರ್ಭಂಧಿಸಿ ತಕ್ಷಣದಿಂದ ಜಾರಿಯಾಗುವಂತೆ ಆದೇಶಿಸಿದ ಕಾರಣ ಸಹಕಾರ ಸಂಘಗಳ ಚುನಾವಣೆಗಳನ್ನು ದಿನಾಂಕ 31.03.2020ರವರೆಗೆ ಮುಂದೂಡಿ ಉಲ್ಲೇಖ(1) ಮತ್ತು (2)ರಂತೆ ಈ ಕಛೇರಿಯಿಂದ ಸುತ್ತೋಲೆಗಳನ್ನು ಹೊರಡಿಸಲಾಗಿತ್ತು.

02. ಉಲ್ಲೇಖ(3) ಮತ್ತು (4)ರಂತೆ ದೇಶದಲ್ಲಿ ತಲೆದೋರಿರುವ CORONA VIRUS/COVID-19 ರೋಗವು ಸಾಂಕ್ರಾಮಿಕವಾಗಿ ಹರಡುತ್ತಿರುವ ಹಿನ್ನಲೆಯಲ್ಲಿ ಇಡೀ ಭಾರತ ದೇಶದಲ್ಲೆಡೆ ಕೇಂದ್ರ ಸರ್ಕಾರವು ಉಲ್ಲೇಖ(4)ರ ತನ್ನ ಆದೇಶದಂತೆ ದಿನಾಂಕ 25.03.2020 ರಿಂದ 21 ದಿನಗಳವರೆಗೆ ಲಾಕ್‌ಡೌನ್ ಮಾಡಿ ಆದೇಶಿಸಲಾಗಿರುತ್ತದೆ.

03. ಈ ಸಂಬಂಧವಾಗಿ ಕೆಲವು ಜಿಲ್ಲೆಗಳಿಂದ ಚುನಾವಣಾಧಿಕಾರಿಗಳು ಹಾಗೂ ಕೆಲವು ರಿಟರ್ನಿಂಗ್ ಅಧಿಕಾರಿಗಳು ಚುನಾವಣೆಗಳ ಮತದಾನವನ್ನು ಮಾತ್ರ ಮುಂದೂಡಲ್ಪಟ್ಟಿರುತ್ತದೆಯೇ? ಅಥವಾ ಚುನಾವಣೆಯ ಎಲ್ಲಾ ಪ್ರಕ್ರಿಯೆಗಳು ಮುಂದೂಡಲ್ಪಟ್ಟಿರುತ್ತವೆಯೇ? ಎಂಬ ಬಗ್ಗೆ ಪ್ರಾಧಿಕಾರಕ್ಕೆ ಸ್ಪಷ್ಟೀಕರಣವನ್ನು ಕೋರುತ್ತಿರುತ್ತಾರೆ.

04. ಈ ಹಿನ್ನಲೆಯಲ್ಲಿ, ದಿನಾಂಕ 31.03.2020 ರವರೆಗೆ ಮುಂದೂಡಿದ್ದ ಸಹಕಾರ ಸಂಘಗಳ/ ಸಹಕಾರಿ ಬ್ಯಾಂಕುಗಳ/ ಎಲ್ಲಾ ತರಹದ ಸಹಕಾರಿಗಳ ಚುನಾವಣೆಗಳನ್ನು ಮತ್ತು ಚುನಾವಣೆಯ ಎಲ್ಲಾ ಪ್ರಕ್ರಿಯೆಗಳನ್ನು **ಕರ್ನಾಟಕ ಸಹಕಾರ ಸಂಘಗಳ ನಿಯಮಗಳು 1960ರ ನಿಯಮ 14ಹೆಚ್** ರಂತೆ ಮುಂದಿನ ಆದೇಶದವರೆಗೆ ಮುಂದೂಡಿದೆ ಎಂದು ತಿಳಿಸಲು ಮಾನ್ಯ ಆಯುಕ್ತರಿಂದ ನಿರ್ದೇಶಿಸಲ್ಪಟ್ಟಿದ್ದೇನೆ.

(ಕರಡು ಮಾನ್ಯ ಆಯುಕ್ತರಿಂದ ಅನುಮೋದಿಸಲ್ಪಟ್ಟಿದೆ)

ತಮ್ಮ ವಿಶ್ವಾಸಿ,
(ಸಹಿ)
(ಎಂ.ಬಿ.ಮಂಜುನಾಥ)
ಸಹಕಾರ ಸಂಘಗಳ ಸಹಾಯಕ ನಿಬಂಧಕರು,
ಸಹಕಾರ ಚುನಾವಣಾ ಪ್ರಾಧಿಕಾರ,
ಬೆಂಗಳೂರು.

ಸೇಫ್ ಸ್ಟಾರ್ ಸೌಹಾರ್ದ ಸಹಕಾರಿ 11ನೇ ಶಾಖೆ ಶುಭಾರಂಭ

ಹೊನ್ನಾವರ : ಸೇಫ್ ಸ್ಟಾರ್ ಸೌಹಾರ್ದ ಸಹಕಾರಿ ನಿಯಮಿತ ಪ್ರಧಾನ ಕಛೇರಿ ಹೊನ್ನಾವರ ಇದರ 11ನೇ ಶಾಖೆ ದಿನಾಂಕ 16-02-2020ರಂದು ತಾಲೂಕಿನ ಮಂಕಿಯಲ್ಲಿ ಶ್ರೀ ಲಕ್ಷ್ಮಿ ಪೂಜೆಯೊಂದಿಗೆ ಶುಭಾರಂಭವಾಯಿತು. ಡಿಸೆಂಬರ್ 2011ರಲ್ಲಿ ಆರಂಭವಾದ ಸಹಕಾರಿ ಕೇವಲ 8 ವರ್ಷಗಳಲ್ಲಿ 10 ಶಾಖೆಗಳನ್ನು ಹೊಂದಿದ್ದು ಜಿಲ್ಲಾದ್ಯಂತ ಸದಸ್ಯ ಗ್ರಾಹಕರಿಗೆ ಉತ್ತಮ ಸೇವೆ ನೀಡುತ್ತ ಜನಮಾನಸವಾಗಿದ್ದು ಇದೀಗ 11ನೇ ಶಾಖೆಯನ್ನು ತೆರೆದಿರುವದು ಸಹಕಾರಿಯ ಮುಕುಟಕ್ಕೆ ಇನ್ನೊಂದು ಗರಿ ಸೇರಿದೆ. 2018-19ನೇ ಸಾಲಿನ ಅಂತ್ಯಕ್ಕೆ ಸುಮಾರು 23,306 ಸದಸ್ಯರನ್ನು ಹೊಂದಿರುವ ಸಹಕಾರಿ ರೂ1.15ಕೋಟಿ ಲಾಭಗಳಿಸಿ ಶೇ.11% ಡಿವಿಡೆಂಡ್ ನೀಡಿರುತ್ತದೆ ಅಲ್ಲದೇ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿ ಕೊಡಮಾಡುವ 2018-19ನೇ ಸಾಲಿನ "ಶ್ರೇಷ್ಠ ಸಹಕಾರಿ ಪ್ರಶಸ್ತಿ" ಯನ್ನು ಸಹಕಾರಿಯ ಅಧ್ಯಕ್ಷರು ಪಡೆದಿರುವದು ಒಂದು ಸಾಧನೆ. ಈ ಎಲ್ಲಾ ಸಾಧನೆಗಳ ಹಿಂದೆ ಕರ್ನಾಟಕ ಸೌಹಾರ್ದ ಕಾಯ್ದೆ 1997ರ ನಿಯಮಗಳನ್ನು ಚಾಚೂ ತಪ್ಪದೇ ಪಾಲನೆ ಮಾಡುವದರೊಂದಿಗೆ ಆಡಳಿತದಲ್ಲಿ ಅದನ್ನು ನೂರು ಪ್ರತಿಶತ ಅಳವಡಿಸಿಕೊಂಡಿದ್ದು, ಇದಕ್ಕೆ ಕೆಳಹಂತದ ಸಿಬ್ಬಂದಿಯಿಂದ ಪ್ರಧಾನ ಕಛೇರಿಯ ಜನರಲ್ ಮೆನೇಜರ್ ಅಧಿಕಾರಿವರೆಗೆ ಪ್ರಾಮಾಣಿಕ ಹಾಗೂ ಅಪ್ರತಿಮ ಕಾರ್ಯವೈಖರಿ ಕಾರಣ. ಈ ಸಂದರ್ಭದಲ್ಲಿ ಅಧ್ಯಕ್ಷರು ಎಲ್ಲಾ ಸಾಧನೆಗಳಿಗೆ ಸಹಕಾರ ನೀಡಿದ ಉಪಾಧ್ಯಕ್ಷರನ್ನೊಳಗೊಂಡಂತೆ ಎಲ್ಲಾ ನಿರ್ದೇಶಕರುಗಳಿಗೆ, ಎಲ್ಲಾ ಸಿಬ್ಬಂದಿಗಳಿಗೆ, ಬಿಡಿಸಿ ನಿರ್ದೇಶಕರುಗಳಿಗೆ, ಫೀಲ್ಡ್ ಎಕ್ಸಿಕ್ಯೂಟಿವ್‌ಗಳಿಗೆ ಮತ್ತು ಸಮಸ್ತ ಸದಸ್ಯರುಗಳಿಗೆ ಕೃತಜ್ಞತೆ ಸಲ್ಲಿಸಿದರು.

ಸಾಮಾಜಿಕ ಕಾರ್ಯಕ್ರಮ

ದಾವಣಗೆರೆ : ಶ್ರೀ ಮಣಿಕಂಠ ನ್ಯಾಮತಿ ಸೌಹಾರ್ದ ಸಹಕಾರಿಯಿಂದ ಕೊರನಾ ವೈರಸ್ ಹರಡದಂತೆ ತಡೆಗಟ್ಟಲು, ಲಾಕ್‌ಡೌನ್ ಘೋಷಿಸಿರುವುದ-ರಿಂದ ಸಂಕಷ್ಟದಲ್ಲಿ ಸಿಲುಕಿರುವ ಬಡವರಿಗೆ, ನಿರ್ಗತಿಕರಿಗೆ ಉಚಿತವಾಗಿ ಉಪಹಾರದ ವ್ಯವಸ್ಥೆ ಮಾಡಲಾಯಿತು.

ಇಂಡಿ : ಗುಡ್ಡದ ಬಸವರಾಜೇಮದ್ರ ಸೌಹಾರ್ದ ಸಹಕಾರಿ ವತಿಯಿಂದ ಕೊರೊನಾ ವೈರಸ್ ತಡೆಗಟ್ಟಲು ಹಗಲು - ಇರುಳು ಶ್ರಮಿಸುತ್ತಿರುವ ಪೋಲೀಸ್, ಆರೋಗ್ಯ, ಪೌರ ಕಾರ್ಮಿಕರು ಸೇರಿದಂತೆ ಬೀದಿ ಬದಿಯಲ್ಲಿರುವ ಅನಾಥರು, ಬಡವರಿಗೆ ಉಚಿತವಾಗಿ ಉಪಹಾರ ಮತ್ತು ನೀರಿನ ವ್ಯವಸ್ಥೆ ಮಾಡಲಾಯಿತು.

ಸಂಯುಕ್ತ ಸಹಕಾರಿಯ ಸಿಬ್ಬಂದಿಗಳ ಒಂದು ದಿನದ ವೇತನವನ್ನು ಕೋವಿಡ್-19 ಮುಖ್ಯಮಂತ್ರಿಗಳ ಪರಿಹಾರ ನಿಧಿಗೆ ಸಲ್ಲಿಕೆ

ರಾಜ್ಯದಲ್ಲಿ ವೇಗವಾಗಿ ಹರಡುತ್ತಿರುವ ಕೋರೋನಾ ರೋಗದ ನಿಯಂತ್ರಣಕ್ಕಾಗಿ ರಾಜ್ಯ ಸರಕಾರವು ತೆಗೆದುಕೊಳ್ಳುತ್ತಿರುವ ರೋಗ ನಿಯಂತ್ರಣ ಕಾರ್ಯಗಳಿಗೆ ಸಂಯುಕ್ತ ಸಹಕಾರಿಯ ಸಿಬ್ಬಂದಿಗಳು ಮಾರ್ಚ್ ತಿಂಗಳ ಒಂದು ದಿನದ ವೇತನವನ್ನು ಕೋವಿಡ್-19 ಮುಖ್ಯಮಂತ್ರಿಗಳ ಪರಿಹಾರ ನಿಧಿಗೆ ನೀಡಿದರು.

ಸರಸ್ವತಿ ಸೌಹಾರ್ದ ಸಹಕಾರಿಗೆ ಎನ್‌ಸಿಯುಐ ನ ಮುಖ್ಯ ಕಾರ್ಯನಿರ್ವಾಹಕರ ಭೇಟಿ

ಪುತ್ತೂರು : ನ್ಯಾಷನಲ್ ಕೋ–ಆಪರೇಟಿವ್ ಯೂನಿಯನ್ ಆಫ್ ಇಂಡಿಯ ಇದರ ಮುಖ್ಯ ಕಾರ್ಯನಿರ್ವಾಹಕರಾದ ಶ್ರೀ ಎನ್ ಸತ್ಯನಾರಾಯಣ ಇವರು ದಿನಾಂಕ 04.03.2020 ರಂದು ಶ್ರೀ ಸರಸ್ವತಿ ಕ್ರೆಡಿಟ್ ಸೌಹಾರ್ದ ಸಹಕಾರಿ ನಿಯಮಿತದ ಪ್ರಧಾನ ಕಛೇರಿಗೆ ಭೇಟಿ ನೀಡಿ ಸಹಕಾರಿಯ ಕಾರ್ಯನಿರ್ವಹಣೆಯ ಕುರಿತು ಶ್ಲಾಘನೆಯನ್ನು ವ್ಯಕ್ತಪಡಿಸಿದರು. ಈ ಸಂದರ್ಭದಲ್ಲಿ ಸಹಕಾರಿಯ ಅಧ್ಯಕ್ಷರಾದ ಶ್ರೀ ಎಸ್ ಆರ್ ಸತೀಶ್ಚಂದ್ರ, ಮುಖ್ಯ ಕಾರ್ಯನಿರ್ವಹಣಾಧಿಕಾರಿ ಶ್ರೀ ವಸಂತ್ ಎ ಹಾಗೂ ಸಹಕಾರಿಯ ಕಾರ್ಯನಿರ್ವಹಣಾ ಶ್ರೇಣಿಯ ಅಧಿಕಾರಿಗಳು ಉಪಸ್ಥಿತರಿದ್ದರು.

ನೀರಿನ ಅರವಟ್ಟಿಗೆ ಪ್ರಾರಂಭ

ರಾಯಚೂರು : ಪೋತ್ನಾಳ ಪತ್ತಿನ ಸೌಹಾರ್ದ ಸಹಕಾರಿ ನಿ., ಪೋತ್ನಾಳ ಇವರ ವತಿಯಿಂದ ಪೋತ್ನಾಳ ಗ್ರಾಮದ ಸುತ್ತಮುತ್ತಲಿನ ಜನರು ತಮ್ಮ ವಿವಿಧ ಕೆಲಸ ಮತ್ತು ವ್ಯವಹಾರಗಳಿಗೆ ಪೋತ್ನಾಳ ಗ್ರಾಮದ ಮೇಲೆ ಅವಲಂಬಿತ ಆಗಿರುವುದರಿಂದ ಪ್ರತಿ ದಿನ ನೂರಾರು ಜನ ಇಲ್ಲಿಗೆ ಬಂದು ಹೋಗುತ್ತಾರೆ, ಹೀಗೆ ಬರುವ ಜನರಿಗೋಸ್ಕರ ಬೇಸಿಗೆ ಮುಗಿಯುವವರೆಗೆ ಜನರ ನೀರಿನ ದಾಹ ನೀಗಿಸುವ ಸಲುವಾಗಿ ಸಹಕಾರಿಯಿಂದ ಕುಡಿಯುವ ನೀರಿನ ಅರವಟ್ಟಿಗೆಯನ್ನು ಸಹಕಾರಿಯ ಅಧ್ಯಕ್ಷರಾದ ಶ್ರೀ ಮೂರ್ತಯ್ಯ ಶೆಟ್ಟಿ ಕೆ ಇವರು ಉದ್ಘಾಟನೆ ಮಾಡುವ ಮೂಲಕ ಚಾಲನೆ ನೀಡಿದರು.

ಈ ಸಮಯದಲ್ಲಿ ಸಹಕಾರಿಯ ಮುಖ್ಯ ಕಾರ್ಯನಿರ್ವಾಹಕರಾದ ಸುಧಾಕರ, ಸಹಕಾರಿಯ ಅಧಿಕಾರಿಯಾದ ಶಿವರಾಜ್ ಪಾಟೀಲ್ ಹಾಗೂ ಸಹಕಾರಿಯ ಸಿಬ್ಬಂದಿ ಮತ್ತು ಊರಿನ ಸಾರ್ವಜನಿಕರು ಉಪಸ್ಥಿತರಿದ್ದರು.

ಸುಕೋ ಬ್ಯಾಂಕ್‌ನಿಂದ ಕಡಿಮೆ ಬಡ್ಡಿದರದಲ್ಲಿ ವಿಶೇಷ ಸಾಲ ಸೌಲಭ್ಯ

ಬಳ್ಳಾರಿ : ಕೋವಿಡ್ – 19 (ಕೊರೋನಾ ವೈರಸ್)ನಿಂದ ಆರ್ಥಿಕ ವ್ಯವಸ್ಥೆಯೇ ತಲ್ಲಣಗೊಳ್ಳುತ್ತಿದ್ದು, ಸಂಕಷ್ಟಕ್ಕೀಡಾದ ವ್ಯಾಪಾರಿಗಳ ಚೇತರಿಕೆಗೆ ನೆರವಾಗಲು ಸುಕೋ ಬ್ಯಾಂಕ್ ಶೇ. 10.5 ರ ಬಡ್ಡಿದರದಲ್ಲಿ ಸಾಲ ವಿತರಣೆ ಮಾಡಲಿದೆ.

ಸುಕೋ ಬ್ಯಾಂಕ್‌ನ ಅಧ್ಯಕ್ಷ ಮೋಹಿತ್ ಮಸ್ಕಿ ಅವರು ಪತ್ರಿಕಾ ಪ್ರಕಟಣೆ ನೀಡಿದ್ದು, ರಾಜ್ಯದ 12 ಜಿಲ್ಲೆಗಳಲ್ಲಿ ಇರುವ 28 ಶಾಖೆಗಳಲ್ಲಿ ಈ ವಿಶೇಷ ತುರ್ತು ಸಾಲದ ಸೌಲಭ್ಯವನ್ನು ಶೇ. 10.5ರ ಬಡ್ಡಿದರದಲ್ಲಿ, ಸಂಸ್ಕರಣ ಶುಲ್ಕ ರಹಿತವಾಗಿ ಸಾಲ ಬಿಡುಗಡೆ ಮಾಡಲಿದೆ. ಈ ಯೋಜನೆ ತಾತ್ಕಾಲಿಕವಾಗಿದ್ದು, ಒಂದು ವರ್ಷದ ಅವಧಿಯಲ್ಲಿ ಸುಲಭವಾದ ಮಾಸಿಕ ಕಂತುಗಳಲ್ಲಿ ಮರುಪಾವತಿ ಮಾಡಲು ಅವಕಾಶವಿದೆ. ಬ್ಯಾಂಕಿನ ವ್ಯವಹಾರದ ಸಮಯವನ್ನು ಮಧ್ಯಾಹ್ನ 2ರವರೆಗೆ ಇಳಿಸಲಾಗಿದೆ. ದಿನಾಂಕ 22.03.2020 ರಿಂದ ಬ್ಯಾಂಕಿನ ಎ.ಟಿ.ಎಂ ಕಾರ್ಡ್‌ನಲ್ಲಿ ಹಣ ವಿತ್‌ಡ್ರಾ ಮಾಡುವುದಕ್ಕೆ ಯಾವುದೇ ಶುಲ್ಕ ವಿರುವುದಿಲ್ಲವೆಂದು ತಿಳಿಸಿರುತ್ತಾರೆ. ಕೋವಿಡ್–19 ಸಲುವಾಗಿ ಬ್ಯಾಂಕಿನ ಸದಸ್ಯರಿಗೆ ರೂ.15,000/– ದವರೆಗೆ ಅಸುರಕ್ಷಿತ ಸಾಲವನ್ನು ನೀಡಲಾಗುವುದು.

ಆಸಕ್ತರು ಬ್ಯಾಂಕ್‌ನ ಯಾವುದೇ ಶಾಖೆಯನ್ನು ಮೊಬೈಲ್‌ಗೆ ಕರೆ ಮಾಡುವ ಮೂಲಕ ಸಂಪರ್ಕ ಮಾಡಿದಲ್ಲಿ ಆನ್‌ಲೈನ್ ನಲ್ಲಿ ದಾಖಲೆಗಳನ್ನು ಪರಿಶೀಲನೆ ಮಾಡಿ, ತಕ್ಷಣವೇ ಸಾಲ ಬಿಡುಗಡೆ ಮಾಡಲಾಗುತ್ತದೆ ಎಂದು ತಿಳಿಸಿದ್ದಾರೆ. ಸಾಲದ ವಿವರಗಳಿಗಾಗಿ ಮೊಬೈಲ್ ಸಂಖ್ಯೆ : 8073492590 ಗೆ ಸಂಪರ್ಕಿಸಿ.

ಭಾರತೀಯ ರಿಸರ್ವ್ ಬ್ಯಾಂಕ್‌ನ ನಿರ್ದೇಶನದ ಮೇರೆಗೆ 'ಕ್ವಿಕ್ ರೆಸ್ಪಾನ್ಸ್ ಟೀಂ' ಅನ್ನು ಸುಕೋ ಬ್ಯಾಂಕ್ ರಚಿಸಿದ್ದು, ಸುಕೋ ಬ್ಯಾಂಕ್‌ನ ಗ್ರಾಹಕರ ವೈದ್ಯಕೀಯ ತುರ್ತು ಅಗತ್ಯಗಳಿಗಾಗಿ ಎಟಿಎಂ/ಮೊಬೈಲ್ ಬ್ಯಾಂಕಿಂಗ್ ಸೇವೆಯಲ್ಲಿ ಸಕಾಲದಲ್ಲಿ ಹಣ ಸಿಗದೇ ಇದ್ದಲ್ಲಿ, ಅವರ ಮನೆ ಬಾಗಿಲಲ್ಲೇ ರೂಪಾಯಿ ಹತ್ತು ಸಾವಿರ (ರೂ. 10,000/–)ವರೆಗೆ ನಗದು ಹಣವನ್ನು ಅವರ ಖಾತೆಯಿಂದ ನೀಡಲಾಗುತ್ತದೆ. ಈ ಸೇವೆಯು ಬ್ಯಾಂಕ್‌ನ ವ್ಯವಹಾರದ ಅವಧಿಯ ಹೊರತಾಗಿ ನಿರ್ವಹಿಸಲ್ಪಡುತ್ತದೆ. ಆಸಕ್ತ ಗ್ರಾಹಕರು : 9916009426, 9886091274 ಮತ್ತು 9071259468 ಗೆ ಸಂಪರ್ಕಿಸಿ.

ಅಧ್ಯಕ್ಷರು – ಉಪಾಧ್ಯಕ್ಷರ ಆಯ್ಕೆ

ಶ್ರೀ ವಿನಾಯಕ ವಿವಿದೋದ್ದೇಶ ಸೌಹಾರ್ದ ಸಹಕಾರಿ ನಿ., ಹಾಸನ

ಶ್ರೀ ಜಿ.ಆರ್ ಮೂರ್ತಿ
ಅಧ್ಯಕ್ಷರು

ಶ್ರೀ ಜಿ.ಎಂ ರವಿಕುಮಾರ್
ಉಪಾಧ್ಯಕ್ಷರು

ಆದರ್ಶ ಪಟ್ಟಣ ಸೌಹಾರ್ದ ಸಹಕಾರಿ ಬ್ಯಾಂಕ್ ನಿ., ಹರಪನಹಳ್ಳಿ

ಶ್ರೀ ಕೆ. ಚಂದ್ರಗೌಡ
ಅಧ್ಯಕ್ಷರು

ಶ್ರೀಮತಿ ಟಿ. ಹೆಚ್. ಎಂ ರೇಖಾಮಲ್ಲಿಕಾರ್ಜುನ
ಉಪಾಧ್ಯಕ್ಷರು

ಸ್ನೇಹ ಜ್ಯೋತಿ ಮಹಿಳಾ ಸೌಹಾರ್ದ ಸಹಕಾರಿ ನಿ., ಚಾಮರಾಜನಗರ

ಶ್ರೀಮತಿ ನಾಗರತ್ನಮ್ಮ
ಅಧ್ಯಕ್ಷರು

ಶ್ರೀಮತಿ ನಿಂಗರಾಜಮ್ಮ
ಉಪಾಧ್ಯಕ್ಷರು

ಹರಿಹರ: ಶ್ರೀ ಗಾಯಿತ್ರಿ ಸೌಹಾರ್ದ ಪತ್ತಿನ ಸಹಕಾರಿಯ 2020–25ನೇ ಸಾಲಿನ ಸಹಕಾರಿಯ ಆಡಳಿತ ಮಂಡಳಿಗೆ ಅಧ್ಯಕ್ಷರಾಗಿ ಶ್ರೀ ಎಸ್. ಕೆ. ಶರದ್ ಕೊಣ್ಣೂರ್ ಹಾಗೂ ಉಪಾಧ್ಯಕ್ಷರಾಗಿ ಶ್ರೀ ಹೆಚ್. ಎಂ ದಿನೇಶ್ ರವರು ಅವಿರೋಧವಾಗಿ ಆಯ್ಕೆಯಾಗಿರುತ್ತಾರೆ.

31 ಮಾರ್ಚ್ 2020 ವರ್ಷಾಂತ್ಯಕ್ಕೆ ವಿವಿಧ ಸೌಹಾರ್ದ ಸಹಕಾರಿಗಳು / ಸೌಹಾರ್ದ ಬ್ಯಾಂಕುಗಳ ಹಣಕಾಸಿನ ಪ್ರಗತಿ ವಿವರ

ಸುಕೋ ಸೌಹಾರ್ದ ಸಹಕಾರಿ ಬ್ಯಾಂಕ್ ನಿ., ಬಳ್ಳಾರಿ

ಆರ್ಥಿಕ ಅಂಶಗಳು	31.03.2020ಕ್ಕೆ ಇದ್ದಂತೆ (ಕೋಟಿಗಳಲ್ಲಿ)
ಒಟ್ಟು ವಹಿವಾಟು	1232
ಒಟ್ಟು ಠೇವಣಿ	756
ಸಾಲ ಮತ್ತು ಮುಂಗಡಗಳು	476
ಸಿ.ಆರ್.ಎ.ಆರ್	10.41%
ತೆರಿಗೆ ಮೊದಲ ಲಾಭ	10.46
ತೆರಿಗೆ ನಂತರದ ಲಾಭ	4.30
ಒಟ್ಟು ಎನ್.ಪಿ.ಎ ಅನುಪಾತ	5%
ನೆಟ್ ಎನ್.ಪಿ.ಎ ಅನುಪಾತ	2.32%

ಶ್ರುಶ್ರುತಿ ಸೌಹಾರ್ದ ಸಹಕಾರಿ ಬ್ಯಾಂಕ್ ನಿ., ಬೆಂಗಳೂರು

ಆರ್ಥಿಕ ಅಂಶಗಳು	31.03.2020ಕ್ಕೆ ಇದ್ದಂತೆ (ಕೋಟಿಗಳಲ್ಲಿ)
ಶೇರು ಬಂಡವಾಳ	3.88
ಒಟ್ಟು ಠೇವಣಿ	180.52
ಸಾಲ ಮತ್ತು ಮುಂಗಡಗಳು	114.12
ಹೂಡಿಕೆ	41.96
ದುಡಿಯುವ ಬಂಡವಾಳ	222.42
ನಿವ್ವಳ ಲಾಭ	1.4
ಒಟ್ಟು ಎನ್.ಪಿ.ಎ ಅನುಪಾತ	6.48%
ನೆಟ್ ಎನ್.ಪಿ.ಎ ಅನುಪಾತ	2.97%

ದಿ ಮರ್ಚೆಂಟ್ಸ್ ಸೌಹಾರ್ದ ಸಹಕಾರ ಬ್ಯಾಂಕ್ ನಿ., ಚಿತ್ರದುರ್ಗ

ಆರ್ಥಿಕ ಅಂಶಗಳು	31.03.2020ಕ್ಕೆ ಇದ್ದಂತೆ (ಕೋಟಿಗಳಲ್ಲಿ)
ಸ್ವಂತ ನಿಧಿ	28.42
ಒಟ್ಟು ಠೇವಣಿ	115.20
ಸಾಲಗಳು	77.76
ಒಟ್ಟು ಎನ್‌ಪಿಎ ಅನುಪಾತ	2.4%
ನೆಟ್ ಎನ್‌ಪಿಎ ಅನುಪಾತ	0.00%
ನಿವ್ವಾಳ ಲಾಭ	3.06
ಒಟ್ಟು ವಹಿವಾಟು	192.26
ನಿವ್ವಳ ವಹಿವಾಟು	26.62
ಸಿಆರ್‌ಎಆರ್	27.28
ಒಟ್ಟು ವ್ಯವಹಾರದ ಲಾಭ	1.60%

ಸಂಡೂರು ಪಟ್ಟಣ ಸೌಹಾರ್ದ ಸಹಕಾರಿ ಬ್ಯಾಂಕ್ ನಿ., ಬಳ್ಳಾರಿ

ಆರ್ಥಿಕ ಅಂಶಗಳು	31.03.2020ಕ್ಕೆ ಇದ್ದಂತೆ (ಕೋಟಿಗಳಲ್ಲಿ)
ತೆರಿಗೆ ಮೊದಲ ಲಾಭ	2.05
ತೆರಿಗೆ ನಂತರದ ಲಾಭ	1.37
ಬ್ಯಾಂಕಿನ ಒಟ್ಟು ಆದಾಯ	7.54
ಒಟ್ಟು ವಹಿವಾಟು	91.34
ಒಟ್ಟು ಠೇವಣಿ	73.15
ಸಾಲ ಮತ್ತು ಮುಂಗಡಗಳು	18.19
ನೆಟ್ ಎನ್‌ಪಿಎ ಅನುಪಾತ	0.00%
ಸಿಆರ್‌ಎಆರ್	39.26

ಶ್ರೀ ಕನ್ಯಕಾ ಪರಮೇಶ್ವರಿ ಸೌಹಾರ್ದ ಸಹಕಾರಿ ನಿ., ಚಿತ್ರದುರ್ಗ

ಆರ್ಥಿಕ ಅಂಶಗಳು	31.03.2020ಕ್ಕೆ ಇದ್ದಂತೆ (ಕೋಟಿಗಳಲ್ಲಿ)
ಒಟ್ಟು ವಹಿವಾಟು	60
ಸ್ವಂತ ನಿಧಿ	8
ಒಟ್ಟು ಠೇವಣಿ	35
ಸಾಲ ಮತ್ತು ಮುಂಗಡಗಳು	25
ಹೂಡಿಕೆ	15
ನಿವ್ವಳ ಲಾಭ	1.03

ಶ್ರೀ ಭ್ರಮರಾಂಭ ಪತ್ತಿನ ಸೌಹಾರ್ದ ಸಹಕಾರಿ ನಿ., ಮಸ್ಕಿ

ಆರ್ಥಿಕ ಅಂಶಗಳು	31.03.2020ಕ್ಕೆ ಇದ್ದಂತೆ (ಕೋಟಿಗಳಲ್ಲಿ)
ಒಟ್ಟು ಠೇವಣಿ	193.70
ಸಾಲ	143.14
ಒಟ್ಟು ವಹಿವಾಟು	336.84
ದುಡಿಯುವ ಬಂಡವಾಳ	222.42
ನಿವ್ವಳ ಲಾಭ	3.68
ಒಟ್ಟು ಎನ್.ಪಿ.ಎ ಅನುಪಾತ	4.91%
ಸಾಲ ವಸೂಲಾತಿ	97.08%

ವಿಕಾಸ ಸೌಹಾರ್ದ ಸಹಕಾರಿ ಬ್ಯಾಂಕ್ ನಿ., ಬಳ್ಳಾರಿ

ಆರ್ಥಿಕ ಅಂಶಗಳು	31.03.2020ಕ್ಕೆ ಇದ್ದಂತೆ (ಕೋಟಿಗಳಲ್ಲಿ)
ಒಟ್ಟು ಠೇವಣಿ	452
ಸಾಲ	305
ಒಟ್ಟು ವಹಿವಾಟು	757
ತೆರಿಗೆ ಮೊದಲ ಲಾಭ	11.81
ತೆರಿಗೆ ನಂತರದ ಲಾಭ	4.68
ಒಟ್ಟು ಎನ್.ಪಿ.ಎ ಅನುಪಾತ	4.51%
ನೆಟ್ ಎನ್.ಪಿ.ಎ ಅನುಪಾತ	2.57%

ಶ್ರೀನಿಧಿ ಸೌಹಾರ್ದ ಸಹಕಾರಿ ಬ್ಯಾಂಕ್ ನಿ., ಬೆಂಗಳೂರು

ಆರ್ಥಿಕ ಅಂಶಗಳು	31.03.2020ಕ್ಕೆ ಇದ್ದಂತೆ (ಕೋಟಿಗಳಲ್ಲಿ)
ಒಟ್ಟು ಠೇವಣಿ	340.31
ಸಾಲ	240.40
ಒಟ್ಟು ವಹಿವಾಟು	580.71
ನಿವ್ವಳ ಲಾಭ	3.79
ಹೂಡಿಕೆ	127.51
ಒಟ್ಟು ಎನ್.ಪಿ.ಎ ಅನುಪಾತ	1.83%
ನೆಟ್ ಎನ್.ಪಿ.ಎ ಅನುಪಾತ	0.65%

ಶ್ರೀ ಶುಭಧನಲಕ್ಷ್ಮೀ ಸೌಹಾರ್ದ ವಿವಿಧೋದ್ದೇಶ ಸಹಕಾರಿ ನಿ., ಹೊಸಪೇಟೆ

ಆರ್ಥಿಕ ಅಂಶಗಳು	31.03.2020ಕ್ಕೆ ಇದ್ದಂತೆ
ಒಟ್ಟು ವಹಿವಾಟು	3,36,50,139
ಒಟ್ಟು ಠೇವಣಿ	1,95,45,356
ಸಾಲ ಮತ್ತು ಮುಂಗಡಗಳು	1,41,04,783
ನಿವ್ವಳ ಲಾಭ	9,31,169

ವಿವಿಧ ಕಾಯ್ದೆಗಳಲ್ಲಿ ಇತ್ತೀಚಿನ ಬದಲಾವಣೆಯ ಕಾರಣ ಸೌಹಾರ್ದ ಸಹಕಾರಿಗಳು ಗಮನಿಸಬೇಕಾದ ಪ್ರಮುಖ ಅಂಶಗಳು

– ಶ್ರೀ ಬಿ.ವಿ.ರವೀಂದ್ರನಾಥ, ಚಾರ್ಟರ್ಡ್ ಅಕೌಂಟೆಂಟ್, ಸಾಗರ

ಹಿಂದಿನ ಸಂಚಿಕೆಯಿಂದ ಮುಂದುವರೆದಿದೆ.

ಸರಕು ಮತ್ತು ಸೇವಾ ತೆರಿಗೆ ಕಾಯ್ದೆಯ ಅಂಶಗಳು

ಸಹಕಾರ ಸಂಘಗಳಿಗೆ ಜಿಎಸ್‌ಟಿ ಅನ್ವಯಿಸುವುದೆ?

- ಸರಕು ಮತ್ತು ಸೇವಾ ತೆರಿಗೆ ಕಾಯ್ದೆ ಎಲ್ಲ ವ್ಯಕ್ತಿಗಳಿಗೂ ಅನ್ವಯಿಸುತ್ತದೆ
- ವ್ಯಕ್ತಿಯ ಪರಿಭಾಷೆಯಲ್ಲಿ ಸಹಕಾರ ಸಂಘಗಳೂ ಸೇರಿವೆ

ಯಾವ ಸಹಕಾರ ಸಂಘಗಳು ಜಿಎಸ್‌ಟಿ ನೋಂದಣಿ ಪಡೆಯಬೇಕು?

- ಸಹಕಾರ ಸಂಘಗಳು ತೆರಿಗೆದಾಯಕ ಸೇವೆ ನೀಡುತ್ತಿದ್ದಲ್ಲಿ ಮತ್ತು ಒಟ್ಟು ವಹಿವಾಟು 20 ಲಕ್ಷ ಮೀರಿದಲ್ಲಿ ನೋಂದಣಿಯಾಗಿ ತೆರಿಗೆದಾಯಕ ವಹಿವಾಟಿನ ಮೇಲೆ ತೆರಿಗೆ ಪಾವತಿಸಬೇಕಿರುತ್ತದೆ
- ಸಹಕಾರ ಸಂಘಗಳ ಎಲ್ಲ ರೀತಿಯ ಒಟ್ಟು ಆದಾಯಗಳು ಅಂದರೆ ಬಡ್ಡಿಯೂ ಸೇರಿದಂತೆ ಕಮಿಷನ್, ಬೋನಸ್, ದಾಖಲಾತಿ ಶುಲ್ಕ, ಲಾಕರ್ ಬಾಡಿಗೆ, ಫೀಸ್, ಬ್ರೋಕರೇಜ್, ರಿಕವರಿ ಚಾರ್ಜಸ್, ಡಿಸ್ಕೌಂಟ್, ಲೀಗಲ್ ಯಾ ಇತರೆ ಶುಲ್ಕಗಳು ವಾರ್ಷಿಕ 20 ಲಕ್ಷ ರೂಗಳಿಗೆ ಮೀರುವಂತಿದ್ದರೆ ನೋಂದಣಿ ಪಡೆಯಬೇಕು
- ಸಹಕಾರ ಸಂಘಗಳ ಎಲ್ಲ ಬಡ್ಡಿಯೇತರ ಆದಾಯಗಳ ಮೇಲೆ ಶೇ.18ರಂತೆ ಜಿಎಸ್‌ಟಿ ತೆರಿಗೆ ಪಾವತಿಸಬೇಕು
- ವಹಿವಾಟು ಎಂದರೆ ಸರಕು ಮತ್ತು ಸೇವೆಗಳ ಸರಬರಾಜು ಎರಡೂ ಸೇರಿರುತ್ತದೆ
- ಕೇವಲ ವಿನಾಯಿತಿ ಸೇವೆ ನೀಡುವವರು ಅರ್ಹ ಮಿತಿ ದಾಟಿದರೂ ನೋಂದಣಿ ಕಡ್ಡಾಯವಿಲ್ಲ
- ಕರದಾಯಕ ಸೇವೆ ನೀಡುವ ಸಂಘದ ಒಟ್ಟು ವಹಿವಾಟು ಮಿತಿ ದಾಟದಿದ್ದಲ್ಲಿ ನೋಂದಣಿ ಕಡ್ಡಾಯವಿಲ್ಲ.

ಸಹಕಾರ ಸಂಘಗಳ ತೆರಿಗೆಮುಕ್ತ ಸೇವೆಗಳು/ಆದಾಯಗಳು

- ತೆರಿಗೆಮುಕ್ತ ಸರಕುಗಳ ಮಾರಾಟ
- ದಂಡ ಬಡ್ಡಿ, ವಿಳಂಬ ಬಡ್ಡಿ ಸೇರಿದಂತೆ ಸಾಲಗಳ ಮೇಲಿನ ಎಲ್ಲಾ ರೀತಿಯ ಬಡ್ಡಿಗಳು
- ಠೇವಣಿ/ಹೂಡಿಕೆಗಳ ಮೇಲಿನ ಬಡ್ಡಿಗಳು
- ಹೂಡಿಕೆಗಳ ಮಾರಾಟದಿಂದ ಬಂದ ಲಾಭ
- ಹೂಡಿಕೆಗಳ ಮೇಲಿನ ಲಾಭಾಂಶ (ಡಿವಿಡೆಂಡ್)
- ಸ್ಥಿರಾಸ್ತಿ/ಚರಾಸ್ತಿಗಳ ಮಾರಾಟದ ಲಾಭ
- ಸದಸ್ಯರಿಂದ ಸಂಗ್ರಹಿಸಿದ ದೇಣಿಗೆಗಳು, ನಿಧಿಗಳಿಗೆ ಚಂದಾ ವಗೈರೆ

ಸಹಕಾರ ಸಂಘಗಳ ತೆರಿಗೆದಾಯಕ ಸೇವೆಗಳು/ಆದಾಯಗಳು

- ಮಾರಾಟವೂ ಸೇರಿದಂತೆ ಯಾವುದೇ ರೀತಿಯ ವಾಣಿಜ್ಯ ವ್ಯವಹಾರದ ಆದಾಯ
- ಚೆಕ್, ಡಿಡಿ, ಪೇ ಆರ್ಡರ್, ಇನ್ನಿತರ ಹಣವರ್ಗಾವಣೆ ಶುಲ್ಕಗಳು
- ಎಲ್ಲಾ ರೀತಿಯ ದಲ್ಲಾಳಿ (ಕಮಿಷನ್)
- ಸಾಲ ಮಂಜೂರಾತಿ ಪ್ರಕ್ರಿಯೆ ಶುಲ್ಕಗಳು
- ಎಟಿಎಂ, ಕ್ರೆಡಿಟ್/ಡೆಬಿಟ್ ಕಾರ್ಡ್ ಶುಲ್ಕಗಳು
- ಪ್ರೀಪೇಮೆಂಟ್ ಚಾರ್ಜಸ್
- ಲಾಕರ್ ಬಾಡಿಗೆ
- ವಿದೇಶೀ ವಿನಿಮಯ ಶುಲ್ಕಗಳು
- ಲೆಟರ್ ಆಫ್ ಕ್ರೆಡಿಟ್/ಗ್ಯಾರಂಟೀ ಕಮೀಷನ್
- ಸದಸ್ಯತ್ವ ಶುಲ್ಕ ಪ್ರವೇಶ ಶುಲ್ಕ
- ಇತರೆ ಯಾವುದೇ ಆದಾಯಗಳು.

ನೋಂದಣಿಗೆ ಅಗತ್ಯ ಮಾಹಿತಿ ಮತ್ತು ದಾಖಲೆಗಳು

- Regn Certificate copy
- Name & PAN No of the Co operative
- Valid Email & Mobile No.
- Bank A/c No. & IFS Code
- Bank Pass Book copy
- Rent Agreement/property docs
- Letter of authority in favour of CEO or AP (Authorised Person)
- Photographs of CEO or AP
- Aadhaar, PAN, Voter ID of CEO or AP
- Digital Signature of CEO or AP

ನೋಂದಣಿ ಪ್ರಕ್ರಿಯೆ

- ಎಲ್ಲವೂ ಅಂತರ್ಜಾಲದ ಮೂಲಕ
- ಭೌತಿಕ ದಾಖಲೆ ಸಲ್ಲಿಕೆ ಇರುವುದಿಲ್ಲ
- Provisional ID ಯೊಡನೆ ವ್ಯವಹಾರ ಪ್ರಾರಂಭಿಸಬಹುದು
- ನೋಂದಣಿಗೆ ಯಾವುದೇ ಶುಲ್ಕವಿರುವುದಿಲ್ಲ

- ನೋಂದಣಿಯ ಸಂದರ್ಭದಲ್ಲಿ ಯಾವುದೇ ಠೇವಣಿ ಇಡುವ ಅಗತ್ಯವಿಲ್ಲ.
- ಸಲ್ಲಿಸಿದ ದಾಖಲೆಗಳು, ವಿವರಗಳು ತಪ್ಪಿದ್ದಲ್ಲಿ ಸರಿಪಡಿಸಲು ಅವಕಾಶ
- ಸಲ್ಲಿಸಿದ ದಾಖಲೆಗಳು, ವಿವರಗಳು ಖೊಟ್ಟಿಯಾಗಿದ್ದಲ್ಲಿ ದಂಡನೆ
- ನೋಂದಣಿ ಪ್ರಮಾಣಪತ್ರಗಳನ್ನು ಅಂತರ್ಜಾಲದಿಂದಲೇ ಪಡೆಯಬೇಕು

ಸಹಕಾರಿ ಸಂಸ್ಥೆಗಳ ತೆರಿಗೆಮುಕ್ತ ಸೇವೆಗಳು/ಆದಾಯಗಳು

- ತೆರಿಗೆಮುಕ್ತ ಸರಕುಗಳ ಮಾರಾಟ
- ದಂಡ ಬಡ್ಡಿ, ವಿಳಂಬ ಬಡ್ಡಿ ಸೇರಿದಂತೆ ಸಾಲಗಳ ಮೇಲಿನ ಎಲ್ಲಾ ರೀತಿಯ ಬಡ್ಡಿಗಳು
- ಠೇವಣಿ/ಹೂಡಿಕೆಗಳ ಮೇಲಿನ ಬಡ್ಡಿಗಳು
- ಹೂಡಿಕೆಗಳ ಮಾರಾಟದಿಂದ ಬಂದ ಲಾಭ
- ಹೂಡಿಕೆಗಳ ಮೇಲಿನ ಲಾಭಾಂಶ (ಡಿವಿಡೆಂಡ್)
- ಸ್ಥಿರಾಸ್ತಿ/ಚರಾಸ್ತಿಗಳ ಮಾರಾಟದ ಲಾಭ
- ಸದಸ್ಯರಿಂದ ಸಂಗ್ರಹಿಸಿದ ದೇಣಿಗೆಗಳು, ನಿಧಿಗಳಿಗೆ ಚಂದಾ ವಗೈರೆ

ಸಹಕಾರಿ ಸಂಸ್ಥೆಗಳ ತೆರಿಗೆದಾಯಕ ಸೇವೆಗಳು/ಆದಾಯಗಳು

- ಮಾರಾಟವೂ ಸೇರಿದಂತೆ ಯಾವುದೇ ರೀತಿಯ ವಾಣಿಜ್ಯ ವ್ಯವಹಾರದ ಆದಾಯ
- ಚೆಕ್, ಡಿಡಿ, ಪೇ ಆರ್ಡರ್, ಇನ್ನಿತರ ಹಣವರ್ಗಾವಣೆ ಶುಲ್ಕಗಳು
- ಎಲ್ಲಾರೀತಿಯ ದಲ್ಲಾಳಿ (ಕಮಿಷನ್)
- ಸಾಲ ಮಂಜೂರಾತಿ ಪ್ರಕ್ರಿಯೆ ಶುಲ್ಕಗಳು
- ಪ್ರೀಪೇಮೆಂಟ್ ಚಾರ್ಜಸ್
- ಲಾಕರ್ ಬಾಡಿಗೆ
- ವಿದೇಶೀ ವಿನಿಮಯ ಶುಲ್ಕಗಳು
- ಲೆಟರ್ ಆಫ್ ಕ್ರೆಡಿಟ್/ಗ್ಯಾರಂಟೀ ಕಮೀಷನ್
- ಸದಸ್ಯತ್ವ ಶುಲ್ಕ ಪ್ರವೇಶ ಶುಲ್ಕ
- ಇತರೆ ಯಾವುದೇ ಆದಾಯಗಳು.

ತೆರಿಗೆ ಹಿಂಪಡೆಯುವ ಸೌಲಭ್ಯ

- ನೀಡಿದ ವಿನಾಯಿತಿ ಸೇವೆ, ತೆರಿಗೆದಾಯಕ ಸೇವೆ – ಇವುಗಳ ಅನುಪಾತಕ್ಕನು ಗುಣವಾಗಿ ಹೂಡುವಳಿ ತೆರಿಗೆ ಹಿಂಪಡೆಯುವ ಸೌಲಭ್ಯವಿದೆ
- ಠೇವಣಿ ಸ್ವೀಕರಿಸುವ, ಸಾಲ ನೀಡುವ ಹಣಕಾಸು ಸಂಸ್ಥೆಗಳು ಹೂಡುವಳಿ ತೆರಿಗೆಯ 50%ರಷ್ಟನ್ನು ಹಿಂಪಡೆಯುವ ಸೌಲಭ್ಯವಿದೆ
- ಒಮ್ಮೆ ಈ ಸೌಲಭ್ಯ ಪಡೆದುಕೊಂಡಲ್ಲಿ ವರ್ಷ ಮಧ್ಯದಲ್ಲಿ ಬದಲಾವಣೆಗೆ ಅವಕಾಶವಿಲ್ಲ
- ವ್ಯವಹಾರಕ್ಕೆ ಬಳಸದ ಸರಕು ಯಾ ಸೇವೆಯ ಮೇಲಿನ ಹೂಡುವಳಿ ತೆರಿಗೆ ಪಡೆಯುವಂತಿಲ್ಲ
- ಒಂದೇ ಪಾನ್ ಸಂಖ್ಯೆಗೆ 100% ಹಿಂಪಡೆಯುವ ಸೌಲಭ್ಯ.

ಸಲ್ಲಿಸಬೇಕಾದ ವರದಿಗಳು

- GST 1 : Return of Outward Supply
- GST 2 : Return of Inward Supply
- GST 3 : Monthly Return (Auto)
- GST 5 : Monthly Report (NRI)
- GST 6 : ISD (Intermediary Service Distributor)
- GST 9 : Annual Return.

ಕರದರಪಟ್ಟಿ (ಸೇವೆ) ಯ ಮಾದರಿ

ಪ್ರತ್ಯೇಕ ಕರ ರಸೀತಿ ಪದ್ಧತಿ

TAX INVOICE (SERVICE) — Original*

ಸುವಿಧಾ ವಿವಿಧೋದ್ದೇಶ ಸೌಹಾರ್ದ ಸಹಕಾರಿ ನಿಯಮಿತ

GST No: 29AAGAS9133B1Z5
Tax payable on RCM? Y/N
Invoice No. : <= 16 characters
Invoice Date : dd-mm-yyyy

DETAILS OF RECEIVER (BILLED TO)
NAME :
ADDRESS :
STATE CODE
GSTIN No :

#	DESCRIPTION	SAC	TOTAL	TAX	VALUE
1	Interest on Loans	9971	16,190-00	0%	16,000-00
2	Documentation fees	998214	500-00	18%	500-00
	Exclusive method of levying GST on service charges		Other Charges		
			GST 18%		90-00
			TOTAL AMOUNT		16,590-00

Rupees sixteen thousand five hundred ninety only

Computer generated invoice — Signature/Digitally Signed

ಕರ ಒಳಗೊಂಡ ರಸೀತಿ ಪದ್ಧತಿ

TAX INVOICE (SERVICE) — Original*

ಸುವಿಧಾ ವಿವಿಧೋದ್ದೇಶ ಸೌಹಾರ್ದ ಸಹಕಾರಿ ನಿಯಮಿತ

GST No: 29AAGAS9133B1Z5
Tax payable on RCM? Y/N
Invoice No. : <= 16 characters
Invoice Date : dd-mm-yyyy

DETAILS OF RECEIVER (BILLED TO)
NAME :
ADDRESS :
STATE CODE
GSTIN No :

#	DESCRIPTION	SAC	TOTAL	TAX	VALUE
1	Interest on Loans	9971	16,190-00	0%	16,000-00
2	Documentation fees	998214	424-00	18%	424-00
	Inclusive method of levying GST on service charges		Other Charges		
			GST 18%		76-00
			TOTAL AMOUNT		16,500-00

Rupees sixteen thousand five hundred only

Computer generated invoice — Signature/Digitally Signed

ಟ್ಯಾಕ್ಸ್ ಇನ್ವಾಯ್ಸ್ (ಸರ್ವಿಸ್) – ಗಮನಿಸಬೇಕಾದ ಅಂಶಗಳು

ಸೇವಾ ಬಿಲ್ಲುಗಳ ಮೌಲ್ಯದ ಮಿತಿ :

- 200 ರೂಗಳವರೆಗೆ ಕಡ್ಡಾಯವಿಲ್ಲ
- 200 ರೂಗಳಿಂದ 50,000 ರೂಗಳವರೆಗೆ – ಹೆಸರು ಕಡ್ಡಾಯವಿಲ್ಲ
- 50,000 ರೂಗಳಿಂದ 2,00,000 ರೂಗಳವರೆಗೆ – ಹೆಸರು, ವಿವರ ಕಡ್ಡಾಯ
- 2,00,000 ರೂಗಳಿಗೆ ಮೇಲ್ಪಟ್ಟು – ಬ್ಯಾಂಕ್ ಮೂಲಕ ಸ್ವೀಕೃತಿ
- < 200 ಬಿಲ್‌ಗಳಿಗೆ ಒಟ್ಟು ಬಿಲ್ ಹಾಕಬಹುದು

ದ್ವಿಪ್ರತಿಯಲ್ಲಿ ತಯಾರಿಸಬೇಕು :

- ಮೂಲಪ್ರತಿ – ಸ್ವೀಕರಿಸುವವನಿಗೆ
- ದ್ವಿಪ್ರತಿ – ಕಛೇರಿಯ ಪ್ರತಿ
- Service Account Code (SAC) ಕೋಡ್ ನಮೂದಿಸತಕ್ಕದ್ದು

ವರದಿ ಸಲ್ಲಿಸುವಿಕೆ :

- ನಿರ್ದಿಷ್ಟ ದಿನಾಂಕಗಳೊಳಗೆ ಆನ್‌ಲೈನ್ ವರದಿ ಸಲ್ಲಿಕೆ
- ವರದಿಯನ್ನು ಪ್ರತಿ ತಿಂಗಳು ಸಲ್ಲಿಸಬೇಕು
- ಹೊರಪೂರೈಕೆಗಳ ವಿವರಗಳು (ದಿ: ಹತ್ತರೊಳಗೆ)
- ಒಳಪೂರೈಕೆಗಳ ವಿವರಗಳು (ದಿ: ಹದಿನೈದರೊಳಗೆ)
- ತೆರಿಗೆ ಪಾವತಿ/ಅಂತಿಮ ವರದಿ (ದಿ: ಇಪ್ಪತ್ತರೊಳಗೆ)
- ವಾರ್ಷಿಕ ವರದಿ (ಡಿಸೆಂಬರ್ 31ರೊಳಗೆ).

ತೆರಿಗೆ ಪಾವತಿಯ ಕ್ರಮಗಳು :

- ತೆರಿಗೆ, ಬಡ್ಡಿ, ದಂಡ ಯಾವುದನ್ನೂ ನಗದು ಪಾವತಿ ಮಾಡಲಾಗದು
- ಕಡ್ಡಾಯವಾಗಿ ಬ್ಯಾಂಕಿನ ಮೂಲಕವೇ ಪಾವತಿ
- RTGS, NEFT, E-banking, Mobile banking, ಎಲ್ಲದಕ್ಕೂ ಅವಕಾಶ
- ಪ್ರತಿಪಾವತಿಗೂ ಪ್ರತ್ಯೇಕ ರಸೀದಿ ಸಂಖ್ಯೆ ದೊರೆಯುತ್ತದೆ
- ಬ್ಯಾಂಕಿನ ಪಾವತಿ ರಸೀದಿಯೆ ಸ್ವೀಕೃತಿ
- ಕರದಾತನ ಖಾತೆಯಲ್ಲಿ ಯಾವಾಗಲೂ ವೀಕ್ಷಿಸಬಹುದು.

ನ್ಯೂನತೆಗಳು–ಉಲ್ಲಂಘನೆಗಳು :

- ನೊಂದಣಿ ಬಾಧ್ಯತೆಯಿದ್ದರೂ ನೊಂದಾಯಿಸದಿರುವುದು
- ಸರಕು ಯಾ ಸೇವೆಗೆ ಸೂಕ್ತ ಇನ್ವಾಯ್ಸ್ ನೀಡದಿರುವುದು
- ನಿಗದಿತ ದಾಖಲೆಗಳನ್ನು ನಿರ್ವಹಿಸದಿರುವುದು
- ನಿಗದಿತ ಅವಧಿಯೊಳಗೆ ವರದಿ ಸಲ್ಲಿಸದಿರುವುದು
- ನಿಗದಿತ ತೆರಿಗೆ ಪಾವತಿಸದಿರುವುದು
- ನಿಗದಿತ ಮಾಹಿತಿ ನೀಡದಿರುವುದು
- ಸುಳ್ಳು ಯಾ ತಪ್ಪು ಮಾಹಿತಿ ನೀಡುವುದು
- ತೆರಿಗೆ ವಂಚನೆ ಮಾಡುವುದು

ಬಡ್ಡಿ–ದಂಡ–ದಂಡನೆ :

- ಪ್ರತಿದಿನದ ಲೆಕ್ಕದಲ್ಲಿ ಬಡ್ಡಿ
- ಪ್ರತಿದಿನದ ಲೆಕ್ಕದಲ್ಲಿ ದಂಡ
- ಕೆಲವೊಂದು ಅಪರಾಧಗಳಿಗೆ ದಂಡನೆ

ಜಿಎಸ್‌ಟಿ : ಮಾಡು–ಮಾಡದಿರುಗಳು :

- ಅನ್ವಯಿಸುವಲ್ಲಿ ನೋಂದಣಿ ಪಡೆಯಿರಿ
- ಎಲ್ಲ ದಾಖಲೆಗಳಲ್ಲಿ ನೋಂದಣಿ ಸಂಖ್ಯೆ ನಮೂದಿಸಿ
- ರಸೀದಿ, ವೋಚರ್‌ಗಳ ನಮೂನೆ ಬದಲಾಯಿಸಿಕೊಳ್ಳಿ
- ನಿಗದಿತ ದಿನಾಂಕದೊಳಗಾಗಿ ವರದಿ ಸಲ್ಲಿಸಿ
- ಸೂಕ್ತ ದರದಲ್ಲಿ ತೆರಿಗೆ ಪಾವತಿಸಿ.

ಜಿಎಸ್‌ಟಿ ಕಾಯ್ದೆಯಲ್ಲಿನ ಇತ್ತೀಚಿನ ಬದಲಾವಣೆಗಳು

ಕೇಂದ್ರ ಸರ್ಕಾರದ ವಿತ್ತ ಸಚಿವಾಲಯವು ನೀಡಿದ ಪ್ರಕಟಣೆಯನ್ವಯ ಹಿಂದಿನ ವರ್ಷದಲ್ಲಿ ವಾರ್ಷಿಕ ತೆರಿಗೆದಾಯಕ ವಹಿವಾಟು 50 ಲಕ್ಷಕ್ಕಿಂತ ಕಡಿಮೆಯಿರುವ ನೋಂದಾಯಿತ ಪೂರೈಕೆದಾರರು ಪ್ರಿಸಂಪ್ಟಿವ್ ಟ್ಯಾಕ್ಸ್ ಸ್ಕೀಮನ್ನು ಆಯ್ಕೆಮಾಡಿಕೊಂಡು ತಮ್ಮ ತೆರಿಗೆದಾಯಕ ಪೂರೈಕೆಗಳ ಮೇಲೆ 6% ಜಿಎಸ್‌ಟಿ (3%+3%) ಕಟ್ಟಬಹುದಾಗಿರುತ್ತದೆ.

ಈ ಸ್ಕೀಮನ್ನು ಆಯ್ಕೆಮಾಡಿಕೊಳ್ಳುವ ನೊಂದಾಯಿತರಿಗೆ ಕೆಳಕಂಡ ನಿಬಂಧನೆಗಳು ಅನ್ವಯಿಸುತ್ತದೆ

- ಈ ಸ್ಕೀಮು ದಿನಾಂಕ 01–04–2019 ರಿಂದ ಜಾರಿಗೆ ಬರುವಂತಹುದಾಗಿರುತ್ತದೆ.
- ಅಂತರ ರಾಜ್ಯ ಪೂರೈಕೆದಾರರಿಗೆ ಈ ಸ್ಕೀಮು ಅನ್ವಯಿಸುವುದಿಲ್ಲ.
- ಒಳಪೂರೈಕೆಗಳ ಮೇಲಿನ ಇನ್‌ಪುಟ್ ಟ್ಯಾಕ್ಸ್ ಕ್ರೆಡಿಟ್ ಸೌಲಭ್ಯವಿರುವುದಿಲ್ಲ.
- ಹೊರಪೂರೈಕೆಗಳ ಮೇಲೆ ಜಿಎಸ್‌ಟಿ ತೆರಿಗೆ ವಿಧಿಸುವಂತಿಲ್ಲ.

ಆದ್ದರಿಂದ ಅಂತಹ ಖರೀದಿದಾರರಿಗೆ ಇನ್‌ಪುಟ್ ಟ್ಯಾಕ್ಸ್ ಕ್ರೆಡಿಟ್ ಲಭ್ಯವಿರುವುದಿಲ್ಲ

- ಹಿಮ್ಮುಖ ಹೊಣೆಗಾರಿಕೆ ವಿಧಾನದಲ್ಲಿ ತೆರಿಗೆ ಬಾಧ್ಯತೆ ಇರುತ್ತದೆ.
- ಹೊರಪೂರೈಕೆಗಳಿಗೆ ಟ್ಯಾಕ್ಸ್ ಇನ್ವಾಯ್ಸ್ (ಕರದರಪಟ್ಟಿ) ನೀಡುವಂತಿಲ್ಲ. ಬದಲಿಗೆ ಬಿಲ್ ಆಫ್ ಸಪ್ಲೈ (ಪೂರೈಕೆ ಪಟ್ಟಿ) ನೀಡಬೇಕಿರುತ್ತದೆ
- ಬಿಲ್ ಆಫ್ ಸಪ್ಲೈಯಲ್ಲಿ Taxable person paying tax in terms of notification No. 2/2019-Central Tax (Rate) dated 07.03.2019, not eligible to collect tax on supplies ಎಂದು ನಮೂದಿಸಬೇಕು.

ಈ ಪ್ರಕಟಣೆಯನುಸಾರ ಪ್ರಿಸಂಪ್ಟಿವ್ ಟ್ಯಾಕ್ಸ್ ಸ್ಕೀಮ್ ಕುರಿತು ಕೆಳಕಂಡ ಅಂಶಗಳನ್ನು ಗಮನಿಸಬೇಕು

- ಇದು ಈಗಾಗಲೇ ಇರುವ ಕಾಂಪೋಸಿಷನ್ ಸ್ಕೀಮ್ ಅಲ್ಲ. ಕಾಂಪೋಸಿಷನ್ ಸ್ಕೀಮಿನ ಎಲ್ಲಾ ನಿಯಮಗಳು ಇದಕ್ಕೆ ಪೂರ್ಣವಾಗಿ ಅನ್ವಯಿಸದು.
- ಈ ಸ್ಕೀಮಿನಿಂದಾಗಿ ಜಿಎಸ್‌ಟಿ ನೋಂದಣಿ ಬಾಧ್ಯತೆಯ ಮಿತಿಯಾಗಲೀ, ನೋಂದಣಿಗೆ ಇರುವ ನಿಯಮಗಳಾಗಲೀ ಬದಲಾವಣೆಯಾಗುವುದಿಲ್ಲ. ಅಂದರೆ ನೋಂದಣಿಯ ಬಾಧ್ಯತೆಯನ್ನು ನಿರ್ಧರಿಸಲು ಮೊದಲಿನಂತೆ ವಿನಾಯಿತಿ ವಹಿವಾಟು, ತೆರಿಗೆದಾಯಕ ವಹಿವಾಟು ಸೇರಿ ಒಟ್ಟು ವಹಿವಾಟನ್ನು ಪರಿಗಣಿಸಬೇಕು
- ಆದರೆ ಈ ಸ್ಕೀಮಿನಡಿಯಲ್ಲಿ ತೆರಿಗೆದಾಯಕ ವಹಿವಾಟನ್ನು ನಿರ್ಧರಿಸುವಾಗ ಒಟ್ಟು ವಹಿವಾಟಿನಲ್ಲಿ ಬಡ್ಡಿ ಆದಾಯವನ್ನು (ಹೂಡಿಕೆ ಮಾಡಿದ ಠೇವಣಿ ಮೇಲಿನ ಬಡ್ಡಿ ಮತ್ತು ನೀಡಿದ ಸಾಲಗಳ ಮೇಲಿನ ಬಡ್ಡಿ) ಹೊರತುಪಡಿಸಬೇಕು. **ಪತ್ತಿನ ಸಹಕಾರ ಸಂಸ್ಥೆಗಳು ಇದರ ಉಪಯೋಗ ಪಡೆಯಬಹುದಾಗಿರುತ್ತದೆ.**
- ನೊಂದಾಯಿತ ಸೇವಾದಾತರ ತೆರಿಗೆದಾಯಕ ವಹಿವಾಟು ವಾರ್ಷಿಕ ಐವತ್ತು ಲಕ್ಷ ರೂಗಳನ್ನು ಮೀರದಿದ್ದಲ್ಲಿ ಅಂಥಹವರು ಈ ಸ್ಕೀಮನ್ನು ಆಯ್ಕೆಮಾಡಿಕೊಳ್ಳಬಹುದು.
- ನೋಂದಣಿಯ ಸಮಯದಲ್ಲಿ ಅಥವಾ ಪ್ರತಿ ವರ್ಷ ಏಪ್ರಿಲ್ 1ರಂದು ಈ ಸ್ಕೀಮನ್ನು ಆಯ್ಕೆ ಮಾಡಿಕೊಳ್ಳಬಹುದು.
- ಯಾವುದೇ ನೋಂದಣಿದಾರನು ವರ್ಷದ ಮಧ್ಯದಲ್ಲಿ ಈ ಸ್ಕೀಮನ್ನು ಆಯ್ಕೆಮಾಡಿಕೊಳ್ಳಲು ಬಾರದು
- ಹಾಗೆಯೇ ವರ್ಷದ ಮಧ್ಯದಲ್ಲಿ ಈ ಸ್ಕೀಮಿನಿಂದ ಹೊರಬರಲೂ ಆಗದು.

ಸೌಹಾರ್ದ ಸಹಕಾರಿ ಕಾಯ್ದೆಯ ಅಂಶಗಳು

- ಸಹಕಾರಿಯು ತನ್ನ ಹೆಸರಿನಲ್ಲಿಯಾಗಲೀ, ಫಲಕದಲ್ಲಿಯಾಗಲೀ, ಯಾವುದೇ ವ್ಯಾವಹಾರಿಕ ದಾಖಲೆಗಳಲ್ಲಿಯಾಗಲೀ ಬ್ಯಾಂಕು ಎಂಬ ಪದವನ್ನು ಬಳಸಬಾರದು
- ಸೂಕ್ತ ವ್ಯವಹಾರ ನಿಯಮಗಳಿಲ್ಲದೆ ಯಾವುದೇ ವ್ಯವಹಾರ ನಡೆಸುವಂತಿಲ್ಲ. ಉದಾ: ಸಾಲ-ಠೇವಣಿ ನಿಯಮಗಳು
- ಕಾರ್ಯಕ್ಷೇತ್ರದ ವ್ಯಾಪ್ತಿಯನ್ನು ಮೀರಿ ನಿವಾಸಿಯಾಗಿರುವ ಯಾವುದೇ ವ್ಯಕ್ತಿಯನ್ನು ಸದಸ್ಯರನ್ನಾಗಿ ಸೇರಿಸಿಕೊಳ್ಳಬಾರದು, ಅವರೊಡನೆ ಠೇವಣಿ ಸಂಗ್ರಹಣೆ, ಸಾಲ ನೀಡಿಕೆಯೂ ಸೇರಿದಂತೆ ಸದಸ್ಯರೊಡನೆ ಮಾಡಬಹುದಾದ ಯಾವುದೇ ಪತ್ತಿನ ವ್ಯವಹಾರ ಮಾಡಬಾರದು.
- ಬೈಲಾದಲ್ಲಿಲ್ಲದ ಯಾವುದೇ ಉದ್ದೇಶ-ಚಟುವಟಿಕೆ-ವ್ಯವಹಾರಗಳನ್ನು ಕೈಗೆತ್ತಿಕೊಳ್ಳಬಾರದು
- ಸದಸ್ಯತ್ವವನ್ನು ನೀಡುವಾಗ ಕಾಯ್ದೆ-ಬೈಲಾದಲ್ಲಿನ ಅಂಶಗಳನ್ನು ಗಮನಿಸಿ ವ್ಯವಹರಿಸಬೇಕು
- ನಾಮ ಮಾತ್ರ ಸದಸ್ಯರಿಂದ ಪಿಗ್ಮಿ ಠೇವಣಿಗಳೂ ಸೇರಿದಂತೆ ಯಾವುದೇ ಠೇವಣಿಗಳನ್ನು ಸ್ವೀಕರಿಸುವಂತಿಲ್ಲ.
- ನಾಮ ಮಾತ್ರ ಸದಸ್ಯರಿಗೆ ಭದ್ರತಾ ರಹಿತ ಸಾಲವೂ ಸೇರಿದಂತೆ ಯಾವುದೇ ದೀರ್ಘಾವಧಿ ಸಾಲಗಳನ್ನು ನೀಡುವಂತಿಲ್ಲ.
- ಸಹಕಾರಿ ಕಾಯ್ದೆಯ ತಿದ್ದುಪಡಿಯಾಗಿದ್ದು ಕಾಯ್ದೆಯಲ್ಲಿದ್ದ ಸಹ ಸದಸ್ಯತ್ವ ಹೊಂದುವ ಅವಕಾಶವನ್ನು ಒಟ್ಟು ಸದಸ್ಯರ 15%ಕ್ಕೆ ನಿಗದಿಪಡಿಸಲಾಗಿದೆ. ಅಂದರೆ ಸಹಕಾರ ಸಂಘದ ಒಟ್ಟು ಸದಸ್ಯರ ಸಂಖ್ಯೆಯ 15%ಕ್ಕೆ ಮೀರದಂತೆ ಸಹಸದಸ್ಯರನ್ನು ಹೊಂದಬಹುದಾಗಿದೆ.
- ಸಹಕಾರಿಗಳಲ್ಲಿ ಯಾವುದೇ ರೀತಿಯ ಸದಸ್ಯತ್ವ ನೀಡುವ ಸಮಸ್ತ ಹಕ್ಕು ಮತ್ತು ಕರ್ತವ್ಯ ಆಡಳಿತ ಮಂಡಳಿಯದ್ದಾಗಿರುತ್ತದೆ. ಹೊಸದಾಗಿ ಸಾಮಾನ್ಯ ಸದಸ್ಯತ್ವವನ್ನು ನೀಡುವಾಗ ಆಡಳಿತ ಮಂಡಳಿಯ ಅನುಮೋದನೆ ಪಡೆದ ನಂತರವೇ ನೀಡಬೇಕು ಹಾಗೂ ಆ ರೀತಿ ಸದಸ್ಯತ್ವವನ್ನು ಪಡೆದವರ ಹೆಸರನ್ನು ಸಭೆಯ ನಡಾವಳಿಯಲ್ಲಿ ನಮೂದಿಸಬೇಕು. ಈ ಅಧಿಕಾರವನ್ನು ಮುಕಾನಿಯವರಿಗೆ

ಪ್ರತ್ಯಾಯೋಜಿಸಲು ಬರುವುದಿಲ್ಲ.

- ಕಾಯ್ದೆ ತಿದ್ದುಪಡಿಯಾಗುವ ಪೂರ್ವದಲ್ಲಿ ನೀಡಿದ ಸಹಸದಸ್ಯತ್ವವನ್ನು ತಿದ್ದುಪಡಿಯಾದ ದಿನದಿಂದ ಆರು ತಿಂಗಳೊಳಗಾಗಿ ಸಾಮಾನ್ಯ ಸದಸ್ಯರನ್ನಾಗಿ ಪರಿವರ್ತಿಸಬೇಕು ಇಲ್ಲ ಅವರ ಸದಸ್ಯತ್ವವನ್ನು ರದ್ದುಗೊಳಿಸಬೇಕು.
- ಆಡಳಿತ ಮಂಡಳಿಯ ಸದಸ್ಯರಿಗೆ ಭತ್ಯೆಗಳನ್ನು ಉಪವಿಧಿಯಲ್ಲಿರುವ ಪ್ರಕಾರವೇ ನೀಡಬೇಕು. ಬೈಲಾದಲ್ಲಿಲ್ಲದ ಭತ್ಯೆಗಳನ್ನು ನೀಡುವಂತಿಲ್ಲ. ನಿರ್ದೇಶಕ ಮಂಡಳಿಯಲ್ಲಿ ಅಥವಾ ಸಾಮಾನ್ಯ ಸಭೆಯಲ್ಲಿ ತೀರ್ಮಾನಿಸಿ ನಿರ್ದೇಶಕರಿಗೆ, ಪದಾಧಿಕಾರಿಗಳಿಗೆ ಭತ್ಯೆಗಳನ್ನು ನೀಡುವಂತಿಲ್ಲ.
- ಸಹಕಾರಿಯು ನಾಮ ಮಾತ್ರ ಸದಸ್ಯರಿಂದ ಸ್ವೀಕರಿಸುವ ಶುಲ್ಕವನ್ನು ವಾಪಸಾತಿ ಮಾಡುವಂತಿಲ್ಲ. ಇದನ್ನು ಆಯಾ ವರ್ಷದಲ್ಲೇ ಆದಾಯವೆಂದು ಪರಿಗಣಿಸಬೇಕು.
- ಅನೇಕ ಸಹಕಾರಿಗಳು ಪತ್ತೇತರ ಚಟುವಟಿಕೆಯನ್ನು ನಡೆಸುತಿದ್ದು ಅದರಿಂದ ಬರುವ ಆದಾಯಕ್ಕೆ ಆದಾಯ ತೆರಿಗೆಯ ಬಾಧ್ಯತೆಯಿರುತ್ತದೆ. ಹಾಗೂ ಇದಕ್ಕೆ ಸಂಬಂಧಿಸಿದ ಖರ್ಚುಗಳ ವಿವರಗಳನ್ನು ಪ್ರತ್ಯೇಕವಾಗಿ ದಾಖಲಿಸುವುದು
- ಸಹಕಾರಿಗಳು ಸದಸ್ಯೇತರರೊಂದಿಗೆ ವ್ಯವಹಾರಗಳನ್ನು ನಡೆಸುತ್ತಿದ್ದರೆ ಅದರಿಂದ ಬರುವ ಆದಾಯಕ್ಕೆ ಆದಾಯ ತೆರಿಗೆ ಬಾಧ್ಯತೆಯಿರುತ್ತದೆ. ಇದಕ್ಕೆ ಸಂಬಂಧಿಸಿದ ಖರ್ಚುಗಳ ವಿವರಗಳನ್ನು ಪ್ರತ್ಯೇಕವಾಗಿ ದಾಖಲಿಸುವುದು.
- ಅನೇಕ ಸಹಕಾರಿಗಳು ತಮ್ಮ ಹೂಡಿಕೆಗಳನ್ನು ಸಹಕಾರೇತರ ಸಂಸ್ಥೆಗಳಲ್ಲಿ ಅಂದರೆ ವಾಣಿಜ್ಯ ಬ್ಯಾಂಕುಗಳಲ್ಲಿ ಮಾಡಿರುತ್ತಾರೆ. ಅದರಿಂದ ಬರುವ ಆದಾಯಕ್ಕೆ ಆದಾಯ ತೆರಿಗೆಯ ಬಾಧ್ಯತೆಯಿರುತ್ತದೆ. ಆದ್ದರಿಂದ ಸಹಕಾರ ಸಂಘಗಳಲ್ಲಿಯೇ ಹೂಡಿಕೆ ಮಾಡುವುದು.
- ಸಹಕಾರಿಯಲ್ಲಿ ಸದಸ್ಯರು ತೆರೆಯುವ ಉಳಿತಾಯ ಖಾತೆಗಳಲ್ಲಿರುವ ಮೊತ್ತಗಳಿಗೆ ಬಡ್ಡಿ ನೀಡಿದರೆ ಅದನ್ನು ಠೇವಣಿ ಎಂದು ಪರಿಗಣಿಸುವ ಸಾಧ್ಯತೆಯಿರುವುದರಿಂದ ಉಳಿತಾಯ ಖಾತೆಗಳಿಗೆ ಬಡ್ಡಿ ನೀಡುವ ಕ್ರಮವನ್ನು ಸ್ಥಗಿತಗೊಳಿಸುವುದು ಉತ್ತಮ.

ನಿಧಿಗಳು : ಸೃಜನೆ, ಬಳಕೆ, ವಿನಿಯೋಗ

- ನಿಧಿಗಳಿಗೆ ಲಾಭಾಂಶ ವಿಂಗಡನೆಯ ಮೂಲಕ ಮೊತ್ತ ಸೇರಿಸಲಾಗುತ್ತದೆ. ಪ್ರಾವಧಾನಗಳಿಗೆ ಲಾಭ ನಷ್ಟ ತಃಖ್ತೆಯಲ್ಲಿ ಅವಕಾಶ ಮಾಡಿ ಮೊತ್ತ ಸೇರಿಸಲಾಗುತ್ತದೆ. ಪ್ರಾವಧಾನ ಮಾಡುವುದು ಕಡ್ಡಾಯ. ಲಾಭಾಂಶವಿದ್ದರೆ ಮಾತ್ರ ನಿಧಿಗಳಿಗೆ ವಿಂಗಡನೆ
- ಪ್ರಾರಂಭಿಕವಾಗಿ ಬೈಲಾದಲ್ಲಿ ನಿಧಿಗಳು ನಮೂದಾಗಿರುತ್ತವೆ
- ನಂತರದಲ್ಲಿ ನೂತನ ನಿಧಿಯ ಸೃಜನೆಯ ವಿಚಾರ ನಿರ್ದೇಶಕರ ಸಭೆಯಲ್ಲಿ ಚರ್ಚೆಯಾಗಿ ಕರಡು ನಿಯಮಗಳನ್ನು ರೂಪಿಸಿ ಸಾಮಾನ್ಯ ಸಭೆಯಲ್ಲಿ ಪ್ರಸ್ತಾಪ ಮುಂದಿಡಬೇಕು. ಯಾವ ನಿಧಿ, ಉದ್ದೇಶ ಏನು, ಸಂಗ್ರಹ ಹೇಗೆ ಮತ್ತು ಎಷ್ಟು, ಎಂಬಿತ್ಯಾದಿ ವಿಷಯಗಳು ನಿರ್ಧಾರವಾಗಬೇಕು. ಸಾಮಾನ್ಯ ಸಭೆಯಲ್ಲಿ ಮಂಡಿಸಿ ಅನುಮೋದನೆಯಾಗಬೇಕು. ನಂತರ ಬೈಲಾ ತಿದ್ದುಪಡಿ ಮಾಡಿಕೊಳ್ಳಬೇಕು ಬೈಲಾ ತಿದ್ದುಪಡಿಗಳು ನಿಬಂಧಕರಿಂದ ಅನುಮೋದನೆಯಾದ ನಂತರ ನಿಧಿಗಳಿಗೆ ಹಂಚಿಕೆಯಾಗಬೇಕು.
- ಕ್ರಮವಾಗಿ ಸೃಜನೆಯಾದ ನಿಧಿಗಳನ್ನು ಬಳಸುವ ಬಗ್ಗೆ ನೀತಿ ನಿಯಮಗಳನ್ನು ರೂಪಿಸಬೇಕು. ಅಂದರೆ ಈ ನಿಧಿಯನ್ನು ಯಾವಾಗ ಯಾವ ಯಾವ ಬಾಬ್ತುಗಳಿಗೆ ಹೇಗೆ ಮತ್ತು ಎಷ್ಟು ಮೊತ್ತವನ್ನು ಬಳಸಬಹುದು ಎಂಬಿತ್ಯಾದಿಗಳ ಬಗ್ಗೆ ನಿಯಮಗಳನ್ನು ರೂಪಿಸಿ ಅಳವಡಿಸಿಕೊಳ್ಳಬೇಕು.
- ಸಹಕಾರಿ ಕಾನೂನು ಸಮ್ಮತವಲ್ಲದ ಬಾಬ್ತುಗಳಿಗೆ ನಿಧಿಗಳ ಬಳಕೆಗೆ ಅವಕಾಶವಿರುವುದಿಲ್ಲ.
- ಕ್ರಮವಾಗಿ ಸೃಜನೆಯಾಗಿ ರೂಪುಗೊಂಡ ನಿಧಿಯನ್ನು ಅದು ನಿಯಮಗಳಂತೆ ಬಳಕೆಯಾಗುವವರೆಗೆ ಯಾವ ರೀತಿಯಲ್ಲಿ ವಿನಿಯೋಗಿಸಬೇಕು ಎಂಬುದನ್ನು ನಿರ್ಧರಿಸಬೇಕು.
- ಸಂಸ್ಥೆಯ ದುಡಿಯುವ ಬಂಡವಾಳವಾಗಿ ಉಪಯೋಗಿಸಬೇಕೆ ಅಥವಾ ಹೊರಗಡೆ ಹೂಡಿಕೆ ಮಾಡಬೇಕೆ ಎಂಬುದನ್ನು ನಿರ್ದಿಷ್ಟ ಪಡಿಸಬೇಕು.
- ಹಾಗೆ ಹೊರಗಡೆ ನಿಯೋಜಿಸಿದ ಹೂಡಿಕೆಗಳ ಮೇಲೆ ಬರುವ ಆದಾಯವನ್ನು ಹೇಗೆ ಪರಿಗಣಿಸಬೇಕು – ಆದಾಯವೆಂದು ಲಾಭ ನಷ್ಟದ ಖಾತೆಗೆ ಜಮಾ ಮಾಡುವುದೆ ಅಥವಾ ಸದರಿ ನಿಧಿಗೇ ಜಮಾ ಮಾಡುವುದೆ? ಎಂಬಿತ್ಯಾದಿಗಳ ಬಗ್ಗೆ ತೀರ್ಮಾನಿಸಿರಬೇಕು.
- ಬೈಲಾದಲ್ಲಿಲ್ಲದ ಯಾವುದೇ ನಿಧಿಗಳಿಗೆ ಲಾಭ ವಿಂಗಡನೆ ಮಾಡುವಂತಿಲ್ಲ.
- ಆಯಾ ನಿಧಿಗಳನ್ನು ಆಯಾ ನಿರ್ದಿಷ್ಟಪಡಿಸಿದ ಉದ್ದೇಶಗಳಿಗೆ ಮಾತ್ರ ಬಳಸಬೇಕೇ ವಿನ: ಅನ್ಯೋಪಯೋಗ ಸಲ್ಲದು.

- ಯಾವುದೇ ಒಂದು ಉದ್ದೇಶಕ್ಕೆ ಎರಡು ನಿಧಿಗಳನ್ನು ಸೃಜಿಸುವಂತಿಲ್ಲ, ಲಾಭ ವಿಂಗಡನೆ ಮಾಡುವಂತಿಲ್ಲ.
- ಸಂಚಯಿತ ನಿಧಿಗಳು ಸಹಕಾರಿಯ ದುಡಿಯುವ ಬಂಡವಾಳದ ಭಾಗವಾಗಿರುತ್ತದೆ
- ಒಂದು ನಿಧಿಯಿಂದ ಮತ್ತೊಂದು ನಿಧಿಗೆ ವರ್ಗಾಯಿಸಲು ಸಾಮಾನ್ಯ ಸಭೆಯ ಪೂರ್ವಾನುಮತಿ ಅತ್ಯಗತ್ಯ.
- ಅಂತಿಮವಾಗಿ ನಿಧಿಗಳಲ್ಲಿರುವ ಮೊತ್ತ ಸದಸ್ಯರಿಗೇ ಸೇರುವಂತಹುದು.

ಕಾರ್ಮಿಕ ಕಾಯ್ದೆಗಳ ಅಂಶಗಳು

ಸಿಬ್ಬಂದಿಗಳಿಗೆ ಸಂಬಂಧಿಸಿದಂತೆ

- ಸಿಬ್ಬಂದಿಗಳ ಆಯ್ಕೆ ಪ್ರಕ್ರಿಯೆ ಕಾಯ್ದೆಗನುಗುಣವಾಗಿರಲಿ
- ಸಿಬ್ಬಂದಿ ನೇಮಕಾತಿ ಸಮಿತಿ ಮೂಲಕ ನೇಮಕ ಮಾಡಿಕೊಳ್ಳಿ
- ಸಿಬ್ಬಂದಿಗಳ ಆಯ್ಕೆ ಮಾನದಂಡಗಳು ಸೂಕ್ತವಾಗಿರಲಿ
- ಸಿಬ್ಬಂದಿ ಸೇವಾನಿಯಮಗಳು, ರಜಾ ನಿಯಮಗಳನ್ನು ರೂಪಿಸಿ, ಜಾರಿಗೆ ತಂದು, ಅಳವಡಿಸಿಕೊಳ್ಳಿ
- ವೇತನ, ರಜಾ ಸೌಲಭ್ಯಗಳು ಕಾರ್ಮಿಕ ಕಾಯ್ದೆಗಳಿಗನುಗುಣವಾಗಿರಲಿ
- ಕಾರ್ಮಿಕ ಕಾಯ್ದೆಗಳು, ಸರಕಾರದ ಆದೇಶದನ್ವಯ ವಯೋಮಿತಿಗಳನ್ನು ಗಮನಿಸಿ ನೇಮಿಸಿಕೊಳ್ಳಿ
- ಸೂಕ್ತ ದಾಖಲಾತಿಗಳನ್ನು ನಿರ್ವಹಿಸಿ, ಅಧಿಕಾರ ಪ್ರತ್ಯಾಯೋಜನೆ ಸಮಂಜಸವಾಗಿರಲಿ
- ಕಾಲಕಾಲಕ್ಕೆ ಅಗತ್ಯ ತರಬೇತಿಗಳನ್ನು ಏರ್ಪಡಿಸಿ
- ಅನ್ವಯಿಸುವ ಎಲ್ಲ ಕಾರ್ಮಿಕ ಕಾನೂನುಗಳನ್ನು ಪಾಲಿಸಿ.

ಅನ್ವಯಿಸುವ ಕಾರ್ಮಿಕ ಕಾಯ್ದೆಗಳು

- Payment of Wages Act, 1936
- Workmen's Compensation Act,
- The Maternity Benefit Act, 1961
- The Payment of Bonus Act, 1965
- The Sexual Harassment of Women at Workplace Act
- Minimum Wages Act, 1948
- Employees State Insurance Act (ESIC)
- Employees Provident Fund Act
- Payment of Gratuity Act, 1972

ಇತರೆ ಕಾಯ್ದೆಯ ಅಂಶಗಳು

o Information Technology Act, 2000

o Prevention of Money Laundering Act, 2002

o Benami Transactions (Prohibition) Act 1988

o Banning of Unregulated Deposits Schemes Act, 2019

o Civil Procedure Code

o Indian Penal Code, 1860

o Transfer of Property Act 1882

o Sale of Goods Act 1930

o The General Clauses Act, 1897

o Arbitration and Conciliation Act o The Karnataka Stamp Act, 1957 o Indian Contract Act, 1872

o Transparency Act, 1999.

o Laws of Limitation

o Prize Chits & Money Circulation Scheme (Banning) Act 1978

o Ordinances issued by the Govts. - Central or State

o Karnataka Shops & Establishments Act

o Consumer Protection Act, 1986

o Right to Information Act.

o Food Safety and Standards Act, 2006

o Weights and Measures Act, 1976

o Legal Metrology (Packaged Commodities) Rules, 2011

ಕೊರೊನಾ ವೈರಸ್ ಬಗ್ಗೆ ಆತಂಕ ಬೇಡ – ಎಚ್ಚರವಿರಲಿ

– ಶ್ರೀ ಶಂಕರ ಎಸ್



ಕೊರೊನಾ ವೈರಸ್‌ನಿಂದ ಬರುವ ಕೋವಿಡ್ 19 ಭೀತಿ ಜನರನ್ನು ಕಾಡುತ್ತಿದೆ. ಇದರ ಬಗ್ಗೆ ಆತಂಕ ಬೇಡ, ಎಚ್ಚರವಿರಲಿ ಎಂದು ಪ್ರತಿಯೊಂದು ದೇಶವೂ ಜನರಲ್ಲಿ ಜಾಗೃತಿ ಮೂಡಿಸುವ ಪ್ರಯತ್ನ ಮಾಡುತ್ತಿದೆ. ಕೊರೊನಾವೈರಸ್ ಎಂಬ ವೈರಸ್ ಪ್ರಾಣಿಗಳಲ್ಲಿ ಕಂಡು ಬರುತ್ತದೆ. ಕೊರೊನಾವೈರಸ್‌ನಲ್ಲಿ ಹಲವು ಬಗೆಗಳಿವೆ. ಎಲ್ಲಾ ವೈರಸ್ ಹಾನಿಕಾರಕವಲ್ಲ. ಆದರೆ ಈಗ ಕಾಣಿಸಿಕೊಂಡಿರುವ ನೋವೆಲ್ ಕೊರೊನಾ ವೈರಸ್ ತುಂಬಾ ಅಪಾಯಕಾರಿಯಾದ ವೈರಸ್ ಆಗಿದ್ದು ಇದು ಸೋಂಕು ತಗುಲಿದ ವ್ಯಕ್ತಿಯಿಂದ ಆರೋಗ್ಯವಂತ ವ್ಯಕ್ತಿಗೆ ಉಸಿರಾಟ, ಸ್ಪರ್ಶ, ಅವರು ಮುಟ್ಟಿದ ವಸ್ತುಗಳನ್ನು ಮುಟ್ಟುವುದರಿಂದ ಹರಡುವುದು.

ನೋವೆಲ್ ಕೊರೊನಾ ವೈರಸ್ ಎಂದರೇನು ?

ನೋವೆಲ್ ಕೊರೊನಾ ವೈರಸ್ ಎಂಬುವುದು ಕೊರೊನಾ ವೈರಸ್‌ನ ಒಂದು ಬಗೆಯಾಗಿದ್ದು ಈ ವೈರಸ್ ಇತ್ತೀಚೆಗಷ್ಟೇ ಚೀನಾದ ವುಹಾನ್‌ನಲ್ಲಿ ಮೊದಲಿಗೆ ಪತ್ತೆಯಾಯಿತು. ಈ ವೈರಸ್ ಹೇಗೆ ತಡೆಗಟ್ಟಬಹುದು ಎಂಬುವುದನ್ನು ಇದುವರೆಗೆ ಕಂಡು ಹಿಡಿದಿಲ್ಲ. ಈ ವೈರಸ್ ತಡೆಗಟ್ಟಲು ವಿಜ್ಞಾನಿಗಳು ಹಾಗೂ ವೈದ್ಯರು ಹರಸಾಹಸ ಪಡುತ್ತಿದ್ದಾರೆ. ಈ ವೈರಸ್ ಅನ್ನು 2019–nCoV ಎಂದು ಗುರುತಿಸಲಾಗಿದೆ.

SARS-CoV (ಸಾರ್ಸ್–Cov) SARS-CoV ಅಂದರೆ ತೀವ್ರ ಉಸಿರಾಟ ತೊಂದರೆಯ ಕೊರೊನಾವೈರಸ್ (Severe Acute respiratory Syndrome Coronavirus). ಸಾರ್ಸ್ ಎಂಬ ಮಾರಾಣಾಂತಿಕ ವೈರಸ್ 2002ರಲ್ಲಿ ಚೀನಾ ಹಾಗೂ ಪ್ರಪಂಚದ ಇತರ ಕಡೆ ಹಲವಾರು ಜನರನ್ನು ಬಲಿ ತೆಗೆದಿದೆ. ಈ ವೈರಸ್ ಬಾವಲಿಗಳ ಮುಖಾಂತರ ಹರಡುತ್ತಿದ್ದವು.

ಕೊರೊನಾ ವೈರಸ್ ಸಾರ್ಸ್ ರೀತಿಯ ರೋಗವೇ ?

2019 ಡಿಸೆಂಬರ್‌ನಲ್ಲಿ ಕಾಣಿಸಿಕೊಂಡ 2019–nCoVಗೂ 2002ರಲ್ಲಿ ಕಾಣಿಸಿಕೊಂಡಿದ್ದ ಸಾರ್ಸ್–CoV ವೈರಸ್‌ಗೂ ಸಂಬಂಧವಿಲ್ಲ. ಆದರೆ ಈ ಎರಡೂ ವೈರಸ್ ಸಾರ್ಸ್ ಕುಟುಂಬಕ್ಕೆ ಸೇರಿದ ವೈರಸ್‌ಗಳಾಗಿವೆ.

ಕೊರೊನಾ ವೈರಸ್ ಎಷ್ಟು ಅಪಾಯಕಾರಿ?

ಕೊರೊನಾ ವೈರಸ್ ಎಲ್ಲವೂ ಅಪಾಯಕಾರಿಯಲ್ಲ. ಆಲ್ಫಾ ಕೊರೊನಾವೈರಸ್ (ಇದರಲ್ಲಿ NL63 ಮತ್ತು 229E ಎಂಬ ಎರಡು ವಿಧವಿದೆ) ಮತ್ತು ಬೀಟಾ ಕೊರೊನಾವೈರಸ್ (ಇದರಲ್ಲಿ HKU1 ಮತ್ತು OC43 ಎಂಬ ಎರಡು ವಿಧಗಳಿವೆ) ಕಾಣಿಸಿದರೆ ಸ್ವಲ್ಪ ಮಟ್ಟಿಗೆ ಆರೋಗ್ಯ ಸಮಸ್ಯೆ ಕಂಡು ಬರುವುದು ಅಷ್ಟೇ. ಆದರೆ SARS-CoV ಮತ್ತು MERS-CoV ಬಗೆಯ ಕೊರೊನಾ ವೈರಸ್ ಬಂದರೆ ಸಾವು ಕೂಡ ಸಂಭವಿಸಬಹುದು. ಈಗ ಕಾಣಿಸಿರುವ ಮಾರಕ ಕೊರೊನಾ ವೈರಸ್ SARS ಕುಟುಂಬಕ್ಕೆ ಸೇರಿರುವುದ–ರಿಂದ ಅಪಾಯ ತೀವ್ರತೆ ಹೆಚ್ಚಾಗಿದೆ.

ಯಾರಿಗೆ ಕೊರೊನಾ ವೈರಸ್ ಅಪಾಯ ಹೆಚ್ಚು ?

ಯಾರಲ್ಲಿ ರೋಗ ನಿರೋಧಕ ಶಕ್ತಿ ಕಡಿಮೆ ಇರುತ್ತದೋ, ಇನ್ನು ಮಧುಮೇಹ, ಉಸಿರಾಟದ ತೊಂದರೆ ಇರುವವರು ಕೊರೊನಾ ವೈರಸ್ ದಾಳಿಗೆ ಬಲಿಯಾಗುವ ಸಾಧ್ಯತೆ ಹೆಚ್ಚು. ಇವರಲ್ಲಿ ರೋಗ ನಿರೋಧಕ ಶಕ್ತಿ ಕಡಿಮೆ ಇರುವುದರಿಂದ ಈ ವೈರಸ್ ಬೇಗನೆ ಹರಡುತ್ತದೆ.

ನೋವೆಲ್ ಕೊರೊನಾ ವೈರಸ್ ಪ್ರಾಣಿಗಳ ಮೂಲದಿಂದ ಹರಡುತ್ತದೆಯೇ?

ಈ ಬಗೆಯ ಸೋಂಕಿನ ಇತಿಹಾಸ ನೋಡಿದಾಗ ಸಾರ್ಸ್–CoV ಮತ್ತು MER-CoV ಸೋಂಕಾಣುಗಳು ಪ್ರಾಣಿಗಳಿಂದ ಮನುಷ್ಯರಿಗೆ ಹರಡಿದೆ. 2002ರಲ್ಲಿ ಕಂಡು ಬಂದ ಸಾರ್ಸ್ ರೋಗ ಬಾವಲಿಗಳಿಂದ ಹಾಗೂ ಬೆಕ್ಕಿನಿಂದ ಹರಡಿತು. MER-CoV ಸೋಂಕಾಣು ಅರಬ್ಬಿಯ ಒಂಟೆಗಳ ಮೂಲಕ ಮನುಷ್ಯನಿಗೆ ಹರಡಿತು. ಈಗ ಕಂಡು ಬಂದಿರುವ ನೋವೆಲ್ ಕೊರೊನಾ ವೈರಸ್ ಸಮುದ್ರಾಕಾರಗಳಿಂದ ಹರಡಿರಬಹುದು ಎಂದು ಹೇಳಲಾಗುತ್ತಿದೆ. ಚೀನಾದ ವುಹಾನ್‌ನ ಮೀನು ಮಾರುಕಟ್ಟೆಯಿಂದ ಈ ರೋಗ ಹರಡಲಾರಂಭಿಸಿತು. ನಂತರ ಈಗ ಈ ರೋಗ ಮನುಷ್ಯರಿಂದ ಮನುಷ್ಯರಿಗೆ ಹರಡಲಾರಂಭಿಸಿದೆ. ಚೀನಾದಲ್ಲಿ ಮಾಂಸದ ಮಾರುಕಟ್ಟೆಗೆ ಹೋದರೆ ಕೈಯಿಂದ ಮಾಂಸ ಮುಟ್ಟುವುದು ಅಥವಾ ಪ್ರಾಣಿಗಳನ್ನು ಮುಟ್ಟುವುದು ಮಾಡಬೇಡಿ ಎಂಬ ಎಚ್ಚರಿಕೆ ನೀಡಲಾಗಿದೆ. ಬೇಯಿಸದ ಮೊಟ್ಟೆ ಹಾಗೂ ಮಾಂಸಗಳನ್ನು ತಿನ್ನದಂತೆ ಎಚ್ಚರಿಕೆ ನೀಡಲಾಗಿದೆ. ಮಾಂಸ, ಮೀನು, ಮೊಟ್ಟೆಯನ್ನು ಚೆನ್ನಾಗಿ

ಬೇಯಿಸಿ ಬಳಸಬೇಕು.

ನೋವೆಲ್ ವೈರಸ್ ಒಬ್ಬರಿಂದ ಒಬ್ಬರಿಗೆ ಹರಡುತ್ತದೆಯೇ?

ಹೌದು, ಈ ಕೊರನಾ ವೈರಸ್ ಸೋಂಕು ಒಬ್ಬರಿಂದ ಒಬ್ಬರಿಗೆ ಹರಡುತ್ತದೆ. ಇದು ಉಸಿರಾಟದ ಮುಖಾಂತರ ಹರಡುತ್ತದೆ, ಸೋಂಕಿರುವ ವ್ಯಕ್ತಿಯನ್ನು ಮುಟ್ಟುವುದರಿಂದ ಹರಡುತ್ತದೆ. ಸೋಂಕಿರುವ ವ್ಯಕ್ತಿ ಕೆಮ್ಮಿದಾಗ, ಸೀನಿದಾಗ ಸೋಂಕಾಣುಗಳಳ್ಲಿ ಗಾಳಿಯ ಮುಖಾಂತರ ಮತ್ತೊಬ್ಬ ವ್ಯಕ್ತಿಗೆ ಹರಡುತ್ತದೆ. ಇದರಿಂದ ಮತ್ತೊಬ್ಬ ವ್ಯಕ್ತಿಗೆ ಸೋಂಕು ತಗುಲುವುದು. ಸೋಂಕು ಇರುವ ವ್ಯಕ್ತಿ ಮಾಸ್ಕ್ ಧರಿಸಬೇಕು ಹಾಗೂ ಕೊರೊನಾ ವೈರಸ್ ಸೋಕಿದ ವ್ಯಕ್ತಿಯನ್ನು ಪ್ರತ್ಯೇಕ ಕೊಠಡಿಯಲ್ಲಿ ಇಟ್ಟು ಚಿಕಿತ್ಸೆ ನೀಡುವ ಮೂಲಕ ಸೋಂಕು ಹರಡುವುದನ್ನು ತಡೆಗಟ್ಟುವ ಪ್ರಯತ್ನ ಮಾಡುತ್ತಿದೆ.

ಕೊರೊನಾವೈರಸ್ ಸೋಂಕು ಇರುವ ವ್ಯಕ್ತಿ ಮಾಸ್ಕ್ ಧರಿಸದೆ ಕೆಮ್ಮಿದಾಗ, ಸೀನಿದಾಗ ಏನಾಗುತ್ತದೆ ?

ಕೊರೊನಾವೈರಸ್ ಸೋಂಕಿರುವ ವ್ಯಕ್ತಿ ಕೆಮ್ಮಿದಾಗ, ಸೀನಿದಾಗ ರೋಗಾಣುಗಳು ಆ ವ್ಯಕ್ತಿಯಿದ್ದ ಪ್ರದೇಶದ ವಸ್ತುಗಳ ಮೇಲೆ ಕೂರುತ್ತದೆ. ಆ ವಸ್ತುವನ್ನು ಇತರರು ಮುಟ್ಟುವುದರಿಂದ ಅವರಿಗೆ ರೋಗ ಹರಡುತ್ತದೆ. ಈ ರೀತಿ ರೋಗ ಹರಡುತ್ತದೆ.

ವಸ್ತುವಿನ ಮೇಲೆ ರೋಗಾಣು ಎಷ್ಟು ಸಮಯ ಜೀವಿಸಿರುತ್ತದೆ ?

ಕೊರೊನಾ ವೈರಸ್ ಒಂದು ವಸ್ತುವಿನ ಮೇಲೆ ಎಷ್ಟು ಸಮಯ ಜೀವಿಸಿರುತ್ತದೆ ಎಂಬುವುದು ಇನ್ನ ಪತ್ತೆಯಾಗಿಲ್ಲ. ಕೆಲವೊಂದು ಮಾಹಿತಿ ಪ್ರಕಾರ ಕೊರೊನಾ ವೈರಸ್ ಕೆಲವು ಗಂಟೆಗಳವರೆಗೆ ಜೀವಿಸಿರುತ್ತದೆ. ಆ ಸ್ಥಳವನ್ನು ಸ್ವಚ್ಛ ಮಾಡುವುದರಿಂದ ಸಾಯಬಹುದು ಎನ್ನಲಾಗುತ್ತದೆ.

ಜ್ವರ ಹಾಗೂ ಕೊರೊನಾ ವೈರಸ್ ಲಕ್ಷಣ ಹೇಗೆ ಭಿನ್ನವಾಗಿರುತ್ತದೆ ?

ಜ್ವರ ಬಂದಾಗ ಅಥವಾ ಕೊರೊನಾ ವೈರಸ್ ಬಂದಾಗ ಲಕ್ಷಣಗಳು ಒಂದೇ ರೀತಿ ಇರುತ್ತದೆ. ಆದ್ದರಿಂದ ರಕ್ತ ಪರೀಕ್ಷೆ ಮಾಡದೆ ಹೊರತು ಪತ್ತೆ ಹಚ್ಚಲು ಸಾಧ್ಯವಿಲ್ಲ. ಕೊರೊನಾ ವೈರಸ್ ಬಂದಾಗಲೂ ಶೀತ, ಜ್ವರ, ಕೆಮ್ಮು, ಸೀನು, ಉಸಿರಾಟದ ಲಕ್ಷಣಗಳು ಕಂಡು ಬರುವುದು.

ಕೊರೊನಾ ವೈರಸ್ ಸೋಂಕು ದೇಹದಲ್ಲಿ ಉಲ್ಬಣವಾಗಲು ತೆಗೆದುಕೊಳ್ಳುವ ಸಮಯ ?

ವೈದ್ಯಕೀಯ ತಜ್ಞರ ಪ್ರಕಾರ ಕೊರೊನಾ ವೈರಸ್ ದೇಹವನ್ನು ಸೇರಿದರೆ ಆ ರೋಗದ ಸಂಪೂರ್ಣ ಲಕ್ಷಣಗಳು ಗೋಚರಿಸಲು 14 ದಿನಗಳ ಸಮಯ ತೆಗೆದುಕೊಳ್ಳುತ್ತದೆ. ಆದ್ದರಿಂದಲೇ ಯಾರಿಗಾದರೂ ಕೊರೊನಾ ವೈರಸ್ ತಗುಲಿದೆ ಎಂದು ಸಂಶಯ ಬಂದರೆ 14 ದಿನಗಳ ಪ್ರತ್ಯೇಕವಾಗಿ ಇರಿಸಿ ಚಿಕಿತ್ಸೆ ನೀಡಿ, ಅವರ ದೇಹ ಸ್ಥಿತಿಯನ್ನು ಪರೀಕ್ಷಿಸಲಾಗುವುದು.

ಕೊರೊನಾ ವೈರಸ್‌ಗೆ ಯಾವ ಚಿಕಿತ್ಸೆ ಒಳ್ಳೆಯದು ?

ಇದುವರೆಗೆ ಈ ಭಯಾನಕ ವೈರಸ್ ತಡೆಗಟ್ಟಲು ಯಾವುದೇ ಔಷಧಿ ಕಂಡು ಹಿಡಿದಿಲ್ಲ. ಸದ್ಯಕ್ಕಿರುವ ಆಯ್ಕೆಯೆಂದರೆ ಈ ರೋಗ ಹರಡದಂತೆ ತಡೆಗಟ್ಟುವುದು. ಹಾಗಾಗಿ ಜನರಲ್ಲಿ ಜಾಗೃತಿ ಮೂಡಿಸಿ, ಇದನ್ನು ತಡೆಗಟ್ಟಬೇಕಾಗಿದೆ. ಥಾಯ್ಲೆಂಡ್‌ನಲ್ಲಿ ಕೊರೊನಾ ವೈರಸ್ ಸೋಂಕು ತಗುಲಿದ ವ್ಯಕ್ತಿಗೆ ಹೆಚ್‌ಐವಿ ಹಾಗೂ ಜ್ವರಕ್ಕೆ ನೀಡುವ ಔಷಧಿ ಮಿಶ್ರ ಮಾಡಿ ನೀಡಿದಾಗ 48 ಗಂಟೆಗಳಲ್ಲಿ ವ್ಯಕ್ತಿ ಗುಣಮುಖವಾಗಿರುವ ವರದಿಗಳು ಬಂದಿದ್ದೆವು. ಆದರೆ ಕೊರೊನಾ ವೈರಸ್‌ಗೆ ಚಿಕಿತ್ಸೆ ಏನು ಕೊಡಬೇಕೆಂದು ವಿಜ್ಞಾನಿಗಳು ಸಂಶೋಧನೆ ಮಾಡುತ್ತಿದ್ದಾರೆ.

ಜಗತ್ತಿನಾದ್ಯಾಂತ ಸೋಂಕಿತರ ಸಂಖ್ಯೆ ?

ಜಗತ್ತಿನಾದ್ಯಾಂತ 6,39,385ಕ್ಕೂ ಅಧಿಕ ಕೋವಿಡ್–19 ಪ್ರಕರಣಗಳು ದಾಖಲಾಗಿದೆ. ಸೋಂಕಿನಿಂದಾಗಿ ಸಾವಿಗೀಡಾದವರ ಸಂಖ್ಯೆ 42.344 ತುಲುಪಿದೆ ಎಂದು ವಿಶ್ವ ಆರೋಗ್ಯ ಸಂಸ್ಥೆ ತಿಳಿಸಿದೆ.

ಯುರೋಪ್‌ನಲ್ಲಿ ಅತಿ ಹೆಚ್ಚು ಪ್ರಕರಣಗಲು ದಾಖಲಾಗಿದೆ. 3,61,000 ಅಧಿಕ ಪ್ರಕರಣಗಳು ಯುರೋಪ್ ಭಾಗದಲ್ಲಿ ವರದಿಯಾಗಿದ್ದು, ಇಟಲಿ ಒಂದರಲ್ಲಿಯೇ 92,000ಕ್ಕೂ ಹೆಚ್ಚು ಪ್ರಕಣಗಳಲ್ಲಿ ಕೋವಿಡ್–19 ದೃಡಪಟ್ಟಿದೆ. ಸ್ಪೇನ್‌ನಲ್ಲಿ 72,000, ಜರ್ಮನಿಯಲ್ಲಿ 71,808ಕ್ಕೂ ಅಧಿಕ ಪ್ರಕರಣಗಳು ದಾಖಲಾಗಿದೆ. ಕೋವಿಡ್–19 ನಿಂದಾಗಿ ಸಾವಿಗೀಡಾದವರ ಸಂಖ್ಯೆಯಲ್ಲಿಯೂ ಜಗತ್ತಿನಲ್ಲಿಯೇ ಅತಿ ಹೆಚ್ಚು ಇಟಲಿ ಮತ್ತು ಸ್ಪೇನ್‌ನಲ್ಲಿ ವರದಿಯಾಗಿದೆ. ಇಟಲಿಯಲ್ಲಿ 10,023 ಹಾಗೂ ಸ್ಪೇನ್‌ನಲ್ಲಿ 5,690 ಜನರು ಮೃತಪಟ್ಟಿದ್ದಾರೆ.

ಜಗತ್ತಿನಲ್ಲಿ ಅತಿ ಹೆಚ್ಚು ಸೋಂಕಿಗೆ ಒಳಗಾಗಿರುವ ಎರಡನೇ ಪ್ರಾಂತ್ಯ ಅಮೇರಿಕ ಅಲ್ಲಿ 1.77.286ಕ್ಕೂ ಅಧಿಕ ಪ್ರಕರಣಗಳಲ್ಲಿ ಕೋವಿಡ್–19 ಧೃಡಪಟ್ಟಿದೆ.

ಭಾರತದಲ್ಲಿ ಸೋಂಕಿತರ ಸಂಖ್ಯೆ ?

ಭಾರತ ದೇಶದಲ್ಲಿ ಕೊರೋನಾ ವೈರಸ್ ಸೋಂಕಿತರ ಸಂಖ್ಯೆ 2303ಕ್ಕೂ ಅಧಿಕ ಪ್ರಕಣಗಳು ದಾಖಲಾಗಿದೆ. ಸೋಂಕಿನಿಂದಾಗಿ ಸಾವಿಗೀಡದವರ ಸಂಖ್ಯೆ 72 ತಲುಪಿದೆ. ಅದರಲ್ಲಿ 192 ಜನರು ಗುಣಮುಖರಾಗಿದ್ದಾರೆ.

ಕರ್ನಾಟಕದಲ್ಲಿ ಸೋಂಕಿತರ ಸಂಖ್ಯೆ ?

ಕರ್ನಾಟಕ ರಾಜ್ಯದಲ್ಲಿ ಕೊರೋನಾ ವೈರಸ್ ಸೋಂಕಿತರ ಸಂಖ್ಯೆ 128ಕ್ಕೂ ಅಧಿಕ ಪ್ರಕಣಗಳು ದಾಖಲಾಗಿದೆ. ಸೋಂಕಿನಿಂದಾಗಿ ಸಾವಿಗೀಡದವರ ಸಂಖ್ಯೆ 3 ತಲುಪಿದೆ. ಅದರಲ್ಲಿ 11 ಜನರು ಗುಣಮುಖರಾಗಿದ್ದಾರೆ.

ವ್ಯವಸ್ಥಾಪನಾ ಕೌಶಲ್ಯಗಳು – Managerial Skills

– ಸಂಗ್ರಹ ಲೇಖನ

ದಕ್ಷ ಆಡಳಿತ :

ಭಾರತದಲ್ಲಿ ಆಡಳಿತ ಪದ್ಧತಿ ಬಹುಮುಖ್ಯ ವ್ಯವಸ್ಥಾ ಪದ್ಧತಿಯಾಗಿದೆ. ಪ್ರಜಾ ಪ್ರಭುತ್ವದಲ್ಲಿ ಜನರ ಆಪೇಕ್ಷೆ ಮತ್ತು ಬೇಡಿಕೆಯ ದನಿ ಕಾನೂನಿನ ರೂಪದಲ್ಲಿ ಜಾರಿಗೆ ಬರಬೇಕಾಗುತ್ತದೆ. ಇಂದು ನಮ್ಮ ದೇಶದಲ್ಲಿ ಬೆಳೆಯುತ್ತಿರುವ ಜನಸಂಖ್ಯೆ ಮತ್ತು ವಿದ್ಯಾಭ್ಯಾಸದ ಪರಿಣಾಮದಿಂದ ಬೇಡಿಕೆಗಳು ಹೆಚ್ಚಾಗುತ್ತಾ ಬರುತ್ತಿದೆ. ಅಂತೆಯೇ ನಮ್ಮ ಆಡಳಿತದಲ್ಲಿ ದಕ್ಷತೆ, ನಿಷ್ಠೆ, ವಿಶ್ವಾಹತೆ ಮತ್ತು ವಿಳಂಬ ಈ ಬಗ್ಗೆ ದೂರುಗಳೂ ಕೇಳಿಬರುತ್ತಿರುವುದು ಸಹಜವಾಗಿದೆ, ಇದಕ್ಕೆ ತಕ್ಕಂತೆ ಗುಣಾತ್ಮಕ ಸುಧಾರಣೆ ಅಗತ್ಯವಾಗಿದೆ. ಇದು ಕೇವಲ ನಿಯಂತ್ರಣ ಮತ್ತು ಮಾಮೂಲು ವ್ಯವಸ್ಥೆ ಆಗಲಾರದು. ಆಡಳಿತದ ಚುಕ್ಕಾಣಿ ಹಿಡಿದಿರುವ ಪ್ರತಿಯೊಬ್ಬ ಆಡಳಿತಗಾರರು ಈ ಕೆಳಗಿನ ಅಂಶಗಳ ಬಗ್ಗೆ ಗಮನ ಹರಿಸಿ ಉದ್ದಾತವಾದ, ನಿಷ್ಪಕ್ಷಪಾತವಾದ ಮತ್ತು ಗುಣಾತ್ಮಕವಾದ ಸುಧಾರಣೆಯೆಡೆಗೆ ಸಾಗಬೇಕಾಗಿದೆ.

1. ಸಾರ್ವಜನಿಕ ಸೇವಕ ಸಮಾಜದ ಉನ್ನತಿಗಾಗಿ ರಚಿಸಲ್ಪಟ್ಟ ಕಾಯಿದೆ, ಕಾನೂನುಗಳನ್ನು ವ್ಯವಸ್ಥಿತವಾಗಿ ಪಾಲಿಸುವುದು, ಜನತೆಯ ಸೇವೆ ಮಾಡುವುದು.
2. **ಕ್ರಿಯಾಶೀಲ ಮನಸ್ಥರಾಗುವುದು :** ಸಕಾಲಿಕ ಮತ್ತು ದಕ್ಷತೆಯಿಂದ ಕಾರ್ಯನಿರ್ವಹಿಸುವುದು ಇದಕ್ಕೆ ವಿಚಾರ ವಿನಿಮಯ ಯೋಜನೆಗಳು, ಮಾಹಿತಿ ಸಂಗ್ರಹಿಸುವುದು ಸಮ್ಮೇಳನಗಳಲ್ಲಿ ಭಾಗವಹಿಸುವುದು ಚರ್ಚಿಸುವುದು.
3. **ರಚನಾತ್ಮಕವಾಗಿರುವುದು :** ತೀರ್ಮಾನಿಸುವ, ಹೇಳುವ ಮಾಡುವ, ಮುಖ್ಯವಾಗಿ ಟೀಕೆ ಮಾಡುವ ಪ್ರತಿ ವಿಷಯದಲ್ಲೂ ರಚನಾತ್ಮಕವಾಗಿರುಬೇಕು. ತೀರ್ಮಾನಿಸಿದ ವಿಷಯವನ್ನು ಕಾರ್ಯರೂಪಗೊಳಿಸುವುದು.
4. **ವಿವರ ಸಂಗ್ರಹಿಸುವುದು ಮತ್ತು ಪ್ರಾವೀಣ್ಯತೆ ಹೊಂದುವುದು :** ಮೇಲ್ವಿಚಾರಕರು ಹೆಚ್ಚಿನ ಕರ್ತವ್ಯ ನಿರತ ಸಂದರ್ಭಗಳಲ್ಲಿ ಹಿಂದೆ ಸಂಗ್ರಹಿಸಿದ ಮತ್ತು ಪ್ರಾವಿಣ್ಯತೆ ಪಡೆದ ವಿವರಗಳನ್ನು ಕೈಬಿಡದಿರುವುದು.
5. **ಸಾರ್ವಜನಿಕ ಹಣಕಾಸಿನ ಬಗ್ಗೆ ಎಚ್ಚರ ಮತ್ತು ಲೆಕ್ಕ ನಿರ್ವಹಣೆ :** ತಮ್ಮ ಬಳಿ ಇರುವ ಖರ್ಚು ಮಾಡುವ ಸಾರ್ವಜನಿಕ ಹಣಕಾಸಿನ ಬಗ್ಗೆ ತೀವ್ರ ಎಚ್ಚರ ಅಗತ್ಯ ಮತ್ತು ಖರ್ಚಾದ ಹಣವನ್ನು ದಾಖಲೆಗಳ ಸಹಿತ ಪರಿಶೀಲಿಸುವ ಹಾಗೂ ಅರ್ಥ ಮಾಡುವಂತಿರಬೇಕು.
6. **ಸಾರ್ವಜನಿಕ ಅಸ್ತಿಯ ಉಪಯೋಗ ಮತ್ತು ರಕ್ಷಣೆ :** ನಿಮ್ಮ ಸ್ವಂತ ಆಸ್ತಿಯ ಬಗ್ಗೆ ನೀವು ತೋರುವ ಎಚ್ಚರ ಮತ್ತು ಆಸ್ಥೆಯನ್ನೇ ಸರ್ಕಾರದ ಆಸ್ತಿಯನ್ನು ಬಳಸುವಲ್ಲಿ ಸಹ ತೋರಿಸಬೇಕು.
7. **ನಿಯಮಗಳನ್ನು ಅನುಸರಿಸುವುದು :** ನಿಯಮಗಳು ಎಲ್ಲರ ಹಿತಾಸಕ್ತಿಗಾಗಿ ಖಚಿತ ಉದ್ದೇಶದೊಂದಿಗೆ ರಚಿಸಲ್ಪಟ್ಟಿರುತ್ತದೆ. ಅವುಗಳನ್ನು ಕಡ್ಡಾಯವಾಗಿ ಪಾಲಿಸಬೇಕು.
8. **ಅಧಿಕೃತ ವರದಿಗಳು ವಿಚಾರ ವಿನಿಮಯ ಮತ್ತು ಸ್ವಂತ ಭೇಟಿಯ ಮಹತ್ವ :** ಅಧಿಕೃತ ಮಾತುಕತೆ ಮತ್ತು ಸ್ವತಃ ಭೇಟಿ ಮತ್ತು ಚರ್ಚೆಯಿಂದ ನಿಜಾಂಶಗಳನ್ನು ಖಾತರಿ ಮಾಡಕೊಳ್ಳಬಹುದು.
9. ಕ್ರಮಬದ್ಧ ಮತ್ತು ತೀವ್ರ ತನಿಖೆ – ನಿಮ್ಮ ಮತ್ತು ಅಧೀನ ಕಛೇರಿಗಳ ಕ್ರಮಬದ್ಧ ತನಿಖೆ ಮುಖ್ಯವಾದ ಕೆಲಸ, ಇದರ ಜೊತೆಗೆ ಮಾರ್ಗದರ್ಶನ ಅತಿ ಮುಖ್ಯ.
10. ಯಾವುದೇ ಆದೇಶದ ಅಥವಾ ಕ್ರಮದ ಅನುಸರಣೆ ಅತಿ ಮುಖ್ಯ – ನೀವು ನೀಡಿದ ಆದೇಶ, ಕ್ರಮದ ಬಗ್ಗೆ ಅದರ ಫಲಿತಾಂಶದ ಬಗ್ಗೆ ತರ್ಕಬದ್ಧ ಅನುಸರಣೆ ಅಗತ್ಯ.
11. **ಕೆಲಸದ ಬಗ್ಗೆ ಆಸಕ್ತಿ :** ಯಾಂತ್ರಿಕವಾದ, ಅನಗತ್ಯವಾದ ಅತಿಮುಖ್ಯವಾದ, ಆಸಕ್ತಿ ಇಲ್ಲದ ಕೆಲಸವೆಂದು ಉದಾಸೀನ ಮಾಡಬಾರದು.
12. **ತುರ್ತು ನಿರ್ಧಾರ ಪ್ರಾಮುಖ್ಯತೆ:** ಯಾವುದೇ ವಿಷಯದ ಬಗ್ಗೆ ಅನಿರ್ದಿಷ್ಟ ಸಮಯ ಸೂಕ್ತವಲ್ಲ. ವಿಚಾರ ಕುರಿತು ಕೂಡಲೇ ತುರ್ತು ನಿರ್ಧಾರ ಕೈಗೊಳ್ಳಬೇಕು, ವಿಳಂಬವಾದಷ್ಟೂ ಅನುಮಾನ ಮತ್ತು ಅತೃಪ್ತಿಗೆ ಕಾರಣವಾಗುತ್ತದೆ.
13. **ಎಲ್ಲರಿಗೂ ತಾಳ್ಮೆಯಿಂದ ಕಿವಿಗೊಡಬೇಕು :** ಎರಡೂ ಕಡೆಯ ವಾದವನ್ನು ತಾಳ್ಮೆಯಿಂದ ಆಲಿಸಿ ನಂತರ ಪರಿಶೀಲಿಸಿ ನಿರ್ಣಯ ಕೈಗೊಳ್ಳಬೇಕು.
14. **ನೀವು ಮತ್ತು ನಿಮ್ಮ ಸಹೋದ್ಯೋಗಿ :** ನಿಮ್ಮ ಅಥವಾ ಸಿಬ್ಬಂದಿಯಲ್ಲಿನ ವಿವಿಧ ಕಾರ್ಯಶೀಲತೆಯನ್ನು ಗಮನಿಸಿ ಸರಿಯಾದ ನಿರ್ಧಾರದ ಮೂಲಕ ಕೆಲಸಕ್ಕೆ ತಕ್ಕ ವ್ಯಾಪ್ತಿಯನ್ನು ಆಯ್ಕೆಮಾಡಿ. ಅನಗತ್ಯವಾದ ಮಧ್ಯಪ್ರವೇಶ ಮಾಡದೇ ಅವರವರ ಕೆಲಸ ಮಡಲು ಪೂರ್ಣಗೊಳಿಸಲು ಅನುವು ಮಾಡಿಕೊಡಿ.
15. **ಅಧೀನ ಸಿಬ್ಬಂದಿಯ ಆತ್ಮಗೌರವ ಮತ್ತು ಆತ್ಮವಿಶ್ವಾಸನ್ನು ಕಾಪಾಡಿ :** ನಿಮ್ಮ ಅಧೀನ ನೌಕರರೂ ಸಹ ಮಾನವರು, ಅವರೂ ನೀವು ಬಯಸುವಂತೇ ಸೌಜನ್ಯ ಗೌರವ ಮತ್ತು ನ್ಯಾಯವನ್ನು ಪಡೆಯುವ ಹಕ್ಕನ್ನು ಹೊಂದಿರುತ್ತಾರೆ.

ನಿಮಗೆ ಅಗತ್ಯವಿರುವಂತೆಯೇ ಅವರ ಅಂತಸ್ತು. ಅಧಿಕಾರ ಮತ್ತು ಆತ್ಮ ವಿಶ್ವಾಸವನ್ನು ಸಂರಕ್ಷಿಸಿ.

16. ಉಚಿತವಾಗಿ ಮತ್ತು ತೆರದ ಮನಸ್ಸಿನಿಂದ ಪ್ರಶಂಶಿಸಿ, ಆದರೆ ರಹಸ್ಯವಾಗಿ ಮತ್ತು ಮಿತವಾಗಿ ಬುದ್ಧಿ ಹೇಳಿ – ಅಧೀನ ಸಿಬ್ಬಂದಿ ಮತ್ತು ಸಹೋದ್ಯೋಗಿಗಳನ್ನು ಅಧೀನ ನೌಕರರ ಸಮ್ಮುಖದಲ್ಲಿ ನಿಂದಿಸಬೇಡಿ, ಟೀಕೆಗಳನ್ನು ಮೊದಲ ಬಾರಿಗೆ ಖಾಸಗಿಯಾಗಿ ಅವರಿಗೆ ತಲುಪಿಸಿ.

17. ರಹಸ್ಯ ವರದಿಗಳ ವಿಚಾರದಲ್ಲಿ ನ್ಯಾಯ, ಜವಾಬ್ದಾರಿ ಮತ್ತು ವಾಸ್ತವಾಂಶಗಳ ಬಗ್ಗೆ ಪ್ರಜ್ಞೆ ಹೊಂದಿರುವುದು – ನಿಮ್ಮ ಸಹೋದ್ಯೋಗಿಗಳ ಬಗ್ಗೆ ದೋಷ ಕಂಡುಬಂದಾಗ ನೇರವಾಗಿ ಅವರಿಗೆ ಮನವರಿಕೆ ಮಾಡಿಕೊಡಿ, ಸುಧಾರಣೆ ತರಲು ಪ್ರಯತ್ನಿಸಿ.

18. **ನಿಮ್ಮ ಸಹೋದ್ಯೋಗಿಯನ್ನು ಬಿಟ್ಟು ಕೊಡಬೇಡಿ :** ನಿಮ್ಮ ಅಧೀನ ನೌಕರ–ರಿಗೆ ಸಲ್ಲಬೇಕಾದ ಪ್ರಶಂಸೆಗಳು ಬಂದರೆ ಅವರನ್ನು ಪ್ರಶಂಶಿಸಿ, ತೆಗಳಿಗೆ ಬಂದಾಗ ಅವರನ್ನೇ ಜವಾಬ್ದಾರರನ್ನಾಗಿ ಮಾಡದೇ ನೀವು ಜವಾಬ್ದಾರಿ ತೆಗೆದುಕೊಳ್ಳಿ.

19. **ನೀವು ಇನ್ನೊಬ್ಬರ ಸ್ಥಾನದಲ್ಲಿ ಇರುವರೆಂದು ಭಾವಿಸಿ :** ವಿಶಾಲ ಅರ್ಥದಲ್ಲಿ ಸಹಾನುಭೂತಿಯ ಗುಣವನ್ನು ಬೆಳಿಸಿಕೊಳ್ಳಿ.

20. **ನೀವು ಕೆಲಸ ಮಾಡಿ ನಿಮ್ಮ ಅಧೀನ ನೌಕರರು ಅವರ ಕೆಲಸ ಮಡಲು ಬಿಡಿ :** ನಿಮ್ಮ ಅಧೀನ ನೌಕರನ ಶಕ್ತಿ ಸಾಮರ್ಥ್ಯಗಳು ವೃದ್ಧಿಸುವಂತೆ ಸೂಕ್ತ ತರಬೇತಿ ನೀಡಿ.

21. **ನೀವು ಜನತೆಯ ಸೇವಕರು :** ಪ್ರಜಾಸತ್ತಾತ್ಮಕ ವ್ಯವಸ್ಥೆಯಲ್ಲಿ ಇದೊಂದು ಶಾಶ್ವತ ಸತ್ಯ ಇದನ್ನು ಮರೆಯದಿರಿ.

22. **ಕಾರ್ಯ ಮತ್ತು ಆದೇಶಗಳು :** ಕಾರ್ಯ ಮತ್ತು ಆದೇಶಗಳು ಜನತೆಯ ಮೇಲೆ ಯಾವ ಪರಿಣಾಮ ಬೀರುತ್ತದೆ ಎಂಬುದನ್ನು ಸದಾ ಅವಲೋಕಿಸಬೇಕು.

23. **ಆಡಳಿತವು ಮಾನವನ ಒಳತಿಗೆ ಸಂಬಂಧಿಸಿದೆ ಎಂಬುದನ್ನು ಎಂದಿಗೂ ಮರೆಯಬೇಡಿ :** ನಿಮ್ಮ ಕೆಲಸಗಳಿಗೆ ಕಾಗದ ಪತ್ರಗಳನ್ನು ಓಡಾಡಿಸುವುದು ಮತ್ತು ನಿಗದಿಗೊಳಿಸುವುದೇ ಅಗಿರದೆ ಅದು ಮಾನವನ ಅಗತ್ಯಗಳು ಮತ್ತು ಅವಶ್ಯಕತೆಗಳನ್ನು ಪೂರೈಸುವವು ಎಂಬುದನ್ನು ಮರೆಯಬೇಡಿ.

24. **ಜನತೆಗೆ ಪ್ರಶಂಸೆಗೆ ಪಾತ್ರವಾಗಿ ಆದರೆ ಅಗ್ಗದ ಜನಪ್ರಿಯತೆ ಬೇಡ :** ಕರ್ತವ್ಯವನ್ನು ನಿಸ್ಪಕ್ಷಪಾತದಿಂದ ನಿರ್ವಹಿಸಿ. ಅಗ್ಗದ ಜನಪ್ರಿಯತೆಗೆ ಮನಕೊಡಬೇಡಿ.

25. **ಜನಪ್ರಿಯತೆಗಿಂತ ಮೊದಲು ನ್ಯಾಯ ಮತ್ತು ಕರ್ತವ್ಯಕ್ಕೆ ಆದ್ಯತೆ ನೀಡುವುದು :** ಕರ್ತವ್ಯ ನ್ಯಾಯಪಾಲನೆ ಮತ್ತು ಇನ್ನಿತರ ಖಚಿತವಾದ ಸಂದರ್ಭದಲ್ಲಿ ಜನಪ್ರಿಯತೆ ಮತ್ತು ಪ್ರಶಂಸೆಯನ್ನು ಕಳೆದುಕೊಳ್ಳಲು ಹೆದರದೆ ಕರ್ತವ್ಯವನ್ನು ನಿರ್ವಹಿಸಿ, ಅಳುಕದೆ ನ್ಯಾಯಯುತವಾದ ಆದೇಶಗಳನ್ನು ಜಾರಿಗೊಳಿಸಿ.

26. ಪ್ರತಿ ಸಲ 'ಇಲ್ಲಾ' ಎನ್ನುವುದಕ್ಕೆ ವಿವರಣೆ ಕೊಡಿ: ನಿಮಗೆ 'ಹೌದು' ಅಥವಾ 'ಇಲ್ಲಾ' ಎನ್ನಬಹುದಾ ಸಂದರ್ಭದಲ್ಲಿ ಹೆಚ್ಚು? ನೀವು ಇಲ್ಲ ಆ ಎಂದು ತಿಳಿದಾಗ ಏಕೆ ? ಎಂಬ ಬಗ್ಗೆ ವಿವರ ಕೊಡಿ.

27. ನ್ಯಾಯ ಮತ್ತು ನಿಷ್ಠೆಯ ಜನತೆಯ ಎದುರು ಪ್ರದರ್ಶಿಸ್ಪಟ್ಟು ಸಾಬೀತು ಆಗಬೇಕಾಗಿರುತ್ತದೆ. ನೀವು ನ್ಯಾಯಬದ್ಧರಾಗಿ ಕಾರ್ಯನಿರ್ವಹಿಸುತ್ತಿದ್ದರೆ ಸಾಲದು. ಇದು ಸಂಬಂಧಪಟ್ಟ ಎಲ್ಲರಿಗೂ ಜನ ಸಾಮಾನ್ಯರಿಗೂ ಸ್ಪಷ್ಟವಾಗಬೇಕು.

28. ಜನತೆಯೊಂದಿಗೆ ಸ್ಪಂದನೆ ಸಾರ್ವಜನಿಕ ಸೇವಕನಾಗಿರಬೇಕು. ಎಲ್ಲಾ ವರ್ಗ, ಎಲ್ಲಾ ಗುಂಪಿನ ಜನರೊಂದಿಗೆ ಉದಾರವಾಗಿ, ಸುಲಭವಾಗಿ ಸ್ಪಂದಿಸಿ ಸಮಸ್ಯೆಗಳು ಬಂದಾಗ ನಿವಾರಣೆಗಾಗಿ ಪ್ರಾಮಾಣಿಕ ಪ್ರಯತ್ನಮಾಡಿ.

29. **ಅಧಿಕೃತ ವರದಿಗಳಿಗೆ ಸಾರ್ವಜನಿಕ ಅಭಿಪ್ರಾಯ ಬಹಳ ಮುಖ್ಯ :** ಈ ಬಗ್ಗೆ ಹೆಚ್ಚಿನ ಆದ್ಯತೆ ಕೊಡಿ, ಜನತೆಯ ಭಾವನೆಗಳು ಅತಿ ಮುಖ್ಯ ಎಂಬುದನ್ನು ಮರೆಯಬೇಡಿ.

30. ನಿಸ್ವಾರ್ಥ ಮತ್ತು ಸ್ವಾರ್ಥಪರ ಸಲಹೆಗಳ ವ್ಯತ್ಯಾಸ ಅರಿಯಿತು. ಸಲಹೆಗಿಂತ ನಿಜಾಂಶ ಬಹಳ ಮುಖ್ಯ ನಿರ್ಧಾಕ್ಕೆ ಮುನ್ನಯ ನಿಜಾಂಶಗಳ ತುಲನೆ ಮಾಡಿ.

31. ಸ್ಥಳೀಯವಾಗಿ ಸರ್ಕಾರಿ ಸೂಚನೆಗಳನ್ನು ಸರಿಯಾಗಿ ಜಾರಿಗೊಳಿಸಿ, ವೈಯಕ್ತಿಕ ಅಭಿಪ್ರಾಯಗಳು ಏನೇ ಇದ್ದರೂ ಸರ್ಕಾರದ ಆದೇಶಗಳು ಅಧಿಕೃತವಾಗಿ ತಲುಪಿದಾಗ ವಿಧೇಯತೆಯಿಂದ ಜಾರಿಗೊಳಿಸಿ.

32. ಸ್ಥಳೀಯ ವಿಷಯಗಳ ಬಗ್ಗೆ ಸೂಚನೆಗಳನ್ನು ಸರಿಯಾಗಿ, ಸ್ಥಳೀಯ ಮುಖಂಡರಿಗೆ ಸ್ಥಳೀಯ ಜನತೆಯ ಪರಿಸ್ಥಿತಿ ಮತ್ತು ಸಮಸ್ಯೆಗಳ ಬಗ್ಗೆ ಹೆಚ್ಚು ತಿಳಿದಿರುವುದರಿಂದ ಅವರ ಸಲಹೆಗಳನ್ನು ಸಕಾಲಿಕವಾಗಿ ಪಡೆಯುವುದು ಉತ್ತಮ.

33. ಎಲ್ಲರ ಸಲಹೆ ಮತ್ತು ಸಹಕಾರ ಪಡೆಯಿರಿ, ಆದರೆ ನಿಮ್ಮದೇ ನಿರ್ಧಾರಕ್ಕೆ ಬನ್ನಿ, ಲಭ್ಯವಾಗುವ ಎಲ್ಲ ಮೂಲಗಳಿಂದ ಸಲಹೆ ಮತ್ತು ಸಹಕಾರ ಪಡೆಯಿರಿ. ಸೂಕ್ತ ಮತ್ತು ಕೆಟ್ಟ ಸಲಹೆಗಳನ್ನು ವರ್ಗೀಕರಿಸಿ ನಿಮ್ಮದೇ ಆದ ಸ್ವಂತ ನಿರ್ಧಾರಕ್ಕೆ ಬನ್ನಿ.

34. **ನಿಮ್ಮ ವೃತ್ತಿಗೆ ನಿಮ್ಮ ಆರೋಗ್ಯ ಅತ್ಯಗತ್ಯ:** ಆಡಳಿತದಲ್ಲಿ ದೈಹಿಕ ಮತ್ತು ಮಾನಸಿಕ ದುರ್ಬಲರಿಗೆ ಸ್ಥಾನವಿಲ್ಲ. ಒಳ್ಳೆಯ ಆರೋಗ್ಯವನ್ನು ಹೊಂದಿ.

27ನೇ ಪುಟಕ್ಕೆ.....

ಮಹಿಳಾ ಸಬಲೀಕರಣ : ವಿಶೇಷ ಲೇಖನ

ಮಹಿಳೆಗೆ ಕರುಣೆ ಅಥವಾ ದಯೇ ಬೇಕಿಲ್ಲ. ಅವಳು ಸಶಕ್ತಳು. ಸಮಾನ ಅವಕಾಶಗಳನ್ನು ಕಲ್ಪಿಸುವ ಉದಾರ ಮನೋಭಾವ ಅಗತ್ಯ.

– ಶ್ರೀಮತಿ ಸರಸ್ವತಿ ಎನ್. ರವಿ, ನಿರ್ದೇಶಕರು, ಕ.ರಾ.ಸೌ.ಸಂ.ಸ.ನಿ, ಬೆಂಗಳೂರು.

ಅಂತರರಾಷ್ಟ್ರೀಯ ಮಹಿಳಾ ದಿನವೆಂಬುದು ಪ್ರಪಂಚದಾದ್ಯಂತ ಮಹಿಳೆಯರು ತಮ್ಮ ಸಾಮಾಜಿಕ, ಆರ್ಥಿಕ, ಸಾಂಸ್ಕೃತಿಕ ಮತ್ತು ರಾಜಕೀಯ ಸಾಧನೆಗಳನ್ನು ಸಂಭ್ರಮಿಸುವ ದಿನ. ಅಂತರರಾಷ್ಟ್ರೀಯ ಮಹಿಳಾ ದಿನಾಚರಣೆ ಮೊದಲಿಗೆ ಜಾರಿಗೆ ಬಂದಿದ್ದು 1911ರಲ್ಲಿ ಆ ವರ್ಷ ಮಹಿಳೆಯರಿಗೆ ಮತಚಲಾವಣೆ ಮತ್ತು ಸಾರ್ವಜನಿಕ ಕಛೇರಿಗಳನ್ನು ನಡೆಸುವ ಹಕ್ಕಿಗಾಗಿ ಒತ್ತಾಯಿಸಲಾಯಿತು. ಮಾರ್ಚ 8 ರಿಂದ ವಿಶ್ವ ಮಹಿಳಾ ದಿನವನ್ನು ಆಚರಿಸುವ ಸಂಪ್ರದಾಯ ಪ್ರಾರಂಭವಾದದ್ದು 1917 ರಿಂದ ವಿಶ್ವಸಂಸ್ಥೆ ಪ್ರತಿ ವರ್ಷವು ಅಂತರರಾಷ್ಟ್ರೀಯ ಮಹಿಳಾ ದಿನಾಚರಣೆ ಅಂಗವಾಗಿ ಧ್ಯೇಯ ವಾಕ್ಯವೊಂದನ್ನು (Theme) ಗುರುತಿಸುತ್ತದೆ. ಈ ವರ್ಷದ ಧ್ಯೇಯವಾಕ್ಯ“ Each for Equal” ಅಂದರೆ “ಸಮಾನತೆಗಾಗಿ ಪ್ರತಿಯೊಬ್ಬರು” ಸಮಾನ ಪ್ರಪಂಚ ಸಬಲ ಪ್ರಪಂಚ. ಸಮಾನತೆ ಎಂಬುದು ಕೇವಲ ಮಹಿಳೆ ಅಥವಾ ಪುರುಷರಿಗೆ ಸಂಬಂಧಿಸಿದ್ದಲ್ಲ. ಅದು ಸಮುದಾಯಗಳ ಅಭಿವೃದ್ಧಿಯ ಮಾನದಂಡ. ಲಿಂಗ ಸಮಾನತೆ ಸಮುದಾಯಗಳ ಆರ್ಥಿಕ ಹಾಗೂ ಸಾಮಾಜಿಕ ಬೆಳವಣಿಗೆಗೆ ಅತ್ಯಗತ್ಯ. ಲಿಂಗ ತಾರತಮ್ಯವಿಲ್ಲದ ದೇಶ ಆರೋಗ್ಯ ಹಾಗೂ ಸಂಪದ್ಭರಿತವಾಗಿರುತ್ತದೆ. ನಾವು ಪ್ರತಿಯೊಬ್ಬರೂ ವೈಯಕ್ತಿಕವಾಗಿ ಹಾಗೂ ಸಾಮೂಹಿಕವಾಗಿ ಪ್ರಯತ್ನಿಸಿದಲ್ಲಿ ಪ್ರಪಂಚದಲ್ಲಿ ಸಮಾನತೆಯನ್ನು ತರಲು ಸಾಧ್ಯವಿದೆ ಎಂಬುದು ವಿಶ್ವ ಸಂಸ್ಥೆಯ ಈ ಸಲದ ಅಂತರರಾಷ್ಟ್ರೀಯ ಮಹಿಳಾ ದಿನಾಚರಣೆಯ ಧ್ಯೇಯವಾಕ್ಯದ ಸಾರಾಂಶ.

ಭಾರತಕ್ಕೆ ಮಹಿಳಾ ಸಮಾನತೆ ಎಂಬುದು ಹೊಸ ಕಲ್ಪನೆಯೆನಲ್ಲ. ಅರ್ಧ ನಾರೀಶ್ವರ ಎಂಬ ಅದ್ಭುತಕಲ್ಪನೆ ಹುಟ್ಟಿದ್ದು ಭಾರತದಲ್ಲಿ. ಪ್ರಕೃತಿ ಹಾಗೂ ಪುರುಷ ಬೇರೆ ಬೇರೆ ಅಲ್ಲ. ಸೃಷ್ಟಿಯಲ್ಲಿ ಇವರಿಬ್ಬರಿಗೂ ಸಮ ಪಾಲು ಎಂಬುದೇ ಅರ್ಧ ನಾರೀಶ್ವರದ ಪರಿಕಲ್ಪನೆ. ಪಶ್ಚಿಮ ರಾಷ್ಟ್ರಗಳ ಸಂಸ್ಕೃತಿಯಲ್ಲೆಲ್ಲೂ ಹೆಣ್ಣಿಗೆನೀಡದ ದೈವಿಕ ಪಟ್ಟವನ್ನು ಕೊಟ್ಟದ್ದು ಭಾರತೀಯ ಸಂಸ್ಕೃತಿ. ವೇದಗಳ ರಚನೆಯಲ್ಲಿ ಆ ಕಾಲದ ಪ್ರಬಲ ಮಹಿಳೆಯರ ಪ್ರಮುಖ ಪಾಲು ಇರುವುದನ್ನು ನಾವು ನೀವೆಲ್ಲ ಬಲ್ಲೆವು. ನಮ್ಮ ಗಾಯತ್ರಿ ಮಂತ್ರಕೂಡ ವೇದಗಳ ತಾಯಿ ಎಂದು ಕರೆಯಲ್ಪಡುವ ಗಾಯತ್ರಿದೇವಿಯ ಕುರಿತಾಗಿದೆ. ವೇದಕಾಲದಲ್ಲಿ ನಾರಿಗೆ ಪುರುಷರಿಗೆ ಸಮಾನವಾದ ಹಕ್ಕುಗಳಿದ್ದವು, ಶಿಕ್ಷಣ ಹಾಗೂ ಆರ್ಥಿಕ

ವಿಚಾರಗಳಲ್ಲಿ ಸಮಾನತೆಗಳಿದ್ದವು.

ಆದರೆ ಒಂದು ಹಂತದಲ್ಲಿ ಭಾರತೀಯ ಸಂಸ್ಕೃತಿಯ ಉದಾತ್ತ ತತ್ವಗಳ ಅಪಹಾಸ್ಯವೆಂಬಂತೆ ನಮ್ಮಲ್ಲಿ ಸತಿ ಪದ್ಧತಿ, ವರದಕ್ಷಿಣೆ ಮುಂತಾದ ಪಿಡುಗುಗಳು ಹುಟ್ಟಿಕೊಂಡವು. ಹೆಣ್ಣಿಗೆ ಶಿಕ್ಷಣ, ಸಮಾನ ಅವಕಾಶಗಳು ಇಲ್ಲವಾದವು. ಈಚೆಗೆ ಹೆಚ್ಚಾಗಿ ವರದಿಯಾಗುತ್ತಿರುವಂತಹ ಅತ್ಯಾಚಾರದಂತಹ ಘೋರ ಅಪರಾಧಗಳಿಗೆ ಕೂಡ ಭಾರತೀಯರು ಸಾಕ್ಷಿಯಾದರು. ಸಮಾಜದಲ್ಲಿ ಹೆಣ್ಣಿನ ಸ್ಥಾನ ಕುಸಿದಂತೆ ಹೆಣ್ಣು ಮಗು ಹುಟ್ಟುವುದೇ ಅಪರಾಧ ಎಂಬಂತಾಯಿತು. ಸ್ತ್ರೀ ಭ್ರೂಣ ಹತ್ಯೆ ಪ್ರಾರಂಭವಾಯಿತು, ಆದರೆ ಇದು ಭಾರತೀಯ ಸಂಸ್ಕೃತಿಯ ದೋಷವಲ್ಲ. ನಮ್ಮ ಸಂಸ್ಕೃತಿಯ ತತ್ವಗಳು ಪಾಲನೆಯಾಗಿದ್ದರೆ ಈ ಸ್ಥಿತಿ ಬರುತ್ತಿರಲಿಲ್ಲ.

ಹಾಗೆಯೇ ಸಮಾನತೆ ಎಂಬ ಪದವನ್ನ ತಪ್ಪಾಗಿ ಅರ್ಥ ಮಾಡಿಕೊಂಡವರೂ ನಮ್ಮಲ್ಲಿ ಸಿಗುತ್ತಾರೆ. ಹೆಚ್ಚಿದ ವಿವಾಹ ವಿಚ್ಛೇದನಗಳು, ಮುರಿದು ಬಿದ್ದ ಸಂಸಾರಗಳು ಇದಕ್ಕೆ ಉದಾಹರಣೆ. ಸಮಾನತೆ ಎಂದರೆ“ ಯಾರು ಮೇಲು? ಒಂದು ಕೈ ನೋಡಿಯೇ ಬಿಡೋಣ” ಎಂಬ ಪೈಪೋಟಿ ಅಲ್ಲ. ಒಬ್ಬರು ವರ್ತಿಸಿದಂತೆಯೇ ಇನ್ನೊಬ್ಬರೂ ವರ್ತಿಸುವುದೂ ಅಲ್ಲ. ಇಬ್ಬರೂ ಪರಸ್ಪರ ಅರಿತುಕೊಂಡು, ಒಬ್ಬರನ್ನೊಬ್ಬರು ತಿದ್ದಿಕೊಂಡು, ಒಬ್ಬರ ಕೊರತೆಯನ್ನು ಇನ್ನೊಬ್ಬರು ನೀಗಿಸುವುದು ಸಮಾನತೆ. ಒಬ್ಬರಿಗೊಬ್ಬರು ಪೂರಕವಾಗಿರಬೇಕು. ಒಬ್ಬರನ್ನು ಇನ್ನೊಬ್ಬರು ಸಂಪೂರ್ಣಗೊಳಿಸಬೇಕು ಎಂಬುದು ಅರ್ಧನಾರೀಶ್ವರ ಪರಿಕಲ್ಪನೆಯ ಅರ್ಥ.

ಮಹಿಳೆ ಪ್ರಕೃತಿಯ ವಿಶೇಷ ಸೃಷ್ಟಿ. ಒಳಗಿನ ಹಾಗೂ ಹೊರಗಿನ

ಕೆಲಸಗಳೆರಡನ್ನೂ ಸಮಾನ ಆಸಕ್ತಿ, ಪ್ರೀತಿ ಹಾಗೂ ದಕ್ಷತೆಯಿಂದ ನಿಭಾಯಿಸುವ ಗುಣ ಸ್ತ್ರೀಯ ವಿಶೇಷತೆ. ಇದಕ್ಕೆಲ್ಲ ಕಾರಣ ಸ್ತ್ರೀಯರಲ್ಲಿರುವ ಮನೋಬಲ. ಮೇಲ್ನೋಟಕ್ಕೆ ಮಹಿಳೆಯ ಮನಸ್ಸು ಮೃದು ಹಾಗೂ ಕೋಮಲವೆಂದು ಅನಿಸಿದರೂ ಅಂತರ್ಯದಲ್ಲಿ ಆಕೆಯ ಸಂಕಲ್ಪಶಕ್ತಿ ದೃಢವಾಗಿರುತ್ತದೆ. ತಾಯಿಯಾಗಿ, ಸೋದರಿಯಾಗಿ, ಪತ್ನಿಯಾಗಿ, ಮಗಳಾಗಿ, ಗೆಳತಿಯಾಗಿ ಹೆಣ್ಣು ನಿರ್ವಹಿಸುವ ಪಾತ್ರಗಳು ಹಲವಾರು. ಆಧುನಿಕ ಯುಗದಲ್ಲಿ ಮಹಿಳೆ ತನ್ನನ್ನು ಎಲ್ಲ ಕ್ಷೇತ್ರಗಳಲ್ಲಿ ತೊಡಗಿಸಿಕೊಂಡಿದ್ದಾಳೆ. ಭಾರತದಲ್ಲಿ ಹೆಣ್ಣಿಗೆ ಸಮಸ್ಯೆಗಳೇನೇ ಇದ್ದರೂ ಅವುಗಳನ್ನೆಲ್ಲ ಪಕ್ಕಕ್ಕಿಟ್ಟು ಮಹಿಳೆ ಎಲ್ಲಾ ರಂಗಗಳಲ್ಲೂ ಪುರುಷರಿಗೆ ಸಮಾನವಾಗಿ ಸಾಧನೆಗಯ್ಯುತ್ತಿದ್ದಾಳೆ. ಸಾಧನೆಯ ಹಾದಿಯಲ್ಲಿ ಸಾಗುತ್ತಿರುವ ಹಲವಾರು ಮಹಿಳೆಯರು ನಮ್ಮೆದುರಿಗಿದ್ದಾರೆ.

ಮಹಿಳೆಯರಿಗೆ ಮೀಸಲಾತಿ ಕೊಡಬೇಕು ಎಂಬ ವಾದವನ್ನು ನಾನು ವೈಯಕ್ತಿಕವಾಗಿ ಒಪ್ಪಿಕೊಳ್ಳುವುದಿಲ್ಲ. ಮೀಸಲಾತಿಯ ದಯೆ ಅಥವಾ ಕರುಣೆ ಮಹಿಳೆಗೆ ಅಗತ್ಯವಿಲ್ಲ. ಏಕೆಂದರೆ ಮಹಿಳೆ ಸಶಕ್ತಳು ಹಾಗೂ ಸಬಲಳು. ಆದರೆ ಬೇಕಿರುವುದು ಸಮಾನ ಅವಕಾಶಗಳು ಹಾಗೂ ಮಹಿಳೆಯ ವಿಭಿನ್ನತೆ ಹಾಗೂ ಅವಳ ಅಸ್ಮಿತೆಯನ್ನು ಅರಿತು ಒಪ್ಪಿಕೊಳ್ಳುವ ಮನೋ ವೈಶಾಲ್ಯತೆ. ಆಗಬೇಕಿರುವುದು ಸಮಾಜದ ದೃಷ್ಟಿಕೋನದಲ್ಲಿ ಪರಿವರ್ತನೆ, ಹೆಣ್ಣುಮಕ್ಕಳನ್ನು ಎರಡನೇದರ್ಜೆ ನಾಗರೀಕರನ್ನಾಗಿ ನೋಡುವ ಪರಿಯಲ್ಲಿ ಬದಲಾವಣೆ.

ಹೆಣ್ಣು ಮಕ್ಕಳೂ ಕೂಡ ಪ್ರತಿಯೊಂದಕ್ಕೂ ಪುರುಷರನ್ನು ಅವಲಂಬಿಸದೇ ತಮ್ಮ ಸ್ವಂತ ವ್ಯಕ್ತಿತ್ವವನ್ನು ಬೆಳೆಸಿಕೊಳ್ಳಬೇಕು. ಜೀವನದ ಎಲ್ಲ ಘಟ್ಟಗಳಲ್ಲಿ ತಂದೆ, ಸಹೋದರ, ಪತಿ ಹಾಗೂ ಮಕ್ಕಳು ತನ್ನನ್ನು ನೋಡಿಕೊಳ್ಳಬೇಕು ಎಂಬ ಮನೋಭಾವ ಹೋಗಬೇಕು. ಸ್ತ್ರೀ ತನ್ನ ಕುಟುಂಬ, ವೃತ್ತಿ ಮತ್ತು ಪ್ರವೃತ್ತಿಗಳಲ್ಲಿ ಆರೋಗ್ಯಕರ ಸಮತೋಲನವನ್ನು ಸಾಧಿಸಿಕೊಂಡು ಹೋಗುವಂತಾದಲ್ಲಿ ತಾನೂ ನೆಮ್ಮದಿಯಾಗಿದ್ದು, ತನ್ನ ಸುತ್ತಲಿನ ಪರಿಸರವನ್ನೂ ನೆಮ್ಮದಿಯಾಗಿಡಲು ಹಾಗೂ ಸಮಾಜಕ್ಕೆ ಅತ್ಯುತ್ತಮ ಕೊಡುಗೆಗಳನ್ನು ನೀಡಲು ಸಾಧ್ಯ.

ಬದಲಾವಣೆ ಎಂಬುದು ವರ್ಷದಲ್ಲಿ ಒಂದು ದಿನ ಮಹಿಳಾ ದಿನಾಚರಣೆಯನ್ನು ಆಚರಿಸಿ ಭಾಷಣ ಮಾಡುವುದರಿಂದ ಆಗದು. ನಮ್ಮ ಮನೋಭಾವಗಳಲ್ಲಿ ಬದಲಾವಣೆಯಾಗಬೇಕು. ಬದಲಾವಣೆ ನಮ್ಮಿಂದಲೇ ಶುರುವಾಗಬೇಕು. ನಮ್ಮ ಮಕ್ಕಳಲ್ಲಿ ಚಿಕ್ಕಂದಿನಿಂದಲೇ ಈ ಸಮಾನತೆಯ ಭಾವವನ್ನು ಬೆಳೆಸಬೇಕು. ನಮ್ಮ ಮನೆಯ ಗಂಡು ಮಕ್ಕಳಿಗೆ ಹೆಣ್ಣನ್ನು ಗೌರವಿಸುವುದನ್ನು ಕಲಿಸಬೇಕು. ಹೆಣ್ಣು ಮಕ್ಕಳಲ್ಲಿ ಅವಳು ಹೆಣ್ಣೆಂಬ ಕೀಳರಿಮೆ ಬರದಂತೆ, ಅವಳ ಶಕ್ತಿಯ ಪರಿಚಯ ಅವಳಿಗೆ ಮಾಡಿಸಬೇಕು. ಹೆಣ್ಣು ಅಥವಾ ಗಂಡು ಎಂಬ ಭೇದ ಮಾಡದೇ ಅವರನ್ನು ಅತ್ಯುತ್ತಮ ನಾಗರಿಕರನ್ನಾಗಿ, ಸಬಲ ಮಾನವರನ್ನಾಗಿ ಬೆಳೆಸಬೇಕು.

ಇಂತಹ ಬದಲಾವಣೆಗಳು ನಮ್ಮ ಸಮಾಜದಲ್ಲಿಬೇಗನೇ ಮೂಡಲಿ. ಈ ಮಹಿಳಾ ದಿನವು ನಮ್ಮಲ್ಲಿ ಹೆಣ್ಣಿನ ಕುರಿತು ಗೌರವ ಭಾವ ಹೆಚ್ಚಿಸಲಿ. ಸಮಾನತೆಗಾಗಿ ಹೆಣ್ಣು ಹೋರಾಡುವಂತಾಗುವುದು ಬೇಡ. ಹೆಣ್ಣಿಗೆ ಭಾರತೀಯ ಸಂಸ್ಕೃತಿಯಲ್ಲಿ ಮೊದಲಿನಿಂದಲೂ ಇದ್ದ ಅವಳ ಅರ್ಹ ಸ್ಥಾನ ದೊರಕಲಿ ಎಂದು ಆಶಿಸೋಣ.

..... 25ನೇ ಪುಟದಿಂದ

35. **ಆರೋಗ್ಯಕರ ಮತ್ತು ಹಸನ್ಮುಖ ವ್ಯಕ್ತಿತ್ವವನ್ನು ಬೆಳೆಸಿಕೊಳ್ಳಿ :** ಬೇಸರ ಪಡುವ ಮನೋಭಾವನೆ ಬಿಟ್ಟು ಪ್ರಸನ್ನರಾಗಿರಿ. ಹೋಲಿಕೆಗೆ ಸಿಲುಕದ ವ್ಯಕ್ತಿ ಅಥವಾ ವಿಷಯಗಳ ಬಗ್ಗೆ ನಿಮ್ಮನ್ನು ಹೋಲಿಸಿಕೊಳ್ಳಬೇಡಿ.
36. **ಕಾಲಕ್ಕೆ ಅನುಗುಣವಾಗಿರಿ :** ತೆರೆದ ಮನಸ್ಸಿನಿಂದ ಹೊರಗಿನ ಪ್ರಪಂಚ ಜ್ಞಾನವನ್ನು ಕಾಲಕಾಲಕ್ಕೆ ಪಡೆಯುತ್ತಿರಿ.
37. ನಿಮ್ಮ ವೃತ್ತಿಯನ್ನು ನೀವು ಆಯ್ಕೆ ಮಾಡಿದಂತೆ ಅದನ್ನು ನೀವು ಯೋಗ್ಯವನ್ನಾಗಿಸಿ. ನೀವು ಆಯ್ಕೆ ಮಾಡಿಕೊಂಡ ವೃತ್ತಿಯನ್ನು ನಂಬಿ ಅದರಲ್ಲಿ ಸಂಪೂರ್ಣವಾಗಿ ತೊಡಗಿಸಿಕೊಂಡು ಜಯಗಳಿಸಿರಿ.
38. **ನೈಜ ಪ್ರತಿಫಲ ನಿಮ್ಮನ್ನು ಕಡೆಗಾಣಿಸುವುದಿಲ್ಲ :** ನೀವು ಅದೃಷ್ಟವಂತರಲ್ಲವೆಂದು ತಿಳಿದಿದ್ದರೂ, ಭೌತಿಕ ಸಂಪತ್ತು ನಿಮ್ಮಿಂದ ತಾತ್ಕಾಲಿಕವಾಗಿ ದೂರವಿದ್ದರೂ, ತಾಳ್ಮೆ ಮತ್ತು ಧೈರ್ಯವನ್ನು ಕಳೆದುಕೊಳ್ಳಬೇಡಿ. ಚೆನ್ನಾಗಿ ನಿರ್ವಹಿಸಿದ ಕರ್ತವ್ಯದಿಂದ ಬರುವ ಸಮಾಧಾನ, ಸಂತೋಷ ಮತ್ತು ಮಾನಸಿಕ ನೆಮ್ಮದಿ ಅತ್ಯಂತ ಶ್ರೇಷ್ಠ.
39. **ನಿಮಗೆ ನೀವು ಸತ್ಯ ನಿಷ್ಠರಾಗಿರಿ :** ನಿಮಗೆ ಹತ್ತಿರದಲ್ಲಿ ಕೆಲಸವನ್ನು ವಿಮರ್ಶಿಸುವ ಮೇಲಾಧಿಕಾರಿ ಇಲ್ಲದಿದ್ದರೂ ನಿಮಗೆ ನೀವೇ ವಿಮರ್ಶಕ ಮತ್ತು ನ್ಯಾಯಮೂರ್ತಿಗಳಾಗಿರಿ.
40. **ವಿನೋಧ ಪ್ರವೃತ್ತಿ ಅಗತ್ಯ :** ಕೆಲವೊಮ್ಮೆ ಕಠಿಣ ಅಥವಾ ದಕ್ಷತೆಯ ಕೆಲಸ ಅಥವಾ ಪ್ರಯತ್ನಗಳು ತಪ್ಪಾಗಿ ನಿಂದನೆ ಬರಬಹುದು. ಕೆಲವು ಸಾರಿ ಸಾಧ್ಯವಾದ ಕೆಲಸದ ನಿಮಿತ್ತ ಪ್ರಶಂಸೆ ಬರಬಹುದು. ಎರಡೂ ಸಂರ್ಭದಲ್ಲಿ ಸಂಯಮ ಚಿತ್ತರಾಗಿ ಇದ್ದಕಾಗಿ ವಿನೋದ ಪ್ರವೃತ್ತ ಅವಶ್ಯಕ.
41. **ಮಾತಿಗಿಂತ ಹೆಚ್ಚಾಗಿ ಕೃತಿಯಲ್ಲಿ ಮೇಲುಗೈ ಪಡೆಯಿರಿ :** ಕಾರ್ಯನಿರ್ವಹಣೆಯಲ್ಲಿ ನಿಖರತೆ, ನಿರ್ದಿಷ್ಟತೆ ಇರಲಿ. ನಿಷ್ಠೆಯಿಂದ ಕಾರ್ಯನಿರ್ವಹಿಸಿ.

Swabhimani Sahakari, Monthly, Publishing Date 5th, Posting Day 8th
posted at Bangalore PSO, Mysore Road, Bangalore-560026
Registered No. KA/BGW/1744/2020-2022 RNI NO. KARBIL-2004/18001/Pages 28
Licensed to post without Prepayment License No. PMG BG/WPP-384/2020-2022.

ವಿಶ್ವದ ಸಹಕಾರ ಚಳುವಳಿಯ ಕೆಲವು ಪ್ರಮುಖ ವಿಷಯಗಳು

– ಶ್ರೀ ಶಂಕರ ಹೆಗಡೆ

1) ಪ್ರಪಂಚದ ನೂರಕ್ಕು ಹೆಚ್ಚು ದೇಶಗಳಲ್ಲಿ 250 ದಶಲಕ್ಷಕ್ಕಿಂತಲೂ ಹೆಚ್ಚು ಸಹಕಾರಿ ಸದಸ್ಯರಿರುತ್ತಾರೆ.

2) ಅಮೆರಿಕಾದ ಮೂರು ನಾಗರೀಕರ ಪೈಕಿ ಒಬ್ಬರು ಸಹಕಾರಿ ಸಂಘದ ಸದಸ್ಯತ್ವವನ್ನು ಪಡೆದಿರುತ್ತಾರೆ.

3) ಬ್ರಿಟನ್ ದೇಶದಲ್ಲಿ ಪತ್ತಿನ ಸಹಕಾರ ಸಂಘಗಳು ಅಂದರೆ ಉಳಿತಾಯ ಮತ್ತು ಲೇವಾದೇವಿ ಸಹಕಾರ ಸಂಘಗಳು ಜನಪ್ರಿಯ ಸಹಕಾರ ಸಂಸ್ಥೆಗಳಾಗಿದ್ದು, ಅತಿ ವೇಗವಾಗಿ ಅಭಿವೃದ್ಧಿ ಹೊಂದುತ್ತಿರುವ ಆರ್ಥಿಕ ಸಂಸ್ಥೆಗಳಾಗಿರುತ್ತವೆ.

4) ಪ್ರಪಂಚದಲ್ಲಿ ಬ್ರಿಟನ್ ದೇಶದ ನಂತರ ಅತಿ ಹೆಚ್ಚಿನ ಬಳಕೆದಾರರ ಸಹಕಾರ ಸಂಘವನ್ನು ಹೊಂದಿರುವ ದೇಶವೆಂದರೆ 'ಜಪಾನ್'.

5) ವಿಶ್ವದ ಸಹಕಾರಿ ಚಳುವಳಿಯ ಶೃಂಗ ಸಂಸ್ಥೆ ಅಂದರೆ ಅಂತರಾಷ್ಟ್ರೀಯ ಸಹಕಾರಿ ಮೈತ್ರಿ ಸಂಸ್ಥೆಯು (ಐ.ಸಿ.ಎ) 1895 ರಲ್ಲಿ ಲಂಡನ್‌ನಲ್ಲಿ ಸ್ಥಾಪಿಸಲ್ಪಟ್ಟಿತ್ತು. ತದ ನಂತರ ಸ್ವಿಡ್ಜರ್‌ಲ್ಯಾಂಡ್ ದೇಶದ ಜಿನಿವಾಕ್ಕೆ ಸ್ಥಳಾಂತರಿಸಲ್ಪಟ್ಟಿತು.

6) ಬ್ರಿಟನ್ ದೇಶದಲ್ಲಿ 1867 ರಲ್ಲಿ ಪ್ರಥಮ ಕೃಷಿ ಸಹಕಾರ ಸಂಘ ನೋಂದಣಿಗೊಂಡಿತ್ತು.

7) ಏಷ್ಯಾ ಖಂಡದಲ್ಲಿ 442 ದಶಲಕ್ಷ ಸಹಕಾರಿ ಸದಸ್ಯರಿರುತ್ತಾರೆ. ಸಹಕಾರಿ ಚಳುವಳಿಯ ಪಿತಾಮಹ ಎಂದು ಹೆಸರುವಾಸಿಯಾಗಿರುವ 'ರಾಬರ್ಟ್ ಓವೆನ್', ಒಬ್ಬ ಸಾಮಾಜಿಕ ಸುಧಾರಕನಾಗಿದ್ದು, ಪ್ರಾರಂಭದಲ್ಲಿ ಸಹಕಾರಿ ನಾಯಕರಿಗೆ ಪ್ರೇರಣೆ ಸ್ಫೂರ್ತಿ ನೀಡಿದ 'ಪಿತಾಮಹನೆಂದು' ಕರೆಯಲ್ಪಡುತ್ತಾನೆ.

8) ಸ್ವೀಡನ್ ದೇಶದಲ್ಲಿ ಎಲ್ಲಾ ಅರಣ್ಯ ಕೈಗಾರಿಕೆಗಳು ಸಹಕಾರಿ ತಳಹದಿಯ ಮೇಲೆ ನಡೆಯುತ್ತದೆ.

9) ಜಪಾನ್ ದೇಶದ ಸಾಮ್ರಾಟನ ಅರಮನೆಯಲ್ಲಿ ನೌಕರರ ಸಲುವಾಗಿಯೇ ಒಂದು ಸಹಕಾರಿ ಸಂಘ ಸ್ಥಾಪಿಸಲ್ಪಟ್ಟಿವೆ.

10) ಇಂಗ್ಲೆಂಡ್ ದೇಶದ 2001ರಲ್ಲಿ ಜರುಗಿದ ಸಂಸದ್ ಚುನಾವಣೆಯಲ್ಲಿ ಅತಿ ಹೆಚ್ಚು ಅಂದರೆ 29 ಸಹಕಾರಿ ಸಂಸದ್ ಸದಸ್ಯರು ಆಯ್ಕೆಗೊಂಡು ದಾಖಲೆ ಸ್ಥಾಪಿಸಿರುತ್ತಾರೆ.

11) 1871 ರಲ್ಲಿ ಸ್ಥಾಪಿತಗೊಂಡ ಸಹಕಾರಿ ಸಮಾಚಾರ (ಕೋ ಆಪರೇಟಿವ್ ನ್ಯೂಸ್) ಪ್ರಪಂಚದ ಅತಿ ದೊಡ್ಡ ಸಹಕಾರಿ ವಾರ್ತಾ ಪತ್ರಿಕೆಯಾಗಿರುತ್ತದೆ.

12) ಕೆನಡಾ ದೇಶದಲ್ಲಿ ಸಂಪೂರ್ಣವಾಗಿ ಗೋಧಿ ವ್ಯಾಪಾರವು ಅಲ್ಲಿಯ ಕೃಷಿ ಸಹಕಾರ ಸಂಘಗಳ ಮುಖಾಂತರವೇ ನಡೆಯುತ್ತದೆ.

13) ಅಂತರಾಷ್ಟ್ರೀಯ ಸುದ್ದಿ ಸಂಸ್ಥೆ (ಏಜೆನ್ಸಿ) ಅಸೋಸಿಯೇಟೆಡ್ ಪ್ರೆಸ್ ಒಂದು ಸಹಕಾರಿ ಸಂಸ್ಥೆಯಾಗಿರುತ್ತದೆ.

14) ಯೂರೋಪ್ ದೇಶದ ಎರಡನೇಯ ಅತಿ ದೊಡ್ಡ ಬ್ಯಾಂಕ್ (ಕ್ರೆಡಿಟ್ ಅಗ್ರಿಕೋಲ್) ಫ್ರಾನ್ಸ್ ದೇಶದ ರೈತರ ಒಡೆತನದ ಸಹಕಾರಿ ಸಂಸ್ಥೆಯಾಗಿರುತ್ತದೆ.

15) ಬ್ರಿಟನ್ ದೇಶದಲ್ಲಿ ಸಹಕಾರ ಸಂಸ್ಥೆಗಳು ಪ್ರತಿ ವರ್ಷ 30 ದಶಲಕ್ಷ ಮದ್ಯದ ಬಾಟಲುಗಳನ್ನು (ಬಾಟಲ್ಸ್ ಆಫ್ ವೈನ್ಸ್) ಮಾರಾಟ ಮಾಡುತ್ತಿವೆ.

16) ಬ್ರಿಟನ್ ದೇಶದಲ್ಲಿ 1872 ರಲ್ಲಿ ಸಹಕಾರಿ ಸಗಟು ಮಾರಾಟ ಸಂಘದಲ್ಲಿ ಸಾಲ ಮತ್ತು ಠೇವಣಿ ವಿಭಾಗ ಮತ್ತು ಹೆಸರಿನಿಂದ ಸಹಕಾರಿ ಬ್ಯಾಂಕ್ ಸ್ಥಾಪಿಸಲ್ಪಟ್ಟಿತ್ತು.

17) ಬ್ರಿಟನ್ ದೇಶದಲ್ಲಿ 1920 ರಲ್ಲಿ ಸಹಕಾರಿ ಸಂಸ್ಥೆಯ 'ಬೆಲ್' ಎಂಬ ಹೆಸರಿನಲ್ಲಿ (ಟ್ರೇಡ್ ಸೀಮ್ ಬೆಲ್) ಬೈಸಿಕಲ್ಲುಗಳನ್ನು, ಮೋಟಾರ್ ಸೈಕಲ್ ಮತ್ತು ಕಾರುಗಳನ್ನು ಉತ್ಪಾದನೆ ಮಾಡಲಾಗುತ್ತಿದೆ.

18) ಹಾಲೆಂಡ್ ದೇಶದಲ್ಲಿ ರೋಟರ್ ಡ್ಯಾಮ್ ಹತ್ತಿರ ಒಂದು ರಾಷ್ಟ್ರೀಯ ಸಹಕಾರಿ ವಸ್ತು ಸಂಗ್ರಹಾಲಯವಿರುತ್ತದೆ.

19) ಡಾ॥ ವಿಲಿಯಮ್ ಕಿಂಗ್ ಎಂಬ ಬ್ರಿಟಿಷ್ ವೈದ್ಯನು ತನ್ನ ಪುಸ್ತಕ ಪ್ರಕಟನೆಯ ಮೂಲಕ ಸಹಕಾರಿ ಸಂಸ್ಥೆಗಳನ್ನು ಪ್ರಾರಂಭಿಸಲು ಅನೇಕ ಕಾರ್ಮಿಕ ಸದಸ್ಯರಿಗೆ ಸ್ಫೂರ್ತಿ ನೀಡಿ ಪ್ರಥಮ ಸಹಕಾರಿ ಪ್ರತಿಪಾದಕ ಎಂಬ ಕೀರ್ತಿಪಾತ್ರನಾಗಿರುತ್ತಾನೆ.

20) ಅಮೆರಿಕಾದಲ್ಲಿ ಬೃಹತ್ ವಿದ್ಯುತ್ ಉತ್ಪಾದನಾ ಕಂಪನಿಗಳು ವಿದ್ಯುತ್ತನ್ನು ಪೂರೈಸಲು ಅಸಮರ್ಥವಾದಾಗ, ಅಮೇರಿಕಾದ ರೈತರು ತಮ್ಮದೇ ಆದ ವಿದ್ಯುತ್ ಉತ್ಪಾದನಾ ಸಹಕಾರ ಸಂಸ್ಥೆಗಳನ್ನು ಪ್ರಾರಂಭಿಸಿದರು.

ಕೇಂದ್ರ ಕಛೇರಿ: ದೂರವಾಣಿ ಸಂಖ್ಯೆಗಳು : 080–23378375–80, 23474408, 23573291
ಸೌಹಾರ್ದ ಸಹಕಾರಿಗಳ ದಾವಾ ಪಂಚಾಯತಿ ನ್ಯಾಯಾಲಯ: ನಂ. 62, 2ನೇ ಮಹಡಿ, 18ನೇ ಕ್ರಾಸ್, 3ನೇ ಮುಖ್ಯ ರಸ್ತೆ (ಮಾರ್ಗೋಸಾ ರಸ್ತೆ), ಪೈಪ್‌ಲೈನ್ ರಸ್ತೆ ಮಲ್ಲೇಶ್ವರಂ, ಬೆಂಗಳೂರು–560010 ದೂ: 080 23449933/34
ಬೆಂಗಳೂರು ಪ್ರಾಂತೀಯ ಕಛೇರಿ: ನಂ 141, 1ನೇ ಮೇನ್, 11ನೇ ಕ್ರಾಸ್, ಡಾ. ರಾಜ್‌ಕುಮಾರ ರಸ್ತೆ, 1–ಕೆ–ಬ್ಲಾಕ್, ರಾಜಾಜಿನಗರ, ಬೆಂಗಳೂರು–560010 ದೂ: 080 23525546.
ಮೈಸೂರು ಪ್ರಾಂತೀಯ ಕಛೇರಿ: ಶಂಕರ ಮಠ ರಸ್ತೆ, 2ನೇ ಕ್ರಾಸ್, ನಟರಾಜ ಸಭಾಭವನದ ಹತ್ತಿರ, ಮೈಸೂರು–570004, ದೂ: 0821 2332299
ಬೆಳಗಾವಿ ಪ್ರಾಂತೀಯ ಕಛೇರಿ: ಸಂಜೋಗ ಬಿಲ್ಡಿಂಗ್, ಪಿ ಅಂಡ್ ಟಿ ಕ್ವಾಟರ್ಸ್ ಹತ್ತಿರ, ಡಬ್ಬಲ್ ರೋಡ್, ಮಹಾಂತೇಶನಗರ, ಬೆಳಗಾವಿ. ದೂರವಾಣಿ: 0831 – 2401551.
ಕಲಬುರಗಿ ಪ್ರಾಂತೀಯ ಕಛೇರಿ: ನಂ 1–4/3 ಎ ಸಂಜೀವರಾವ್ ದೇಸಾಯಿ ಬಡಾವಣೆ, ಕೆ.ಎಸ್.ಆರ್.ಟಿ.ಸಿ. ಗೆಸ್ಟ್‌ಹೌಸ್ ಹಿಂಭಾಗ, ಗಾರ್ಡನ್ ರಸ್ತೆ, ಕಲಬುರಗಿ–585102 ದೂ: 08472–270222

Edited, Printed and Published by Sharangouda G. Patil - Managing Director, on behalf of karnataka state Souharda Federal Co operative Ltd., Nirman Bhavan complex, Dr. Rajkumar Road, 1st Black, Rajajinagar, Bengaluru-560 010